ಸ್ಥಾಪನೆ : 1927

ನೊಂದಣಿ ಸಂ. : 1468
ದಿನಾಂಕ : 29.07.1927

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಛೇರಿ : ನಂ. 2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018
ದೂರವಾಣಿ : 26679041, 26677552, 42047786 26672928
Email : gmcbho@yahoo.co.in / gmcbho@gmail.com | website : www.gmcbank.net

## 95ನೇ ವಾರ್ಷಿಕ ಸರ್ವ ಸದಸ್ಯರ ಸಭೆ

**22-09-2024**
**ಭಾನುವಾರ**

**2023-24ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯವರ ಸಮಜಾಯಿಷಿ**

THE GRAIN MERCHANTS' CO-OPERATIVE BANK LTD.,

**ESTD : 1927**

ನಂ. 2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018
ದೂರವಾಣಿ : 26679041, 26677552, 42047786, 26672928
ನಂ. 247, 2ನೇ ಮಹಡಿ, 7ನೇ ಕ್ರಾಸ್, ಎ.ಪಿ.ಎಂ.ಸಿ. ಯಾರ್ಡ್, ಯಶವಂತಪುರ, ಬೆಂಗಳೂರು – 560022
ದೂರವಾಣಿ : 23370902, 23375264
ನಂ. 231, ಮೊದಲನೇ ಮಹಡಿ, ದೊಡ್ಡಮಠ ಕಾಂಪ್ಲೆಕ್ಸ್, ಅಕ್ಕಿಪೇಟೆ ಮುಖ್ಯರಸ್ತೆ, ಬೆಂಗಳೂರು-560 053
ದೂರವಾಣಿ: 22284297, 22877141

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

## ಆಡಳಿತ ಮಂಡಳಿ



**ಶ್ರೀ ಆರ್.ಪಿ.ಎಂ. ಸತ್ಯನಾರಾಯಣ**
ಅಧ್ಯಕ್ಷರು



**ಶ್ರೀ ಬಿ.ವಿ.ಗೋಪಾಲ ರೆಡ್ಡಿ**
ಉಪಾಧ್ಯಕ್ಷರು



**ಶ್ರೀ ಕೆ.ಎಂ. ಶ್ರೀನಿವಾಸ ಮೂರ್ತಿ**
ನಿರ್ದೇಶಕರು



**ಶ್ರೀ ಎಂ.ಎಸ್.ಪವನ್ ಕುಮಾರ್**
ನಿರ್ದೇಶಕರು



**ಶ್ರೀ ಪಿ.ಎಸ್. ಬಾಲಕೃಷ್ಣ ಶೆಟ್ಟಿ**
ನಿರ್ದೇಶಕರು



**ಶ್ರೀ ಕೆ.ಆರ್. ಕೃಷ್ಣ**
ನಿರ್ದೇಶಕರು



**ಶ್ರೀ ಕೆ.ಸಿ.ರುದ್ರಮೂರ್ತಿ**
ನಿರ್ದೇಶಕರು



**ಶ್ರೀ ಬಿ.ಎಸ್. ಪ್ರಸನ್ನಬಾಬು**
ನಿರ್ದೇಶಕರು



**ಶ್ರೀ ಎನ್.ದಯಾನಂದ**
ನಿರ್ದೇಶಕರು



**ಶ್ರೀ ಪಿ.ಪಳನಿ**
ನಿರ್ದೇಶಕರು



**ಶ್ರೀ ಬಿ.ಎಸ್. ಶ್ರೀರಂಗ**
ನಿರ್ದೇಶಕರು



**ಶ್ರೀಮತಿ ಹೆಚ್.ಸಿ. ನಾಗರತ್ನ**
ನಿರ್ದೇಶಕರು



**ಶ್ರೀಮತಿ ಎನ್.ಮಾಲಿನಿ**
ನಿರ್ದೇಶಕರು



**ಶ್ರೀ ಎಂ. ಮಾರಪ್ಪ**
ನಿರ್ದೇಶಕರು



**ಶ್ರೀ ಹೆಚ್.ಕೆ.ಚಂದ್ರಪ್ಪ**
ನಿರ್ದೇಶಕರು



**ಶ್ರೀ ಬಿ.ವಿ.ಶ್ರೀನಿವಾಸ್**
ವೃತ್ತಿಪರ ನಿರ್ದೇಶಕರು



**ಎನ್.ವೆಂಕಟಾಚಲಂ**
ವೃತ್ತಿಪರ ನಿರ್ದೇಶಕರು



**ಶ್ರೀ ಆನಂದ್ ಎಸ್.ಆರ್**
ಪ್ರಭಾರ ಕಾರ್ಯದರ್ಶಿ
(31.03.2024 ರವರೆಗೆ)



**ಶ್ರೀ ಬಿ.ವಿ. ಮಂಜುನಾಥ್**
ಪ್ರಭಾರ ಕಾರ್ಯದರ್ಶಿ
(09.02.2024–31.07.2024)



**ಶ್ರೀಮತಿ ಆರ್. ಉಮಾ**
ಪ್ರಭಾರ ಕಾರ್ಯದರ್ಶಿ
(01.08.2024 ಇಂದ)

ಸ್ಥಾಪನೆ: 1927 ನೋಂದಣಿ ಸಂ.: 1468

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ : ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018.

ದೂ: 26679041, 26677552, 42047786, 7411414285

Estd:1927

## ೨೦೨೩-೨೪ನೇ ಸಾಲಿನ ೯೫ ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

**ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣರವರ ಅಧ್ಯಕ್ಷತೆಯಲ್ಲಿ 2023-24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ: 22.09.2024 ನೇ ಭಾನುವಾರ ಬೆಳಗ್ಗೆ 10.30ಕ್ಕೆ** ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018 ರಲ್ಲಿ ಇರುವ ಬ್ಯಾಂಕಿನ ಪ್ರಧಾನ ಕಛೇರಿ ಆವರಣದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

## ಕಾರ್ಯಕ್ರಮ

| | ವಿಷಯಗಳು | ಪುಟ ಸಂಖ್ಯೆ |
|---|---|---|
| 01 | ಪ್ರಾರ್ಥನೆ | |
| 02 | ಅಧ್ಯಕ್ಷರಿಂದ ಸ್ವಾಗತ. | 3-4 |
| 03 | 2023-24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು. | 1-2 |
| 04 | ಕಳೆದ ವಾರ್ಷಿಕ ಸರ್ವಸದಸ್ಯರ ಸಭೆಯಿಂದೀಚೆಗೆ ಮೃತರಾದ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ. | 20 |
| 05 | ದಿನಾಂಕ 10.09.2023ರಂದು ನಡೆದ 2022-23ನೇ ಸಾಲಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು. | 5-19 |
| 06 | 2023-24ನೇ ಸಾಲಿನ ಆಡಳಿತ ಮಂಡಳಿ ವರದಿ ಅಂಗೀಕರಿಸುವುದು. | 20-29 |
| 07 | 2023-24ನೇ ಸಾಲಿನ ಲೆಕ್ಕಪರಿಶೋಧಿಸಲ್ಪಟ್ಟ (Audited) ಹಣಕಾಸಿನ ತಃಖ್ತೆ (ಲಾಭ-ನಷ್ಟ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆ) ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯವರ ಸಮಜಾಯಿಷಿಯನ್ನು ಅನುಮೋದಿಸುವುದು. | 30-64 |
| 08 | ಲೆಕ್ಕಪರಿಶೋಧಕರ ದೃಢೀಕರಣದಂತೆ ಸದಸ್ಯತ್ವ ಸೇರ್ಪಡೆ/ವಾಪಾಸಾತಿ ಮತ್ತು ನಿಧಿಗಳ ವಾಸ್ತವಿಕ ಬಳಕೆಯ ಅನುಮೋದನೆ. | 20-22 |
| 09 | 2023-24ನೇ ಸಾಲಿನ ನಿವ್ವಳ ಲಾಭದ ಹಂಚಿಕೆ. | 65 |
| 10 | 2023-24ನೇ ಸಾಲಿಗೆ ಪಡೆಯಲಾದ ಆಯವ್ಯಯ ಹಾಗೂ ಆ ಸಾಲಿನಲ್ಲಿ ಆದ ವೆಚ್ಚಗಳನ್ನೊಳಗೊಂಡಂತೆ 2024-25 ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿ ಮಂಜೂರಾತಿ ಪಡೆಯುವುದು. | 66 |
| 11 | ಬ್ಯಾಂಕಿನ ಉಪನಿಯಮಗಳ (ಬೈಲಾ) ತಿದ್ದುಪಡಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | |
| 12 | ಮೂರು ವರ್ಷ ಮೇಲ್ಪಟ್ಟು ಪಾವತಿಯಾಗದ 2019-20ನೇ ಸಾಲಿನ ಡಿವಿಡೆಂಡ್ ಮೊಬಲಗನ್ನು ಸರ್ವಸದಸ್ಯರ ಸಭೆ ಅನುಮತಿ ಪಡೆದು ಉಪನಿಯಮ ರೀತ್ಯ ಆಪದ್ಧನ ನಿಧಿ (Reserve Fund)ಗೆ ವರ್ಗಾಯಿಸುವ ಬಗ್ಗೆ. | |
| 13 | ವಸೂಲಾಗದ್ದೆಂದು ಪರಿಗಣಿಸಲಾದ ಪ್ರಕರಣಗಳಲ್ಲಿ ಹೋಕುಬಾಕಿ (ಬ್ಯಾಡ್ ಡೆಟ್ಸ್) ಸಾಲಗಳ ಬಗ್ಗೆ ಸೂಕ್ತ ರಿಯಾಯಿತಿ ನೀಡಿ ಆಖೈರುಗೊಳಿಸುವ ಬಗ್ಗೆ. | 25 |
| 14 | ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆ ಮೇರೆಗೆ M/s NNR & Co., ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರುರವರನ್ನು 2024-25ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ಅನುಮೋದಿಸುವ ಬಗ್ಗೆ. | 29 |
| 15 | ಇತರ ಬ್ಯಾಂಕುಗಳಿಂದ ಪಡೆಯಬಹುದಾದ 10 ಕೋಟಿ ರೂ.ಗಳ ಸಾಲದ ಪರಿಮಿತಿಯನ್ನು ಮಂಜೂರು ಮಾಡುವುದು. | |
| 16 | ಮುನ್ಸೂಚನೆಯ ಮೇರೆಗೆ ಬಂದ ಅರ್ಜಿಗಳು ಹಾಗೂ ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಬಹುದಾದ ಇತರೇ ವಿಷಯಗಳು. | |
| 17 | ವಂದನಾರ್ಪಣೆ. | |

**ದಿನಾಂಕ: 28.08.2024**

**ಸ್ಥಳ: ಬೆಂಗಳೂರು**

**ಆಡಳಿತ ಮಂಡಳಿ ಅಪ್ಪಣೆ ಮೇರೆಗೆ**

**ಆರ್. ಉಮಾ, ಪ್ರಭಾರ ಕಾರ್ಯದರ್ಶಿ**

# ಸೂಚನೆ

01. 2023-24 ರ ಆಡಳಿತ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯ ವಿವರಗಳು ದಿನಾಂಕ 12.09.2024ರ ನಂತರ ಬ್ಯಾಂಕಿನ ವೆಬ್‌ಸೈಟ್ **www.gmcbank.net** ನಲ್ಲಿ ಪ್ರಕಟಿಸಲಾಗುವುದು ಹಾಗೂ ವರದಿ ಪುಸ್ತಕಗಳನ್ನು ಪ್ರಧಾನ ಕಛೇರಿ/ಶಾಖೆಗಳ ಕೆಲಸದ ವೇಳೆಯಲ್ಲಿ ಪಡೆಯಬೇಕಾಗಿ ಕೋರಿದೆ.

02. ಸರ್ವಸದಸ್ಯರ ಸಭೆಯ ವಿಷಯದ ಕುರಿತು ಚರ್ಚಿಸುವುದಿದ್ದಲ್ಲಿ/ಸ್ಪಷ್ಟೀಕರಣ/ಸಲಹೆ ಸೂಚನೆಗಳಿದ್ದಲ್ಲಿ ಐದು ದಿವಸ ಮುಂಚಿತವಾಗಿ ಲಿಖಿತ ಮೂಲಕ ಬ್ಯಾಂಕಿಗೆ ಸಲ್ಲಿಸಿದಲ್ಲಿ ಆದ್ಯತೆ ಮೇರೆ ಅಧ್ಯಕ್ಷರ ಅನುಮತಿ ಮೇರೆಗೆ ಸರ್ವಸದಸ್ಯರ ಸಭೆಯಲ್ಲಿ ಸಮಜಾಯಿಷಿ ನೀಡಿ, ದಾಖಲಿಸಲಾಗುವುದು.

03. ಕರ್ನಾಟಕ ಸಹಕಾರ ಸಂಘಗಳ ಕಾನೂನು 1959ರ ಕಲಂ 20(2) (ಎ iii) ಹಾಗೂ ಬ್ಯಾಂಕಿನ ಬೈಲಾ ಸಂಖ್ಯೆ 47(5) (ಡಿ) ಪ್ರಕಾರ ದಿನಾಂಕ 21.09.2023 ರ ನಂತರ ಬ್ಯಾಂಕಿನ ಸದಸ್ಯತ್ವವನ್ನು ಪಡೆದಿರುವಂತಹ ಸದಸ್ಯರುಗಳಿಗೆ ಬ್ಯಾಂಕಿನ ಈ ಸರ್ವಸದಸ್ಯರ ಸಭೆಯಲ್ಲಿ ಮತ ಚಲಾಯಿಸಲು ಹಕ್ಕಿರುವುದಿಲ್ಲ.

04. ಬ್ಯಾಂಕಿನ ಉಪವಿಧಿ ಸಂಖ್ಯೆ 19(3)ರನ್ವಯ ಬ್ಯಾಂಕಿನ ಯಾರೇ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದಿದ್ದಲ್ಲಿ ಮತ್ತು ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯನು ಒಂದು ವರ್ಷದವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಹಾಗೂ ಕೆ.ವೈ.ಸಿ ಪಾಲನೆ ಕಡ್ಡಾಯವಾಗಿರುತ್ತದೆ

05. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ತಿದ್ದುಪಡಿಗೊಂಡು ಕಲಂ 26ಎ ರ ಅನ್ವಯ, ಬ್ಯಾಂಕಿನಲ್ಲಿ ಹತ್ತು ವರ್ಷ ಅವಧಿಗೂ ಮೀರಿ ಚಾಲ್ತಿಯಲ್ಲಿಲ್ಲದ ಉಳಿತಾಯ ಖಾತೆ, ಚಾಲ್ತಿ ಖಾತೆ, ಠೇವಣಿ ಬಾಕಿ ಹೊಂದಿರುವ ಯಾವುದೇ ಖಾತೆಗಳಲ್ಲಿ ಜಮಾ ಇರುವ ಮೊತ್ತವನ್ನು ಮತ್ತು ಅವಧಿ ಮುಗಿದು ಹತ್ತು ವರ್ಷಗಳಿಗೂ ಮೀರಿ ಸಂದಾಯವಾಗದ ಠೇವಣಿಗಳನ್ನು ರಿಸರ್ವ್ ಬ್ಯಾಂಕಿನಲ್ಲಿನ DEAFಗೆ ವರ್ಗಾವಣೆ ಮಾಡುವುದು ಕಡ್ಡಾಯವಾಗಿದೆ. ಕಾರಣ ತಾವು ಬ್ಯಾಂಕಿನಲ್ಲಿ ಹೊಂದಿರುವ ಠೇವಣಿಗಳನ್ನು ಅವಧಿ ಮುಗಿದ ಕೂಡಲೇ ನವೀಕರಿಸಿಕೊಳ್ಳಬೇಕು ಹಾಗೂ ಇತರ ಖಾತೆಗಳನ್ನು (ಉಳಿತಾಯ/ಚಾಲ್ತಿ ಇತ್ಯಾದಿ) ಚಲಾವಣೆಯಲ್ಲಿ ಇಟ್ಟುಕೊಳ್ಳಬೇಕು. ತಪ್ಪಿದಲ್ಲಿ ಅಂತಹ ಮೊತ್ತವನ್ನು ರಿಸರ್ವ್ ಬ್ಯಾಂಕಿನ DEAF ಖಾತೆಗೆ ವರ್ಗಾಯಿಸಲಾಗುವುದು.

06. ಭಾರತೀಯ ರಿಸರ್ವ್ ಬ್ಯಾಂಕಿನ ಮಾಹಿತಿಗಾಗಿ ಬ್ಯಾಂಕಿನ ಸದಸ್ಯರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಿಖ್, ಮುಸ್ಲಿಂ, ಕ್ರಿಶ್ಚಿಯನ್, ಜೋರೋಆಸ್ಟ್ರಿಯನ್ ಮತ್ತು ಬೌದ್ಧ ಧರ್ಮಕ್ಕೆ ಸೇರಿದ್ದಲ್ಲಿ ದಾಖಲಾತಿಗಳೊಂದಿಗೆ ವಿವರಗಳನ್ನು ಬ್ಯಾಂಕಿಗೆ ಸಲ್ಲಿಸಲು ಕೋರಲಾಗಿದೆ.

07. ಬ್ಯಾಂಕಿನ ಪ್ರತಿ ಠೇವಣಿದಾರರ ರೂ.5.00 ಲಕ್ಷ ಮೊತ್ತದ ವರೆಗಿನ ಠೇವಣಿಗಳು "ಡಿಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟೀ ಕಾರ್ಪೊರೇಷನ್ ಆಫ್ ಇಂಡಿಯಾ, ಮುಂಬಯಿ" (DICGC, Mumbai) ರವರಿಂದ ವಿಮೆಗೊಳಪಟ್ಟಿವೆ. ನಷ್ಟದಿಂದಾಗಿ ಸಮಾಪನಗೊಂಡಲ್ಲಿ ಠೇವಣಿ ವಿಮಾ ಯೋಜನೆಯಿಂದ ಅಂತಹ ಬ್ಯಾಂಕಿನ ಪ್ರತಿ ಗ್ರಾಹಕನ ರೂ.5.00 ಲಕ್ಷಗಳವರೆಗಿನ ಠೇವಣಿಯು ವಿಮೆಗೊಳಪಟ್ಟಿರುತ್ತದೆ.

08. ರಿಸರ್ವ್ ಬ್ಯಾಂಕ್ ನೀಡಿರುವ **"ನಿಮ್ಮ ಗ್ರಾಹಕರನ್ನು ತಿಳಿಯಿರಿ"** (Know Your Customer) ನಿರ್ದೇಶನವು ಬ್ಯಾಂಕಿನ ಪ್ರತಿ ಸದಸ್ಯ/ಗ್ರಾಹಕರಿಗೂ ಕಡ್ಡಾಯವಾಗಿರುತ್ತದೆ. ಈ ಬಗ್ಗೆ ಹಲವಾರು ವರ್ಷಗಳಿಂದ ಸರ್ವಸದಸ್ಯರ ಸಭೆಗಳ ಮೂಲಕ ತಿಳುವಳಿಕೆ ನೀಡುತ್ತಾ ಬರಲಾಗಿದೆ. ಆದಾಗ್ಯೂ ಹಲವಾರು ಸದಸ್ಯತ್ವ/ಖಾತೆಗಳ ಕೆ.ವೈ.ಸಿ ವಿವರಗಳು ಸಲ್ಲಿಕೆಯಾಗಿರುವುದಿಲ್ಲ. ಬ್ಯಾಂಕಿನ ಸದಸ್ಯ/ಗ್ರಾಹಕರು ತಮ್ಮ ಭಾವಚಿತ್ರವಿರುವ ವಿಳಾಸ ದೃಢೀಕರಣ, ಆಧಾರ್ ಕಾರ್ಡ್–PAN ಕಾರ್ಡ್ (ಜೋಡಣೆ ಕಡ್ಡಾಯ), ಫೋಟೋ ವಗೈರೆ ದಾಖಲಾತಿಗಳ ಪ್ರತಿಗಳನ್ನು ಒದಗಿಸಿ ಬ್ಯಾಂಕಿನ ಸೇವೆಯಲ್ಲಿ ಆಗಬಹುದಾದ ತೊಂದರೆಗಳನ್ನು ನಿವಾರಿಸಲು ಸಹಕರಿಸಬೇಕಾಗಿ ವಿನಂತಿ.

09. ಬ್ಯಾಂಕ್ HDFC ಬ್ಯಾಂಕ್‌ನ ಸಹಯೋಗದೊಂದಿಗೆ "Rupay ATM Card" ಸೌಲಭ್ಯ ಒದಗಿಸಿದ್ದು ಸದಸ್ಯರುಗಳು ಹಾಗೂ ಗ್ರಾಹಕರುಗಳು ತಮ್ಮ ಉಳಿತಾಯ/ಚಾಲ್ತಿ ಖಾತೆಗೆ ಸಂಬಂಧಿಸಿದಂತೆ ATM Card ಪಡೆದು ದೇಶಾದ್ಯಂತ ಯಾವುದೇ ಬ್ಯಾಂಕಿನ ATM ನಿಂದ ಹಣ ಪಡೆಯಲು ಅಥವಾ ಸಾಮಾನು ಖರೀದಿಸಲು ಈ ಕಾರ್ಡ್ ಬಳಸಬಹುದಾಗಿದೆ.

10. ಬ್ಯಾಂಕ್ IDBI ಬ್ಯಾಂಕ್‌ನ ಸಹಯೋಗದೊಂದಿಗೆ ಗ್ರಾಹಕರುಗಳಿಗೆ RTGS/NEFT ಸೌಲಭ್ಯ ಒದಗಿಸಿದೆ. ಈ ಸೌಲಭ್ಯದಿಂದ ಹಣ ವರ್ಗಾಯಿಸಿಕೊಳ್ಳಲು ಅಥವಾ ಯಾವುದೇ ಬ್ಯಾಂಕಿಗೆ ಹಣ ವರ್ಗಾವಣೆ ಮಾಡಬಹುದಾಗಿದ್ದು, ತಮ್ಮ ಅವಶ್ಯಕತೆಗೆ ಉಪಯೋಗಿಸಿಕೊಳ್ಳಲು ಮನವಿ ಮಾಡಿದೆ.

11. ಆದಾಯ ತೆರಿಗೆ ಕಾಯ್ದೆ ಅನ್ವಯ ಬ್ಯಾಂಕಿನ ಠೇವಣಿದಾರರು ತಮ್ಮ ಠೇವಣಿಗಳ ಮೇಲೆ ವರ್ಷಕ್ಕೆ ಸಾಮಾನ್ಯರು ರೂ.40,000/-, ಹಿರಿಯ ನಾಗರೀಕರು ರೂ.50,000/- ಗಳಿಗೂ ಹೆಚ್ಚಿನ ಬಡ್ಡಿಯನ್ನು ಪಡೆಯುತ್ತಿದ್ದಲ್ಲಿ, ಅಂತಹ ಒಟ್ಟು ಮೊತ್ತದ ಮೇಲೆ ತೆರಿಗೆಯನ್ನು ಮೂಲದಲ್ಲಿ ಕಡಿತ (TDS) ಗೊಳಿಸಬೇಕಾಗುತ್ತದೆ. ಠೇವಣಿದಾರರುಗಳು ಆದಾಯ ತೆರಿಗೆ ವಿನಾಯಿತಿ ಮಿತಿಯೊಳಗೆ ವಾರ್ಷಿಕ ಆದಾಯ ಹೊಂದಿದ್ದಲ್ಲಿ 15 G (ಸಾಮಾನ್ಯ ನಾಗರೀಕರು) ಹಾಗೂ 15 H (ಹಿರಿಯ ನಾಗರೀಕರು) ಫಾರಂಗಳನ್ನು ಸಲ್ಲಿಸಿ ತೆರಿಗೆ ಕಡಿತದಿಂದ (TDS) ವಿನಾಯಿತಿ ಪಡೆಯಬಹುದಾಗಿದೆ. ಇತ್ತೀಚಿನ ಆದಾಯ ತೆರಿಗೆ ಕಾಯ್ದೆಯನ್ವಯ ಬ್ಯಾಂಕ್ ಖಾತೆ ನಿರ್ವಹಣೆಗೆ ಪಾನ್ ಕಾರ್ಡ್‌ಗೆ ಆಧಾರ್ ಕಾರ್ಡ್ ಜೋಡಣೆ ಕಡ್ಡಾಯವಾಗಿದ್ದು, ಜೋಡಣೆಯಾಗಿಲ್ಲದಿದ್ದಲ್ಲಿ ಶೇ.20ರ ಟಿಡಿಎಸ್ ಕಡಿತಗೊಳ್ಳುವುದಲ್ಲದೇ ಬ್ಯಾಂಕ್ ವಹಿವಾಟಿಗೂ ತೊಡಕಾಗಲಿದೆ. ಈ ಬಗ್ಗೆ ಗ್ರಾಹಕರು ಎಚ್ಚರವಹಿಸಲು ಕೋರಿದೆ.

### ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರೋತ್ಸಾಹ ನೀಡುವ ಬಗ್ಗೆ

2023-24ನೇ ಸಾಲಿನಲ್ಲಿ ಶೇ.60ಕ್ಕೂ ಹೆಚ್ಚಿನ ಅಂಕಗಳಿಸಿ ಎಸ್.ಎಸ್.ಎಲ್.ಸಿ, ದ್ವಿತೀಯ ಪಿ.ಯು.ಸಿ, ಉಳಿದಂತೆ ಪದವಿ, ಸ್ನಾತಕೋತ್ತರ, ಇಂಜಿನೀಯರಿಂಗ್, ವೈದ್ಯಕೀಯ, ಸಿ.ಎ, ಮುಂತಾದವುಗಳ **ಅಂತಿಮ ಪರೀಕ್ಷೆ**ಯ ಮೊದಲನೆ ಪ್ರಯತ್ನದಲ್ಲಿ ಉತ್ತಮ ಅಂಕಗಳನ್ನು ಪಡೆದು "ಎ" ತರಗತಿಯಲ್ಲಿ ತೇರ್ಗಡೆಯಾದ, ಬ್ಯಾಂಕಿನ ಸದಸ್ಯರು ತಮ್ಮ ಮಕ್ಕಳ ಅಂಕಪಟ್ಟಿ, ಭಾವಚಿತ್ರ, ದೂರವಾಣಿ ಸಂಖ್ಯೆಯೊಂದಿಗೆ **ದಿನಾಂಕ 18.09.2024** ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

ಬಂದಂತಹ ಅರ್ಜಿಗಳನ್ನು ಅರ್ಹತೆ ಆಧಾರದ ಮೇಲೆ ಪರಿಗಣಿಸಿ, ಅರ್ಹರಾದ ಸದಸ್ಯರ ಮಕ್ಕಳಿಗೆ ದಿನಾಂಕ 22.09.2024 ರ ಭಾನುವಾರದಂದು ಬೆಳಿಗ್ಗೆ 9.00 ಘಂಟೆಗೆ ನಡೆಯುವ **"ಪ್ರತಿಭಾ ಪುರಸ್ಕಾರ ಕಾರ್ಯಕ್ರಮ"** ದಲ್ಲಿ ಪುರಸ್ಕಾರ ವಿತರಿಸಲಾಗುವುದು (**ಸದಸ್ಯರುಗಳೊಂದಿಗೆ ಅರ್ಹ ವಿದ್ಯಾರ್ಥಿಗಳು ಹಾಜರಿರತಕ್ಕದ್ದು**). ಈ ಬಗ್ಗೆ ಆಡಳಿತ ಮಂಡಳಿ ತೀರ್ಮಾನವೇ ಅಂತಿಮವಾಗಿರುತ್ತದೆ.

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

## ಅಧ್ಯಕ್ಷರಿಂದ ಸ್ವಾಗತ ನುಡಿ

ಬ್ಯಾಂಕಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಗೆ ತಮ್ಮೆಲ್ಲರನ್ನೂ ಆಡಳಿತ ಮಂಡಳಿ ಪರವಾಗಿ ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

ಬ್ಯಾಂಕಿಂಗ್ ಕ್ಷೇತ್ರದ ತಂತ್ರಜ್ಞಾನವು ಹೊಸ ಹೊಸ ಆವಿಷ್ಕಾರದಿಂದ ವೇಗದಲ್ಲಿ ಮುನ್ನಡೆಯುತ್ತಿದೆ. ಅಂತೆಯೇ, ಬ್ಯಾಂಕಿಂಗ್ ವ್ಯವಸ್ಥೆಯು ಸಂಪೂರ್ಣ ಗಣಕೀಕರಣಗೊಳಿಸುವ ನಿಟ್ಟಿನಲ್ಲಿ ವ್ಯವಹಾರದ ಪ್ರತಿಯೊಂದು ವಹಿವಾಟು ತಂತ್ರಾಂಶದಡಿ ಲಭ್ಯವಾಗುವ ರೀತಿಯಲ್ಲಿ ಕೋರ್ ಬ್ಯಾಂಕಿಂಗ್ ಸಿಸ್ಟಂ ಅನ್ನು ಅಳವಡಿಸಿ, ತಂತ್ರಾಂಶದ ಗುಣಮಟ್ಟ, ಹತೋಟಿ ಇವುಗಳ ಮಾರ್ಗಸೂಚಿಯನ್ನು ಪಾಲಿಸಲಾಗುತ್ತಿದೆ. ಬ್ಯಾಂಕಿಂಗ್ ಹಣಕಾಸು ವಹಿವಾಟಿನ ರಕ್ಷಣೆಗೆ ಪ್ರತ್ಯೇಕ ಸೈಬರ್ ಸೆಕ್ಯೂರಿಟಿ ಪಾಲಿಸಿಗಳನ್ನು ಜಾರಿಗೊಳಿಸಿದ್ದು, ಈ ಬೆಳವಣಿಗೆಗಳು ಶೀಘ್ರ ನಗದು ವರ್ಗಾವಣೆಗೆ ಅನುಕೂಲಕವಾಗಲಿವೆ. RTGS/NEFT ಮತ್ತು SMS, BALANCE ENQUIRY, ಎ.ಟಿ.ಎಂ ಕಾರ್ಡ್ ಸೌಲಭ್ಯಗಳನ್ನು ಒದಗಿಸಲಾಗಿದೆ. ಹಾಲಿ ಪ್ರಸಕ್ತ ಸಾಲಿನಲ್ಲಿ ಮೊಬೈಲ್ ಬ್ಯಾಂಕಿಂಗ್, ಯುಪಿಐ ಪೇಮೆಂಟ್ಸ್ (POS/E-Com, GPay, PhonePe, Paytm), IMPS ನಂತಹ ಡಿಜಿಟಲ್ ಸೌಲಭ್ಯಗಳನ್ನೂ ಸಹ ಜಾರಿಗೊಳಿಸಿದ್ದು ಸದಸ್ಯರು/ಗ್ರಾಹಕರುಗಳು ಇದರ ಸದುಪಯೋಗಿಸಿಕೊಳ್ಳಬೇಕೆಂದು ಕೋರುತ್ತೇವೆ. ಬ್ಯಾಂಕಿಗೆ ಅವಶ್ಯವಿರುವ ಪಾಲಿಸಿಗಳನ್ನು ತಜ್ಞರ ಸಹಕಾರದಿಂದ ಸಿದ್ದಪಡಿಸಿ, ಅವುಗಳ ಜಾರಿಗೆ ಅವಶ್ಯ ಕ್ರಮವಿಡಲಾಗಿದೆ.

ಇತ್ತೀಚಿನ ಕೆಲ ಸಹಕಾರ ಬ್ಯಾಂಕುಗಳ ವಿಫಲತೆಯಿಂದಾಗಿ, ಎಲ್ಲಾ ಬ್ಯಾಂಕುಗಳನ್ನು ಅನುಮಾನದ ದೃಷ್ಟಿಯಿಂದ ನೋಡುವಂತಾಗಿದೆ. ಇದರಿಂದಾಗಿ ಸಹಕಾರ ಬ್ಯಾಂಕುಗಳೊಡನೆ ವ್ಯವಹರಿಸಲು ಗ್ರಾಹಕರು ಹಿಂದೇಟು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕಾರಣದಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಆರ್ಥಿಕ ಶಿಸ್ತಿಗೆ ಕೆಲ ಕಟ್ಟುನಿಟ್ಟಿನ ಕ್ರಮಕೈಗೊಂಡ ಪರಿಣಾಮವಾಗಿ ಸಹಕಾರ ಬ್ಯಾಂಕುಗಳು ಚೇತರಿಸಿಕೊಳ್ಳುವಂತಾಗಿದೆ. ಈ ಎಲ್ಲಾ ಘಟನಾವಳಿಗಳ ಹೊರತಾಗಿಯೂ ಹಾಗೂ ಇತ್ತೀಚಿನ ಆರ್ಥಿಕ ಬದಲಾವಣೆಗಳ ಮಧ್ಯೆಯೂ ನಮ್ಮ ಬ್ಯಾಂಕಿನ ವಹಿವಾಟು ಮತ್ತು ಲಾಭ ಗಳಿಕೆ ಉತ್ತಮವಾಗಿ ಪ್ರಗತಿಯತ್ತ ಮುನ್ನಡೆಯುತ್ತಿದ್ದು, ಬ್ಯಾಂಕಿನ ಗ್ರಾಹಕರು, ಠೇವಣಿದಾರರು ತಮ್ಮ ವಹಿವಾಟನ್ನು ಬ್ಯಾಂಕಿನಲ್ಲಿ ನಡೆಸುವ ಮೂಲಕ ಬ್ಯಾಂಕಿನ ಮೇಲಿನ ವಿಶ್ವಾಸ ವೃದ್ಧಿಸಿ, ಪ್ರಗತಿಗೆ ಕಾರಣರಾಗುತ್ತಾ ಬಂದಿರುತ್ತಾರೆ. ಅವರ ಸಹಕಾರವನ್ನು ಎಂದಿಗೂ ಸ್ಮರಿಸುತ್ತೇವೆ. ಅಲ್ಲದೇ ಸದಸ್ಯರು ಬ್ಯಾಂಕಿನ ಕನಿಷ್ಟ ವಹಿವಾಟು ನಡೆಸುವುದು, ಸರ್ವಸದಸ್ಯರ ಸಭೆಗಳಲ್ಲಿ ಭಾಗವಹಿಸುವುದು ಸಹಕಾರಿ ಕಾಯ್ದೆಯನ್ವಯ ಕಡ್ಡಾಯವಾಗಿರುತ್ತದೆ. ಆದ್ದರಿಂದ ಬ್ಯಾಂಕಿನಿಂದ ನೀಡುವ ಸೌಲಭ್ಯಗಳನ್ನು ಪಡೆಯಲು ಕಡ್ಡಾಯವಾಗಿ ಖಾತೆಯನ್ನು ತೆರೆದು ವ್ಯವಹರಿಸಲು ವಿನಂತಿಸುತ್ತೇನೆ. ಈ ಮೂಲಕ ಬ್ಯಾಂಕ್ ಇನ್ನಷ್ಟು ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ.

ಅನುತ್ಪಾದಕ ಪ್ರಮಾಣದ ಮಿತಗೊಳಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚಿಗೆ ವಾಣಿಜ್ಯ ಬ್ಯಾಂಕುಗಳಂತೆ ಸಹಕಾರ ಬ್ಯಾಂಕುಗಳಲ್ಲಿಯೂ Technical Write-off, OTS, Compromise Settlement ಗಳಂತಹ ನಿಯಮಾವಳಿಗಳನ್ನು ಜಾರಿಗೊಳಿಸಿದ್ದು, ಈ ನಿಯಮಾವಳಿಗಳಡಿ ಅನುತ್ಪಾದಕ ಸುಸ್ತಿ ಪ್ರಮಾಣ ಮಿತಗೊಳಿಸಲು ಸಹಕಾರಿಯಾಗಿದ್ದು, ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ.

2023-24ನೇ ವರ್ಷಾಂತ್ಯಕ್ಕೆ ರೂ.848.18 ಲಕ್ಷಗಳ ಷೇರು ಸಂಗ್ರಹಣೆ, ರೂ.6881.24 ಲಕ್ಷಗಳ ಆಪದ್ಧನ ಮತ್ತು ಇತರೆ ನಿಧಿಗಳ ಕ್ರೋಢೀಕರಣ, ಸದಸ್ಯರು/ಗ್ರಾಹಕರುಗಳಲ್ಲಿ ಮಿತವ್ಯಯ ಹಾಗೂ ಉಳಿತಾಯ ಮನೋಭಾವನೆ ಬೆಳೆಸುತ್ತಾ ರೂ.14418.70 ಲಕ್ಷಗಳ ಠೇವಣಿ ಸಂಗ್ರಹಣೆ, ಒಟ್ಟಾರೆ ರೂ.22877.45 ಲಕ್ಷಗಳ ದುಡಿಯುವ ಬಂಡವಾಳ ಕ್ರೋಢೀಕರಣ, ಸದಸ್ಯರುಗಳಿಗೆ ರೂ.9577.41 ಲಕ್ಷಗಳ ಸಾಲ ಸೌಲಭ್ಯ, ರೂ.11390.09 ಲಕ್ಷಗಳ ಗುಂತಾಯಗಳ ಹೂಡಿಕೆ, ರೂ.272.17 ಲಕ್ಷಗಳ ನಿವ್ವಳ ಲಾಭಗಳಿಕೆ ಮತ್ತು ಶೇಕಡ ಶೂನ್ಯ ನಿವ್ವಳ ಅನುತ್ಪಾದಕ ಸಾಲಗಳು ಹೀಗೆ ಬ್ಯಾಂಕಿನ ವಹಿವಾಟಿನಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಈ ಎಲ್ಲಾ ಸಾಧನೆಗಳು ತಮ್ಮ ಸಹಕಾರದಿಂದ ಸಾಧ್ಯವಾಯಿತೆಂದು ತಿಳಿಸಲು ಇಚ್ಛಿಸುತ್ತೇನೆ.

ಸಾಲ ಬೆಳವಣಿಗೆ ಹೆಚ್ಚಿಸುವ ನಿಟ್ಟಿನಲ್ಲಿ ಬಡ್ಡಿ ದರಗಳ ಪರಿಷ್ಕರಣೆ, ಶೀಘ್ರ ಅರ್ಜಿ ವಿಲೇವಾರಿ ಕ್ರಮ ಅಳವಡಿಸಿಕೊಳ್ಳಲಾಗಿದೆ. ಬ್ಯಾಂಕಿನ ಇತಿಹಾಸ, ಷೇರು ಬಂಡವಾಳ, ನಿಧಿ ಕ್ರೋಢೀಕರಣ, ಲಾಭ ಗಳಿಕೆ ಸಾಮರ್ಥ್ಯ, ಉತ್ತಮ ಸಾಲ ನೀತಿ ಇತ್ಯಾದಿಗಳನ್ನು ಗಮನಿಸಿ ನಮ್ಮೊಂದಿಗೆ ಮುಂದುವರಿಯಲು ಮತ್ತು ತಮ್ಮ ಬಂಧು-ಮಿತ್ರರನ್ನು ಬ್ಯಾಂಕಿಗೆ ಪರಿಚಯಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಲು ವಿನಂತಿಸುತ್ತೇನೆ.

ಬ್ಯಾಂಕ್ ಆರ್ಥಿಕ ಸಾಲಿನ ದಿನಾಂಕ 31.03.2024ಕ್ಕೆ ಗಮನಾರ್ಹ ಪ್ರಗತಿ ಸಾಧಿಸಿ, ರೂ.2.72 ಕೋಟಿ ನಿವ್ವಳ ಲಾಭ ಗಳಿಸಿ, ಈ ಆರ್ಥಿಕ ಸಾಲು ಸೇರಿದಂತೆ ಕಳೆದ ನಾಲ್ಕಾರು ವರ್ಷಗಳಿಂದ ಲೆಕ್ಕಪರಿಶೋಧನಾ ವರ್ಗೀಕರಣ "ಎ" ದರ್ಜೆಗೆ ಮುಂದುವರೆದು Financially Sound & Well Managed Bank (FSWM) ಮಾನದಂಡದಡಿ ಮುಂದುವರೆದಿರುವುದು ಹರ್ಷದ ವಿಚಾರವಾಗಿದೆ. ಆದಾಗ್ಯೂ ಮುಂದಿನ ದಿನಗಳಲ್ಲಿ ಈ ಸವಾಲುಗಳ ಮಧ್ಯೆ ಈ ಪ್ರಗತಿಯನ್ನು ಮುಂದುವರಿಸಿಕೊಂಡು ಹೋಗುವುದಲ್ಲದೇ ಶಾಖೆಗಳನ್ನು ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕ್ ಸ್ವತಂತ್ರತೆ ನೀಡಿದ್ದು, ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಶ್ರಮವಹಿಸಿ ಪ್ರಗತಿಯತ್ತ ಕೊಂಡೊಯ್ಯುವ ಭರವಸೆ ನೀಡುತ್ತಿದ್ದೇವೆ. ಮಾನ್ಯ ಸದಸ್ಯರುಗಳು ಬ್ಯಾಂಕಿನ ಮೇಲಿಟ್ಟಿರುವ ನಂಬಿಕೆ ಹಾಗೂ ಅವರು ನೀಡುತ್ತಿರುವ ಸಹಕಾರವನ್ನು ಪರಿಗಣಿಸಿ 2023-24ನೇ ಸಾಲಿಗೆ ಶೇ.20ರ ಡಿವಿಡೆಂಡ್ ವಿತರಣೆಗೆ ಆಡಳಿತ ಮಂಡಳಿ ನಿಶ್ಚಯಿಸಿದ್ದು, ಇದರ ವಿತರಣೆಗೆ ಸರ್ವಸದಸ್ಯರ ಸಭೆಯ ಒಪ್ಪಿಗೆ ಕೋರುತ್ತೇನೆ.

2023-24ನೇ ಸಾಲಿನ ಲೆಕ್ಕಪರಿಶೋಧರಿಂದ ದೃಢೀಕರಿಸಿದ ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆ, ನಿವ್ವಳ ಲಾಭದ ವಿಲೇವಾರಿ, ಆಯ-ವ್ಯಯ ಪಟ್ಟಿ, ಆಡಳಿತ ಮಂಡಳಿ ವರದಿ ಮತ್ತು ಸಮಜಾಯಿಷಿಗಳೊಂದಿಗೆ ಲೆಕ್ಕಪರಿಶೋಧನಾ ವರದಿ ಇವುಗಳನ್ನು ತಮಗೆ ಒದಗಿಸಿದ್ದು, ಸರ್ವಸದಸ್ಯರ ಸಭೆಯಲ್ಲಿ ತಾವುಗಳು ಸಕ್ರಿಯವಾಗಿ ಪಾಲ್ಗೊಂಡು ಅನುಮೋದಿಸಬೇಕೆಂದು, ಬ್ಯಾಂಕಿನ ಪ್ರಗತಿಗೆ ತಮ್ಮ ಸಲಹೆ ಹಾಗೂ ಸೂಚನೆಗಳನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ. ಬ್ಯಾಂಕಿನ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ಸಮಯವನ್ನು ವಿನಿಯೋಗಿಸಿ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸಹಕರಿಸುತ್ತಿರುವ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಸದಸ್ಯರನ್ನು ಸರ್ವಸದಸ್ಯರ ಸಭೆಗೆ ಮತ್ತೊಮ್ಮೆ ಸ್ವಾಗತ ಕೋರಿ ಇಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆ ನೀಡಿ, ಮಂಡಿಸಿರುವ ಕಾರ್ಯಸೂಚಿಗಳಿಗೆ ಅನುಮೋದನೆ ನೀಡಿ ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಮಾನ್ಯ ಸದಸ್ಯರುಗಳಲ್ಲಿ ವಿನಮ್ರವಾಗಿ ಕೋರುತ್ತೇನೆ.

ತಮ್ಮ ವಿಶ್ವಾಸಿ

**ಆರ್.ಪಿ.ಎಂ.ಸತ್ಯನಾರಾಯಣ**

ಅಧ್ಯಕ್ಷರು

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಛೇರಿಃ ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18

## 2022-23ನೇ ಸಾಲಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆ ನಡವಳಿಕೆಗಳು

**ದಿನಾಂಕ 10ನೇ ಸೆಪ್ಟೆಂಬರ್ 2023ರ ಭಾನುವಾರದಂದು ಬೆಳಗ್ಗೆ 10.30ಕ್ಕೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣರವರ ಅಧ್ಯಕ್ಷತೆಯಲ್ಲಿ ಪ್ರಧಾನ ಕಛೇರಿ ಆವರಣದಲ್ಲಿ ನಡೆದ ಬ್ಯಾಂಕಿನ 2022-23ನೇ ಸಾಲಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳುಃ–**

**ಹಾಜರಿದ್ದ ಸದಸ್ಯರುಗಳ ಸಂಖ್ಯೆ ಃ 2325 ಸದಸ್ಯರುಗಳು ಹಾಜರಿದ್ದರು**.

ಸಭೆಗೆ ಮುನ್ನ ಬೆಳಗ್ಗೆ 9.00 ಘಂಟೆಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ ಶ್ರೀ ಎಂ.ಪಿ.ಮಂಜುನಾಥ್, ಸಹಕಾರ ಸಂಘಗಳ ಉಪನಿಬಂಧಕರು, 2ನೇ ವಲಯ, ಬೆಂಗಳೂರು ಪ್ರಾಂತ, ಬೆಂಗಳೂರುರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇವರ ಸಮಕ್ಷಮದಲ್ಲಿ ಸದಸ್ಯರುಗಳ 155 ಪ್ರತಿಭಾವಂತ ಮಕ್ಕಳನ್ನು ಹಾಗೂ ಪ್ಯಾರಾ ಒಲಂಪಿಕ್‌ದಲ್ಲಿ ಚಿನ್ನದ ಪದಕ ಗಳಿಸಿದ ಶ್ರೀ ಹರೀಶ್ ವಿ ರವರನ್ನು ಪುರಸ್ಕರಿಸಿ ಗೌರವಿಸಲಾಯಿತು.

ನಂತರ, ಪ್ರಾದೇಶಿಕ ಸಹಕಾರ ತರಬೇತಿ ಕೇಂದ್ರ, ಬೆಂಗಳೂರು ಇದರ ಉಪನ್ಯಾಸಕರು ಸರ್ವಸದಸ್ಯರ ಸಭೆಯನ್ನುದ್ದೇಶಿಸಿ, ಸಹಕಾರ ಚಟುವಟಿಕೆ ಬಗ್ಗೆ ವಿವರಿಸಿದರು. ತರಬೇತಿ ಕೇಂದ್ರದ ಕಾರ್ಯಚಟುವಟಿಕೆಯಿಂದ ಸದಸ್ಯರು, ನಿರ್ದೇಶಕ ಮಂಡಳಿ ಹಾಗೂ ಸಿಬ್ಬಂದಿಗಳಿಗೆ ನೀಡುತ್ತಿರುವ ತರಬೇತಿ ವಿವರ ನೀಡಿ, ಇದರ ಪ್ರಯೋಜನ ಪಡೆದು ಸಹಕಾರ ಕ್ಷೇತ್ರದ ಬಲವರ್ದನೆಗೆ ಸಹಕರಿಸುವಂತೆ ವಿನಂತಿಸಿದರು.

ನಂತರ ಅಗತ್ಯ ಕೋರಂನೊಂದಿಗೆ ಬೆಳಗ್ಗೆ 10.30ಕ್ಕೆ ಸರ್ವಸದಸ್ಯರ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಯಿತು.

ಬ್ಯಾಂಕಿನ ಎಲ್ಲಾ ಗ್ರಾಹಕರುಗಳಿಗೆ ಅನುಕೂಲವಾಗುವ ಮೊಬೈಲ್ ಬ್ಯಾಂಕಿಂಗ್ ಆಪ್ ಅನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣರವರು ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು ಸರ್ವಸದಸ್ಯರ ಸಭೆಯ ಸಮಕ್ಷಮ ಉದ್ಘಾಟಿಸಿದರು.

ಆಡಳಿತ ಮಂಡಳಿಯಲ್ಲಿ ತೆರವಾದ ಸ್ಥಾನಗಳಿಗೆ ದಿನಾಂಕ 18.09.2022 ರಂದು ನಡೆದ ಚುನಾವಣೆಯಲ್ಲಿ ಸಾಮಾನ್ಯ ಸ್ಥಾನದಿಂದ ಶ್ರೀ ಎನ್.ದಯಾನಂದ್ ಮತ್ತು ಹಿಂದುಳಿದ ವರ್ಗದ ಸ್ಥಾನದಿಂದ ಶ್ರೀ ಬಿ.ಎಸ್.ಶ್ರೀರಂಗ ರವರುಗಳು ನಿರ್ದೇಶಕರುಗಳಾಗಿ ಆಯ್ಕೆಯಾಗಿರುವುದನ್ನು ಪ್ರಭಾರ ಕಾರ್ಯದರ್ಶಿಯವರು ಸಭೆಗೆ ತಿಳಿಸಿ ಪರಿಚಯಿಸಿದರು.

1. **ಪ್ರಾರ್ಥನೆ ಃ**

ಕು. ಆರತಿ ಶ್ರೀರಾಂ ರವರ ದೇವತಾ ಪ್ರಾರ್ಥನೆಯೊಂದಿಗೆ ಬ್ಯಾಂಕಿನ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಂದ ಜ್ಯೋತಿ ಬೆಳಗಿಸುವ ಮೂಲಕ ಸಭೆ ಪ್ರಾರಂಭವಾಯಿತು.

ನಂತರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣರವರ ಅಧ್ಯಕ್ಷತೆಯಲ್ಲಿ 2022-23ನೇ ಸಾಲಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಯಿತು.

**2. ಅಧ್ಯಕ್ಷರಿಂದ ಸ್ವಾಗತ ಃ**

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣರವರು ಸದಸ್ಯರುಗಳಿಗೆ ಸ್ವಾಗತ ಕೋರಿ, ವರದಿ ಪುಸ್ತಕದ ಪುಟ: 3-4 ರಲ್ಲಿರುವಂತೆ ಬ್ಯಾಂಕಿನ ಪ್ರಗತಿಯೊಂದಿಗಿನ ಹಲವಾರು ಅಂಶಗಳೊಂದಿಗೆ ಸ್ವಾಗತ ಭಾಷಣ ಮಾಡಿದರು.

ಪ್ರಮುಖವಾಗಿ ಇತ್ತೀಚಿನ ದಿನಗಳಲ್ಲಿ ಸಹಕಾರಿ ಕ್ಷೇತ್ರಗಳು ಎದುರಿಸುತ್ತಿರುವ ತೀವ್ರ ಒತ್ತಡಗಳ ನಡುವೆಯೂ ಪ್ರತಿಕೂಲತೆಗಳನ್ನು ಯಶಸ್ವಿಯಾಗಿ ಎದುರಿಸಿ ಆರ್ಥಿಕ ಸಬಲತೆಯನ್ನು ಗಳಿಸಿ, ಆರ್ಥಿಕ ಸಾಲಿನಲ್ಲಿ ರೂ.3.37 ಕೋಟಿ ನಿವ್ವಳ ಲಾಭದೊಂದಿಗೆ ಕಳೆದ ನಾಲ್ಕಾರು ವರ್ಷಗಳಿಂದ ಲೆಕ್ಕಪರಿಶೋಧನಾ ವರ್ಗೀಕರಣ “ಎ” ದರ್ಜೆಯಲ್ಲಿ ಮುಂದುವರೆದು, Financially Sound &

Well Managed Bank (FSWM) ಮಾನದಂಡದಡಿ ಮುಂದುವರಿಯುತ್ತಿರುವುದನ್ನು ತಿಳಿಸಿದರು. ಡಿಜಿಟಲೀಕರಣದಲ್ಲಿ ಈವರೆವಿಗೂ ಸಾಧಿಸಿರುವ ಪ್ರಗತಿಯನ್ನು ತಿಳಿಸಿ ಇನ್ನೂ ಹೆಚ್ಚಿನ ಸೌಲತ್ತುಗಳನ್ನು ನೀಡುವಲ್ಲಿ ಹಾಗೂ ಶಾಖಾ ವಿಸ್ತರಣೆ, ಸಿಬ್ಬಂದಿ ನೇಮಕಾತಿಗಳ ಬಗ್ಗೆ ಕ್ರಮವಿಡಬೇಕಾಗಿ ತಿಳಿಸಿದರು. ಅಲ್ಲದೇ ಬ್ಯಾಂಕಿನ ಆರ್ಥಿಕ ಪ್ರಗತಿ ಸಾಧಿಸಿ ಡಿವಿಡೆಂಡ್ ವಿತರಣೆಗೆ ಇದ್ದ ತೊಡಕು ನಿವಾರಣೆಯಾಗಿ 2022-23ನೇ ಸಾಲಿಗೆ ಶೇ.15ರ ಡಿವಿಡೆಂಡ್ ಘೋಷಿಸಿರುವುದಾಗಿ ತಿಳಿಸಿದರು.

ಭಾರತೀಯ ರಿಸರ್ವ್ ಬ್ಯಾಂಕ್ ಸುಸ್ತಿ ಸಾಲಗಳ ತಾಂತ್ರಿಕ ಮನ್ನಾ (Technical Write-off), ಏಕಕಾಲಿಕ ಸಾಲ ತೀರುವಳಿ (OTS)ಗಳ ಬಗ್ಗೆ ನಿಯಮಾವಳಿ ರೂಪಿಸಿ, ಅರ್ಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಿದೆ. ಇದಲ್ಲದೇ ಶಾಖಾ ವಿಸ್ತರಣೆಗೂ ಮುಕ್ತ ಅವಕಾಶ ನೀಡಿದ್ದು, ಇದಕ್ಕಾಗಿ ಸಿಬ್ಬಂದಿಗಳ ನೇಮಕಾತಿಗೆ ಹಾಗೂ ಬ್ಯಾಂಕಿನ ಮೊದಲನೇ ಮಹಡಿಯನ್ನು ನವೀಕರಣಗೊಳಿಸಿ ಪ್ರಧಾನ ಕಛೇರಿಯಾಗಿ ಪರಿವರ್ತಿಸಲು ಕ್ರಮವಿಡಲಾಗಿರುವುದಾಗಿ ತಿಳಿಸಿದರು.

ಅತ್ಯಲ್ಪ ಅವಧಿಯಲ್ಲಿ ನಮ್ಮೊಂದಿಗಿದ್ದು ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಿದ ವ್ಯವಸ್ಥಾಪಕ ನಿರ್ದೇಶಕರಾದ ಡಾಃ ಈಶ್ವರನ್ ವಿ., ರವರು, ಡಿಜಿಟಲೈಸೇಷನ್ ಬ್ಯಾಂಕಿಂಗ್ ಲೈಸೆನ್ಸ್, ಬ್ಯಾಂಕಿನ ಶಾಖೆಗಳ ನಗದನ್ನು ಎಸ್.ಬಿ.ಐ ಬ್ಯಾಂಕ್‌ನವರು ಸಂಗ್ರಹಿಸುವಲ್ಲಿ, ಆದ್ಯತಾ ವಲಯ ಸಾಲಗಳ ಮಾರ್ಪಾಟು, ನಿಶ್ಚಿತ ಠೇವಣಿಗಳ ಸ್ವಯಂ ನವೀಕರಣದ ಬಗ್ಗೆ ಹಾಗೂ ಹೂಡಿಕೆ, ಸಾಲ ಮುಂಗಡ, ವಸೂಲಾತಿ, ಸಿಬ್ಬಂದಿ ಮೇಲ್ವಿಚಾರಣೆ ಕುರಿತ ನಿಯಮಾವಳಿ, ಮುಂತಾದ ಹತ್ತು ಹಲವು ಗುರಿ ಸಾಧನೆಗೆ ಸಾಕಷ್ಟು ಶ್ರಮವಹಿಸಿ, ಆದ್ಯತಾ ವಲಯ ಸಾಲಗಳ ಕೊರತೆಯಿಂದ SIDBI ದಲ್ಲಿ ಠೇವಣಿಯಿರಿಸಲಾಗಿದ್ದು, ಇದರ ಅನುಪಾಲನೆಗೊಳಿಸಿ ಠೇವಣಿ ಹಿಂಪಡೆಯಲು ಕ್ರಮವಿಟ್ಟಿರುತ್ತಾರೆ. ಇವರೊಂದಿಗೆ ಕ್ರೆಡಿಟ್ ಅಡ್ವೈಸರ್ ಶ್ರೀ ಜಿ.ಜಿ.ಪ್ರಸಾದ್‌ರವರೂ ಸಹ ಸುಸ್ತಿ ವಸೂಲಾತಿ ವಿಭಾದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಇವರ ಸೇವೆಯಿಂದ ಸಾಕಷ್ಟು ಪ್ರಗತಿಯಾಗಿ ಹೆಚ್ಚಿನ ಲಾಭಗಳಿಕೆಗೂ ಸಾಧ್ಯವಾಗಿರುತ್ತದೆ. ಈ ಸಂದರ್ಭದಲ್ಲಿ ಇವರಿಬ್ಬರ ಸೇವೆಯನ್ನು ವಿಶೇಷವಾಗಿ ಸ್ಮರಿಸುವುದಾಗಿ ತಿಳಿಸಿದರು. ಅದೇ ರೀತಿ ಬ್ಯಾಂಕಿನ ದೈನಂದಿನ ಚಟುವಟಿಕೆ ಹಾಗೂ ಪ್ರಗತಿಗೆ ಬ್ಯಾಂಕಿಂಗ್ ತಜ್ಞರು, ಸಲಹೆಗಾರರು, ಕಾನೂನು ತಜ್ಞರ ಅವಶ್ಯಕತೆಯಿದ್ದು ಕ್ರಮವಿಡುವುದಾಗಿ ತಿಳಿಸಿದರು.

ಮುಂದುವರಿದು, ಸರ್ವಸದಸ್ಯರ ಸಭೆಗೆ ನಿರ್ದೇಶಕರು ಹಾಗೂ ಮಾನ್ಯ ಸದಸ್ಯ ಮಹನೀಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಸದಸ್ಯರು ಸಭೆಯ ಕಾರ್ಯಕಲಾಪಗಳಲ್ಲಿ ಪಾಲ್ಗೊಂಡು ಸುಗಮವಾಗಿ ನಡೆಸಿಕೊಡುವಂತೆ ಕೋರಿದರು.

ನಂತರ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಯಿತು.

ಸದಸ್ಯರಾದ ಶ್ರೀ ಕೆ.ಆರ್.ಆನಂದಬಾಬುರವರು ಅಧ್ಯಕ್ಷರ ಸ್ವಾಗತ ಭಾಷಣವನ್ನು ಪ್ರಸ್ತಾಪಿಸಿ, ಹಿಂದಿನ ವಾರ್ಷಿಕ ಸಭೆಗಳಿಂದ ಖಾಯಂ ಕಾರ್ಯದರ್ಶಿ ನೇಮಕಾತಿಗೆ ಒತ್ತಾಯಿಸುತ್ತಾ ಬರಲಾಗಿದ್ದಾಗ್ಯೂ ಸುಮಾರು ಹತ್ತಾರು ವರ್ಷಗಳಿಂದ ನೇಮಕಾತಿಯಾಗದೇ ಪ್ರಭಾರ ಹುದ್ದೆಯಲ್ಲೆ ಮುಂದುವರಿಸಿರುತ್ತೀರಿ. ಅಲ್ಲದೇ ವೃತ್ತ ಪತ್ರಿಕೆಗಳಲ್ಲಿ ಪ್ರಕಟಣೆ ನೀಡದೇ ಏಕಾಏಕಿ ಎಸ್.ಬಿ.ಐ ನಲ್ಲಿ ನಿವೃತ್ತರಾದ ಅಧಿಕಾರಿ ಡಾಃ ಈಶ್ವರನ್‌ರವರನ್ನು ವ್ಯವಸ್ಥಾಪಕ ನಿರ್ದೇಶಕರಾಗಿ ಹಾಗೂ ಶ್ರೀ ಜಿ.ಜಿ.ಪ್ರಸಾದ್ ರವರನ್ನು ಕಾನೂನು ಸಲಹೆಗಾರರಾಗಿ ನೇಮಕಾತಿ ಮಾಡಿಕೊಂಡು ಹೆಚ್ಚಿನ ರೀತಿಯ ವೇತನವನ್ನು ನಿಗದಿ ಮಾಡಿ, ಕಡತಗಳಿಗೆ ಸಹಿ ಮಾಡುವ ಅಧಿಕಾರದೊಂದಿಗೆ ಜವಾಬ್ದಾರಿ ನೀಡದಿರುವುದು ಸರಿಯಾದ ಕ್ರಮವಲ್ಲ. ಆದರೇ ಇವರುಗಳ ಸೇವೆಯನ್ನು ಸ್ಮರಿಸುತ್ತೇವೆಂದು ಅಧ್ಯಕ್ಷರ ಭಾಷಣದಲ್ಲಿ ಪ್ರಸ್ತಾಪಿಸಿದ್ದು, ಇವರುಗಳ ನೇಮಕಾತಿಯಿಂದ ಬ್ಯಾಂಕಿನಲ್ಲಿ ಆಗಿರುವ ಪ್ರಗತಿಯ ವಿವರವನ್ನು ಸಭೆಗೆ ನೀಡಬೇಕೆಂದು ಹಾಗೂ ಇವರ ಅವಧಿಯಲ್ಲಿ ಏನಾದರೂ ಅವ್ಯವಹಾರವಾಗಿದ್ದರೆ ಜವಾಬ್ದಾರರು ಯಾರು ಎಂದು ತಿಳಿಸಲು ಅಧ್ಯಕ್ಷರಲ್ಲಿ ಆಗ್ರಹಿಸಿದರು. ಇದೇ ಅಭಿಪ್ರಾಯವನ್ನು ಸದಸ್ಯರಾದ ಶ್ರೀ ಎನ್.ಮುರಳಿಧರ್ ಹಾಗೂ ಶ್ರೀ ಪಿ.ವೆಂಕಟೇಶ್‌ರವರು ಪುನರುಚ್ಚಿಸಿದರು.

ಸದಸ್ಯರಾದ ಶ್ರೀ ಎನ್.ಮುರಳಿಧರ್‌ರವರು ಇದೇ ವಿಷಯವನ್ನು ಪ್ರಸ್ತಾಪಿಸಿ, ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿ ಬಗ್ಗೆ ಸಹಕಾರ ಇಲಾಖೆಯು ಬ್ಯಾಂಕಿನ ನಿರ್ದೇಶಕರುಗಳ ವಿರುದ್ಧ 29(ಸಿ) ನೋಟೀಸ್ ಸಹ ಜಾರಿ ಮಾಡಿರುತ್ತದೆ. ಇವರಿಗೆ ಈವರೆವಿಗೂ ಸುಮಾರು ರೂ.18.00 ಲಕ್ಷಗಳ ವೇತನ ನೀಡಲಾಗಿದ್ದು, ಇವರುಗಳಿಂದ ಬ್ಯಾಂಕಿಗೆ ಆಗಿರುವ ಪ್ರಗತಿ ವಿವರ ತಿಳಿಯಬಯಸಿದರು. ಈ ಬಗ್ಗೆ ನ್ಯಾಯಾಲಯದಲ್ಲಿ ದಾವೆಗಳು ಬಾಕಿಯಿರುವುದನ್ನು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದ್ದು ಇಲಾಖೆಯ ಅನುಮೋದನೆ ಪಡೆದು ನೇಮಕ ಮಾಡಬೇಕಿತ್ತೆಂದು, ಅದನ್ನೂ ಸಹ ಮಾಡದೇ ಯಾವುದೇ ರೀತಿಯ ನಿಯಮಗಳನ್ನು ಪಾಲಿಸದೇ ಅವರ ಸೇವೆಯನ್ನು ಮುಂದುವರಿಸಿರುವುದು ಸರಿಯಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು, ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿ ಬಗ್ಗೆ ಪ್ರಸ್ತಾಪಿಸಿ, ನನಗೆ ತಿಳಿದಂತೆ ಇವರ ನೇಮಕಾತಿಯಿಂದ ಬ್ಯಾಂಕಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗಿ, ಅಭಿವೃದ್ಧಿಯಾಗಿರುವುದಾಗಿ ವಿವರಿಸಿದರು. ಇಂದು ಉದ್ಘಾಟಿಸಿದ ಬ್ಯಾಂಕಿನ ಡಿಜಿಟಲೈಸೇಷನ್ ಇತ್ಯಾದಿಗಳಲ್ಲಿ ಅವರ ಕೊಡುಗೆ ಸಾಕಷ್ಟು ಇರುವುದನ್ನು ಅಧ್ಯಕ್ಷರು ತಮ್ಮ ಸ್ವಾಗತ ಭಾಷಣದಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ಸರ್ವಸದಸ್ಯರ ಸಭೆಗೆ ಡಾಃ ಈಶ್ವರನ್‌ರವರನ್ನು ಕರೆಸಿ ಅವರಿಂದಲೇ ಪ್ರಗತಿಯ ವಿವರವನ್ನು ಪಡೆಯಬೇಕಾಗಿತ್ತೆಂದು ತಿಳಿಸಿದರು. ಹಾಲಿ ಬ್ಯಾಂಕಿನಲ್ಲಿ ಖಾಯಂ ಕಾರ್ಯದರ್ಶಿಯಿಲ್ಲದೇ ಪ್ರಭಾರ ಕಾರ್ಯದರ್ಶಿ ಮುಂದುವರಿದಿರುವುದಕ್ಕೆ ನನ್ನ ಆಕ್ಷೇಪಣೆಯಿರುವುದಾಗಿ ತಿಳಿಸಿದರು. ಮುಂದುವರಿದು, ಈ ದಿನ ಮೊಬೈಲ್ ಬ್ಯಾಂಕಿಂಗ್ ಪ್ರಾರಂಭ ಮಾಡಿರುವುದಕ್ಕೆ ಆಡಳಿತ ಮಂಡಳಿಯನ್ನು ಅಭಿನಂದಿಸಿ, ಇದಕ್ಕೆ ಡಾಃ ಈಶ್ವರನ್‌ರವರ ಕೊಡುಗೆ ಇರುವುದರ ಬಗ್ಗೆ ಮಾಹಿತಿ ನೀಡಬೇಕೆಂದು ಕೋರಿದರು. ಬ್ಯಾಂಕ್ ಶತಮಾನೋತ್ಸವದ ಸಮೀಪವಿದ್ದು ಹೆಚ್ಚುವರಿ ಶಾಖೆ ಪ್ರಾರಂಭಿಸಲು ಅನುಮತಿ ಬಂದಿರುವುದಕ್ಕೆ ಪ್ರಶಂಸಿಸಿದರು.

ಸದಸ್ಯರಾದ ಶ್ರೀ ಎನ್. ಸುಬ್ರಮಣ್ಯರಾಜುರವರು ಮಧ್ಯೆ ಪ್ರವೇಶಿಸಿ, ವಿಷಯ ಸೂಚಿಯಲ್ಲಿನ ಅಧ್ಯಕ್ಷರ ಭಾಷಣದ ವಿಷಯ ಪ್ರಸ್ತಾಪವಾಗುತ್ತಿದ್ದು, ಹಾಲಿ ಇದರಲ್ಲಿ ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿ ಬಗ್ಗೆ ಚರ್ಚೆ ನಡೆಯುತ್ತಿದೆ. ನಮ್ಮ ಬ್ಯಾಂಕ್‌ನಲ್ಲಿ ಪ್ರಭಾರ ಕಾರ್ಯದರ್ಶಿ, ವ್ಯವಸ್ಥಾಪಕರು ಹಾಗೂ ಇತರೆ ಅಗತ್ಯ ಸಿಬ್ಬಂದಿಗಳಿದ್ದು, ಇವರ ಜೊತೆಗೆ ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿ ಅಗತ್ಯವಿರಲಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿ, ಈ ನಿಟ್ಟಿನಲ್ಲಿ ಆಡಳಿತ ಮಂಡಳಿಯವರು ನಿಯಮಗಳ ಉಲ್ಲಂಘನೆ ಮಾಡಿದ್ದೀರೆಂದರು. ಶ್ರೀಯುತರು ಎಸ್.ಬಿ.ಐ ನ ನಿವೃತ್ತ ಅಧಿಕಾರಿ ಹಾಗೂ ಅನುಭವಿಗಳಾಗಿದ್ದು ಅವರ ಸೇವೆಯಿಂದ ಬ್ಯಾಂಕಿಗೆ ಉಪಯೋಗವಾಗುತ್ತಿದ್ದರೂ ಅವರ ನೇಮಕಾತಿಯಿಂದ ಹೆಚ್ಚಿನ ವೇತನ ನಿಗದಿಯು ನಮ್ಮಂತಹ ಆರ್ಥಿಕ ವಹಿವಾಟಿನ ಚಿಕ್ಕ ಬ್ಯಾಂಕಿಗೆ ಹೊರೆಯಾಗುತ್ತಿರುವುದೆಂಬುದು ಸದಸ್ಯರುಗಳ ಕಳಕಳಿಯಾಗಿದೆ. ಬ್ಯಾಂಕಿನಲ್ಲಿ ಖಾಯಂ ಕಾರ್ಯದರ್ಶಿಯವರ ನೇಮಕಾತಿಯಾಗದೇ ಇರುವುದೇ ಇದಕ್ಕೆಲ್ಲಾ ಕಾರಣವಾಗಿರುವುದರಿಂದ, ಈ ಹಿಂದಿನ ಹಲವಾರು ಸರ್ವಸದಸ್ಯರ ಸಭೆಗಳ ಒತ್ತಾಯವನ್ನು ಪರಿಗಣಿಸಿ ಆದಷ್ಟು ಬೇಗ ನುರಿತ ಅಗತ್ಯ ವಿದ್ಯಾರ್ಹತೆ ಹೊಂದಿರುವ ಖಾಯಂ ಕಾರ್ಯದರ್ಶಿ ನೇಮಕಾತಿಗೆ ಕ್ರಮವಿಡಲು ಆಗ್ರಹಿಸಿದರು. ಉತ್ತಮ ಕಾರ್ಯನಿರ್ವಹಿಸುವ ಕಾರ್ಯದರ್ಶಿಯವರು ಬಂದರೂ ಅವರು ಮುಂದುವರಿಯದಂತೆ ತಡೆಯುವ ಹಿತಾಸಕ್ತಿಗಳು ನಮ್ಮ ಮಧ್ಯೆ ಇದ್ದು ಇಂತಹ ಪ್ರಯತ್ನಗಳನ್ನು ತಡೆಯಲು ಪ್ರಯತ್ನಿಸುವಂತೆ ತಿಳಿಸಿ, ಇದಕ್ಕೆ ನಮ್ಮೆಲ್ಲರ ಸಹಕಾರ ಇರುವುದಾಗಿ ತಿಳಿಸಿದರು.

ಮುಂದುವರಿದು, ಹೊಸದಾಗಿ ಆಯ್ಕೆಯಾದ ನಿರ್ದೇಶಕರುಗಳನ್ನು ಹಾಗೂ ಡಿಜಿಟಲೈಸೇಷನ್‌ಗೆ ಶ್ರಮಿಸಿದ ನಿರ್ದೇಶಕರುಗಳಾದ ಶ್ರೀ ಎಂ.ಎಸ್.ಪವನ್‌ಕುಮಾರ್ ಹಾಗೂ ಶ್ರೀ ಎನ್.ವೆಂಕಟಾಚಲಂರವರ ಶ್ರಮವನ್ನು ಅಭಿನಂದಿಸಿದರು.

ಸದಸ್ಯರಾದ ಶ್ರೀ ಪಿ.ಎಂ.ಸುಂದರ್‌ರವರು ಮಾತನಾಡಿ, ಸರ್ವಸದಸ್ಯರ ಸಭೆಯಲ್ಲಿ ಎಲ್ಲಾ ಸದಸ್ಯರಿಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆ ಹೊರತು ಕೆಲವೇ ಸದಸ್ಯರುಗಳಿಗೆ ಅವಕಾಶ ಕೊಡಬಾರದು. ಕೆಲವೇ ಕೆಲ ಸದಸ್ಯರು ಪದೇ ಪದೇ ಕೆಲವೇ ವಿಷಯಗಳ ಬಗ್ಗೆ ಒಂದೇ ರೀತಿಯ ಚರ್ಚೆ ನಡೆಸುತ್ತಿರುವುದರಿಂದ ಪ್ರಯೋಜನವಾಗದೇ ಸಭೆಯಲ್ಲಿ ಗೊಂದಲಕ್ಕೆ ಅವಕಾಶವಾಗುತ್ತಿದ್ದು, ಒಬ್ಬ ಸದಸ್ಯರಿಗೆ ಒಂದು ಬಾರಿ ಮಾತ್ರ ಚರ್ಚೆಗೆ ಅವಕಾಶ ನೀಡಿ, ಪದೇ ಪದೇ ಚರ್ಚೆ ಮಾಡಲು ಅವಕಾಶ ನೀಡಬಾರದಾಗಿ ತಿಳಿಸಿದರು.

ಸಭೆಯಲ್ಲಿ ಮಂಡಿಸಿದ ವಿಷಯಗಳನ್ನು ಬಿಟ್ಟು ಕೆಲವೇ ಸದಸ್ಯರುಗಳು ಬೇರೆ ಬೇರೆ ವಿಷಯ ಕುರಿತು ಚರ್ಚಿಸುತ್ತಿದ್ದು, ಇದನ್ನು ನಿಯಂತ್ರಿಸುವಂತೆ ಮಹಾಸಭೆಯಲ್ಲಿನ ಸದಸ್ಯರುಗಳು ವಿನಂತಿಸಿದರು. ಈ ಸಂದರ್ಭದಲ್ಲಿ ಕೆಲಕಾಲ ಮಾತಿನ ಚಕಮಕಿ ನಡೆದು ಗೊಂದಲದ ವಾತಾವಣ ಸೃಷ್ಠಿಯಾಯಿತು.

ಈ ಸಂದರ್ಭದಲ್ಲಿ ಮಂಡಿಸಿದ ವಿಷಯದ ಬಗ್ಗೆ ಮಾತ್ರ ಚರ್ಚಿಸುವಂತೆ ಸಭಾಧ್ಯಕ್ಷರು ತಾಕೀತು ಮಾಡಿ ಗೊಂದಲ ಸೃಷ್ಠಿಸುವವರನ್ನು ಸರ್ವಸದಸ್ಯರ ಸಭೆಯಿಂದ ಹೊರಹಾಕಬೇಕಾದೀತೆಂದು, ಮುಖ್ಯವಾಗಿ ಶ್ರೀ ಕೆ.ಆರ್.ಆನಂದಬಾಬು ಹಾಗೂ ಶ್ರೀ ಎನ್.ಮುರಳಿಧರ್‌ರವರನ್ನು ಎಚ್ಚರಿಸಿ ವಾತಾರಣವನ್ನು ತಿಳಿಗೊಳಿಸಿ ಚರ್ಚೆಯನ್ನು ಮುಂದುವರಿಸಿದರು.

ಸದಸ್ಯರಾದ ಶ್ರೀ ಎ.ಎಂ.ರಾಮಮೂರ್ತಿರವರು ಮಾತನಾಡಿ, ಕಾಯ್ದೆ ರೀತ್ಯ ಸಿಬ್ಬಂದಿ ನೇಮಕಾತಿ ಮಾಡದ ಬಗ್ಗೆ ಕೈಗೊಂಡಿರುವ ಕಾನೂನು ಕ್ರಮಕ್ಕೆ ಸರ್ವಸದಸ್ಯರ ಸಭೆಯಲ್ಲಿ ಚರ್ಚೆಯಾಗಿ ಗೊಂದಲ ಸೃಷ್ಠಿಯಾಗುತ್ತಿದ್ದು ಸ್ಪಷ್ಟತೆ ನೀಡುವಂತೆ ಕೋರಿದರು.

ಸಭಾಧ್ಯಕ್ಷರು ಸದಸ್ಯರುಗಳ ಪ್ರಶ್ನೆಗೆ ಉತ್ತರಿಸಿ, ಹಿಂದಿನ ಆಡಳಿತಾವಧಿಯಲ್ಲಿ 10 ಕಿರಿಯ ಗುಮಾಸ್ತರು ಹಾಗೂ 5 ಅಟೆಂಡರ್‌ಗಳನ್ನು ನೇಮಕ ಮಾಡಿಕೊಂಡಿದ್ದು ಇವರುಗಳನ್ನು ಈ ಹುದ್ದೆಗಳಿಗೆ ಖಾಯಂ ನೇಮಕ ಮಾಡಲು ಸಹಕಾರ ಇಲಾಖೆಯನ್ನು ಕೋರಿದ ಸಂದರ್ಭದಲ್ಲಿ ಅನುಮತಿಯಿಲ್ಲದೇ ತಾತ್ಕಾಲಿಕ ನೇಮಕಾತಿ ಮಾಡಿಕೊಂಡಿದ್ದನ್ನು ಆಕ್ಷೇಪಿಸಿ, ಅದರ ಜೊತೆಯಲ್ಲಿ ಹೊಸದಾಗಿ ನೇಮಕಗೊಂಡಿದ್ದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಲಾ–ಆಫೀಸರ್ ನೇಮಕಾತಿಯೂ ತಪ್ಪೆಂದು ತಿಳಿಸಿ ಕಲಂ 29(ಸಿ)ರಡಿ

ಕ್ರಮವೇಕೆ ಇಡಬಾರದೆಂದು ಪತ್ರ ನೀಡಿರುತ್ತದೆ. ಮುಂದುವರಿದು, 70 ವರ್ಷಗಳೊಳಗಿರುವ ನಿವೃತ್ತ ಅಧಿಕಾರಿಗಳನ್ನು ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕಾತಿ ಮಾಡಬಹುದೆಂಬ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಮೇರೆ 3 ಜನರ ಅರ್ಜಿಗಳು ಬಂದಿದ್ದು, ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿ, ತೀರ್ಮಾನಿಸಿ, ಡಾಃ ಈಶ್ವರನ್ ವಿ ರವರನ್ನು ನೇಮಕಾತಿ ಮಾಡಿಕೊಂಡು, ಅನುಮತಿ ಕೋರಿ ಆರ್.ಬಿ.ಐ ಗೆ ಪತ್ರ ಬರೆದಿದ್ದು, ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿಗೆ ಹೈಕೋರ್ಟಿನ ತಡೆಯಾಜ್ಞೆಯಿರುವುದು ತಿಳಿದು ಬಂದು ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಿರುವುದಾಗಿ ತಿಳಿಸಿದರು. ಶ್ರೀಯುತರು ಎಸ್.ಬಿ.ಐ ನ ಹಿರಿಯ ನಿವೃತ್ತ ಅಧಿಕಾರಿಯಾದ್ದರಿಂದ ಇವರಿಗೆ ರೂ.1.00 ಲಕ್ಷ ಮೂಲ ವೇತನ ಹಾಗೂ ಇತರೆ ಸಿಬ್ಬಂದಿಗಳಿಗೆ ನೀಡುವಂತಹ ಇತರೆ ಭತ್ಯೆಗಳನ್ನು ನೀಡಿರುವುದಾಗಿ ಹಾಗೂ ಯಾವುದೇ ಹೆಚ್ಚುವರಿ ಭತ್ಯೆಗಳನ್ನು ನೀಡಿಲ್ಲವೆಂದು ವಿವರಿಸಿದರು. ಶ್ರೀ ಜಿ.ಜಿ.ಪ್ರಸಾದ್‌ರವರನ್ನು ಕಾನೂನು ಸಲಹೆಗಾರರನ್ನಾಗಿ ವಸೂಲಾತಿ ವಿಭಾಗಕ್ಕೆ ನೇಮಿಸಿ ಮಾಹೆಯಾನ ರೂ.80,000/- ಗಳ ವೃತ್ತಿ ಶುಲ್ಕ (Professional Fee) ಮಾತ್ರ ನೀಡಿರುವುದಾಗಿ, ಇವರುಗಳಿಂದ ಬ್ಯಾಂಕಿಗೆ ವಸೂಲಾತಿ ಬಗ್ಗೆ ಹೆಚ್ಚಿನ ರೀತಿಯ ಅನುಕೂಲವಾಗಿರುವುದಾಗಿ ಸಮಜಾಯಿಷಿ ನೀಡಿದರು.

ಮುಂದುವರಿದು, ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿಯಿಂದ ಡಿಜಿಟಲೈಸೇಷನ್ ಬ್ಯಾಂಕಿಂಗ್ ಲೈಸೆನ್ಸ್, ಬ್ಯಾಂಕಿನ ಶಾಖೆಗಳ ನಗದನ್ನು ಎಸ್.ಬಿ.ಐ ಬ್ಯಾಂಕ್‌ನವರು ಸಂಗ್ರಹಿಸುವಲ್ಲಿ, ಆದ್ಯತಾ ವಲಯ ಸಾಲಗಳ ಮಾರ್ಪಾಟು, ನಿಶ್ಚಿತ ಠೇವಣಿಗಳ ಸ್ವಯಂ ನವೀಕರಣದ ಬಗ್ಗೆ ಹಾಗೂ ಹೂಡಿಕೆ, ಸಾಲ ಮುಂಗಡ, ವಸೂಲಾತಿ, ಸಿಬ್ಬಂದಿ ಮೇಲ್ವಿಚಾರಣೆ ಕುರಿತ ನಿಯಮಾವಳಿ, ಮುಂತಾದ ಹತ್ತು ಹಲವು ಗುರಿ ಸಾಧನೆಗೆ ಸಾಕಷ್ಟು ಶ್ರಮವಹಿಸಿ, ಆದ್ಯತಾ ವಲಯ ಸಾಲಗಳ ಕೊರತೆಯಿಂದ SIDBI ದಲ್ಲಿ ಠೇವಣಿಯಿರಿಸಲಾಗಿದ್ದು, ಇದರ ಅನುಪಾಲನೆಗೊಳಿಸಿ ಠೇವಣಿ ಹಿಂಪಡೆಯಲು ಕ್ರಮವಿಟ್ಟಿರುತ್ತಾರೆ. ಇವರೊಂದಿಗೆ ಕ್ರೆಡಿಟ್ ಅಡ್ವೈಸರ್ ಶ್ರೀ ಜಿ.ಜಿ.ಪ್ರಸಾದ್‌ರವರೂ ಸಹ ಸುಸ್ತಿ ವಸೂಲಾತಿ ವಿಭಾದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಇವರ ಸೇವೆಯಿಂದ ಸಾಕಷ್ಟು ಪ್ರಗತಿಯಾಗಿ ಹೆಚ್ಚಿನ ಲಾಭಗಳಿಕೆಗೂ ಸಾಧ್ಯವಾಗಿರುವುದಾಗಿ ವಿವರ ನೀಡಿದರು.

ನಂತರ ವಿಷಯ ಕುರಿತ ಚರ್ಚೆ ಮುಕ್ತಾಯವಾಗಿ ಮುಂದಿನ ಸಭಾ ಕಾರ್ಯಕಲಾಪಗಳು ಮುಂದುವರಿಯಿತು.

**3. 2022-23ನೇ ಸಾಲಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದುಃ**
ಪ್ರಭಾರ ಕಾರ್ಯದರ್ಶಿಯವರಾದ ಶ್ರೀ ಆನಂದ್ ಎಸ್.ಆರ್ ರವರು ವರದಿ ಪುಸ್ತಕದ ಪುಟ: 1-2 ರಲ್ಲಿರುವಂತೆ 2022-23ನೇ ಸಾಲಿನ 94ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ವಿವರವಾಗಿ ಓದಿ, ಸಭೆಯ ಅಂಗೀಕಾರಕ್ಕೆ ಮಂಡಿಸಿದರು.

ನಂತರ ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳಲ್ಲಿ ಕೆಲ ಸದಸ್ಯರುಗಳು ನೀಡಿರುವ ವಿವರವನ್ನು ಸಭೆಗೆ ತಿಳಿಸಿದರು. ನಂತರ ಸಭೆಯ ಸೂಚನಾ ಪತ್ರವು ಸರಿಯಾಗಿರುವುದೆಂದು ಸರ್ವಾನುಮತದಿಂದ ಒಪ್ಪಿ ದಾಖಲು ಮಾಡಲಾಯಿತು.

ನಂತರ ಸಭೆಯ ಸೂಚನಾ ಪತ್ರದ ಕಾರ್ಯಸೂಚಿಯಂತೆ ಕಾರ್ಯಕಲಾಪಗಳು ಮುಂದುವರಿಯಿತು.

**4. ಕಳೆದ ವಾರ್ಷಿಕ ಸರ್ವಸದಸ್ಯರ ಸಭೆಯಿಂದೀಚೆಗೆ ಮೃತರಾದ ಸದಸ್ಯರುಗಳಿಗೆ ಸಂತಾಪ ಸೂಚನೆ.**
ಪ್ರಭಾರ ಕಾರ್ಯದರ್ಶಿಯವರು, ವರದಿ ಪುಸ್ತಕದ ಪುಟ 17 ರಲ್ಲಿರುವಂತೆ ಮೃತರಾದ ಸದಸ್ಯರುಗಳನ್ನು ಸ್ಮರಿಸಿ, ಅವರುಗಳ ಗೌರವಾರ್ಥ ಎರಡು ನಿಮಿಷ ಮೌನವನ್ನಾಚರಿಸಬೇಕೆಂದು ಕೋರಿದರು.

| | ಮೃತರ ಹೆಸರು | ಸ.ಸಂಖ್ಯೆ | | ಮೃತರ ಹೆಸರು | ಸ.ಸಂಖ್ಯೆ | | ಮೃತರ ಹೆಸರು | ಸ.ಸಂಖ್ಯೆ |
|---|---|---|---|---|---|---|---|---|
| 1 | ವೈ.ವೆಂಕಟೇಶ್ | 11588 | 14 | ಡಿ.ವೆಂಕಟೇಶ್ | 15248 | 27 | ನಿತಿನ್ ಬಿ.ಆರ್ | 17844 |
| 2 | ಬಿ.ಎಸ್.ಶ್ರೀಕಂಠಪ್ಪ | 06488 | 15 | ಬಿ.ಸಿ.ಬಸವರಾಜು | 13320 | 28 | ಬಿ.ಸಿ.ಮೈಲಾರಪ್ಪ | 04517 |
| 3 | ಎಸ್.ಎಂ.ಸುಂದರ್‌ರಾಜ್ | 06369 | 16 | ಸಿ.ನಾಗಭೂಷಣಂ | 05015 | 29 | ವಿ.ವೆಂಕಟೇಶ್ | 16416 |
| 4 | ವೆಂಕಟಮ್ಮ ಪಿ.ಎಂ | 13549 | 17 | ಎಂ.ಶಶಿಕುಮಾರ್ | 16221 | 30 | ಪುಟ್ಟಚನ್ನಮ್ಮ | 14425 |
| 5 | ಕೆ.ಆರ್.ಅರುಂಧತಿ | 03085 | 18 | ಶಿವಕುಮಾರ್ ಸಿ.ಎಸ್ | 17720 | 31 | ಎಸ್.ಮುನಿಯಪಿಳ್ಳೈ | 17467 |
| 6 | ಹೆಚ್.ಶ್ರೀನಿವಾಸ | 16358 | 19 | ಭೋಗನರಸಿಂಹಯ್ಯಶೆಟ್ಟಿ | 03173 | 32 | ರತ್ನ | 06050 |
| 7 | ಎನ್.ರಾಮಯ್ಯ | 10336 | 20 | ಎಂ.ಎನ್.ನಾಗಭೂಷಣ್ | 12086 | 33 | Srichand Santdas Bahija | 14053 |
| 8 | ಜುಬೇದಭಾನು | 15592 | 21 | ಎ.ತಿಮ್ಮಪ್ಪ | 12049 | 34 | ಎ.ಸಚ್ಚಿದಾನಂದ | 10857 |
| 9 | ಬಿ.ಶ್ರೀನಿವಾಸ್ | 07016 | 22 | ಎಲ್.ವಿ.ರಾಜು | 10123 | 35 | ಶಿವಕುಮಾರ್ | |
| 10 | ಹೆಚ್.ಮರಿಸ್ವಾಮಿ | 04559 | 23 | ಬಿಎಸ್.ಮಮತಾದೇವಿ | 12001 | 36 | ಎಸ್.ಆರ್.ಮುರಳಿಧರ್ | |
| 11 | ಎನ್.ಗೋಪಿನಾಥ್ | 16973 | 24 | ವಿ.ಕೃಷ್ಣಮೂರ್ತಿ | 08953 | 37 | ಜಿ.ಗಂಗಾಧರ್ | 13058 |
| 12 | ಕೆ.ಎಸ್.ವಾದಿರಾಜ | 16091 | 25 | ಚಂದ್ರಶೇಖರ್ ಅಂಬೇಕರ್ | 08244 | | | |
| 13 | ಎಲ್.ಗೋಪಿನಾಥ್ | 08394 | 26 | ಎನ್.ಶಿವಮ್ಮ | 11075 | | | |

ನಿಧನ ಹೊಂದಿದ ಸದಸ್ಯರುಗಳ ಸ್ಮರಣಾರ್ಥ ಸಭೆಯಲ್ಲಿ ಎರಡು ನಿಮಿಷ ಮೌನವನ್ನಾಚರಿಸಿ ಶ್ರದ್ಧಾಂಜಲಿ ಅರ್ಪಿಸಿ ಗೌರವ ಸಲ್ಲಿಸಲಾಯಿತು.

**5. ದಿನಾಂಕ 04.09.2022 ರಂದು ವರ್ಚುವಲ್ ವಿಧಾನದ ಮೂಲಕ ನಡೆದ 2021-22ನೇ ಸಾಲಿನ 93ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.**

ಪ್ರಭಾರ ಕಾರ್ಯದರ್ಶಿಯವರು ವರದಿ ಪುಸ್ತಕ ಪುಟ 5 ರಿಂದ 16ರವರೆಗಿನ 93ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ಸಭೆಯ ಅಂಗೀಕಾರಕ್ಕೆ ಮಂಡಿಸಿದರು.

ಸದಸ್ಯರಾದ ಶ್ರೀ ಎನ್.ಮುರಳಿಧರ್‌ರವರು ಹಿಂದಿನ ಸಭೆಯ ನಡವಳಿಕೆಯಲ್ಲಿ ನಮೂದಾಗಿರುವ ಏಕಕಾಲಿಕ ಸಾಲ ತೀರುವಳಿ ವಿಷಯ ಕುರಿತಂತೆ ಮಾತನಾಡಿ, ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾವಳಿ ರಚಿಸಿ ಇತ್ಯರ್ಥಗೊಳಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಿರುವುದನ್ನು ಪ್ರಸ್ತಾಪಿಸಿದರು. ಮುಂದುವರಿದು ಏಕಕಾಲಿಕ ಸಾಲ ತೀರುವಳಿಯಲ್ಲಿ ಚುಕ್ತವಾದ ಬಹುತೇಕ ಪ್ರಕರಣಗಳಲ್ಲಿ ಸದಸ್ಯತ್ವವನ್ನು ರದ್ದುಗೊಳಿಸಿದ್ದು, ಆದರೆ ಇತ್ತೀಚೆಗೆ ಮರು ಚುನಾವಣೆ ಮೂಲಕ ಆಯ್ಕೆಯಾದ ನಿರ್ದೇಶಕರಾದ ಶ್ರೀ ಎನ್.ದಯಾನಂದ್‌ರವರು ಕೂಡ ಇದರ ಫಲಾನುಭವಿಗಳಾಗಿದ್ದು ಇವರ ಸದಸ್ಯತ್ವವನ್ನು ಏಕೆ ಚುಕ್ತಗೊಳಿಸಿಲ್ಲವೆಂದು ಪ್ರಶ್ನಿಸಿದರು. ಇವರು 2008ರಲ್ಲಿ ಸುಮಾರು ರೂ.20.00 ಲಕ್ಷಗಳಿಗೂ ಮೀರಿ ರಿಯಾಯಿತಿ ಪಡೆದಿರುವ ದಾಖಲೆಯನ್ನು ಪ್ರದರ್ಶಿಸಿ, ನೈತಿಕವಾಗಿ ಆಡಳಿತ ಮಂಡಳಿಯಲ್ಲಿ ನಿರ್ದೇಶಕರಾಗಿ ಮುಂದುವರಿಯಬಾರದೆಂದು ಆಗ್ರಹಿಸಿ ಇವರನ್ನು ವೇದಿಕೆಯಿಂದ ಕೆಳಗಿಳಿಸಲು ಒತ್ತಾಯಿಸಿದರು. ಸಾಲ ಮರುಪಾವತಿಯಲ್ಲಿ ರಿಯಾಯಿತಿ ಪಡೆದವರೆ ಸುಸ್ತಿ ವಸೂಲಾತಿ ಸಮಿತಿಯಲ್ಲಿದ್ದು ಇವರು ಯಾವ ರೀತಿಯ ನ್ಯಾಯ ಸಮ್ಮತವಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುವುದೆಂದು ಪ್ರಶ್ನಿಸಿ, ಇವರನ್ನು ಯಾವುದೇ ಸಮಿತಿಯಲ್ಲಿ ಮುಂದುವರೆಸದಂತೆ ಕ್ರಮವಿಡಲು ತಿಳಿಸಿದರು. ಈ ರೀತಿ ಸಾಲ ಪಾವತಿಯಲ್ಲಿ ವಿವಿಧ ರೀತಿಯ ರಿಯಾಯಿತಿ ಸಹಾಯ ಪಡೆದವರ ಸದಸ್ಯತ್ವವನ್ನು ಚುಕ್ತಗೊಳಿಸುತ್ತಿದ್ದು, ಆದರೆ ಕೆಲವರ ಸದಸ್ಯತ್ವ ಚುಕ್ತಗೊಳಿಸದಿರುವುದನ್ನು ಪ್ರಶ್ನಿಸಿ ಈ ತಾರತಮ್ಯಕ್ಕೆ ನಮ್ಮ ಆಕ್ಷೇಪಣೆ ಇರುವುದಾಗಿ ತಿಳಿಸಿದರು. ಇದಕ್ಕೆ ಸದಸ್ಯರಾದ ಶ್ರೀ ಪಿ.ವೆಂಕಟೇಶ್‌ರವರು ಸಹಮತ ವ್ಯಕ್ತಪಡಿಸಿ, ಒಂದೇ ರೀತಿಯ ಮಾನದಂಡವನ್ನು ಅನುಸರಿಸುವಂತೆ ತಿಳಿಸಿದರು.

ಸದಸ್ಯರಾದ ಶ್ರೀ ಎನ್.ಸುಬ್ರಮಣ್ಯರಾಜುರವರು ಮಾತನಾಡಿ, ನಿರ್ದೇಶಕರೊಬ್ಬರ ಆಯ್ಕೆಯನ್ನು ಸದಸ್ಯರೊಬ್ಬರು ಸರ್ವಸದಸ್ಯರ ಸಭೆಯಲ್ಲಿ ಆಕ್ಷೇಪಿಸುತ್ತಿರುವುದು ಸಮಂಜಸವಲ್ಲವೆಂದು, ಈ ಬಗ್ಗೆ ಚುನಾವಣಾ ಪ್ರಾಧಿಕಾರದಲ್ಲಿ ಪ್ರಶ್ನಿಸುವುದು ಸೂಕ್ತವಾಗಿದ್ದು ಸರ್ವಸದಸ್ಯರ ಸಭೆ ಸಮಕ್ಷಮ ಇತ್ಯರ್ಥವಾಗದಿರುವಂತಹದ್ದಲ್ಲವೆಂದು ತಿಳಿಸಿದರು. ಆದಾಗ್ಯೂ ಪ್ರಕರಣ ವಿವರವನ್ನು ಮಹಾಸಭೆ ಗಮನಕ್ಕೆ ಸದಸ್ಯರೊಬ್ಬರು ತಂದಿರುವುದು ಸಮಂಜಸವಾಗಿರುವುದಾಗಿ ತಿಳಿಸಿ, ವೃಥಾ ಸರ್ವಸದಸ್ಯರ ಸಭೆಯಲ್ಲಿ ಬೇರೆ ಬೇರೆ ವಿಷಯ ಚರ್ಚಿಸಿ ಗೊಂದಲ ಸೃಷ್ಟಿಸದಂತೆ ವಿನಂತಿಸಿದರು.

ಸದಸ್ಯರಾದ ಶ್ರೀ ಬಿ.ವಿ.ವಿಜಯಕುಮಾರ್‌ರವರು ಮಾತನಾಡಿ, ಕೆಲ ಸದಸ್ಯರು ಚುನಾವಣೆಯನ್ನು ಮನಸ್ಸಿನಲ್ಲಿಟ್ಟು ಕೊಂಡು ಸರ್ವಸದಸ್ಯರ ಸಭೆಯಲ್ಲಿ ಅನ್ಯ ವಿಷಯಗಳ ಬಗ್ಗೆ ಚರ್ಚಿಸಿ ಗೊಂದಲ ಸೃಷ್ಟಿಸುತ್ತಿದ್ದು ಇದಕ್ಕೆ ಅವಕಾಶವಾಗದಂತೆ ವಿನಂತಿಸಿದರು. ಚರ್ಚೆ ಮುಂದುವರಿಸಿ, ಹಿಂದಿನ ಸರ್ವಸದಸ್ಯರ ಸಭೆಯೊಂದರಲ್ಲಿ ಕೆಲ ಪ್ರಕರಣಗಳ ಬಗ್ಗೆ ತನಿಖೆ ನಡೆಸಲು ಸಮಿತಿ ರಚಿಸಿ, ನನ್ನನ್ನು ಸಹ ಆ ಸಮಿತಿಯಲ್ಲಿ ಸೇರ್ಪಡೆಗೊಳಿಸಲು ಸೂಚಿಸಿದ್ದು, ಆದರೆ ಸಮಿತಿಗೆ ನನ್ನನ್ನು ಸೇರ್ಪಡೆಗೊಳಿಸದೆ ವಿಚಾರಣೆಯನ್ನೂ ಸಹ ಮುಂದುವರಿಸದೆ ನ್ಯೂನತೆಗಳು ಹಾಗೆಯೇ ಮುಂದುವರಿಯಲು ಕಾರಣವಾಗಿದೆ. ಈಗಲಾದರೂ ಅದಕ್ಕೆ ಚಾಲನೆ ನೀಡುವಂತೆ ಸೂಚಿಸಿದರು.

ಸಭಾಧ್ಯಕ್ಷರು ಮಧ್ಯೆ ಪ್ರವೇಶಿಸಿ ಮಾತನಾಡಿ, ಸದಸ್ಯರು ಹಾಲಿ ಆರ್ಥಿಕ ಸಾಲಿನ ವಿಷಯಗಳನ್ನು ಚರ್ಚಿಸಬೇಕಾಗಿದ್ದು 2008ರ ರಂತಹ ಹಳೆಯ ಸಾಲುಗಳ ವಿಷಯಗಳ ಬಗ್ಗೆ ವೃಥಾ ಪ್ರಸ್ತಾಪಿಸಿ, ಆಕ್ಷೇಪ ಮಾಡಿದಲ್ಲಿ ಇದಕ್ಕೆ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಿ ದಾಖಲಿಸಲು ಅವಕಾಶ ನೀಡುವುದಿಲ್ಲವೆಂದು ತಿಳಿಸಿದರು. ಎಲ್ಲಾ ಸದಸ್ಯರಿಗೂ ಸಭೆಯಲ್ಲಿ ಮಾತನಾಡಲು ಅವಕಾಶ ಮಾಡಿಕೊಡಬೇಕಾಗಿ ಸದಸ್ಯರಲ್ಲಿ ವಿನಂತಿಸಿದರು.

ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿಯವರು ಮಾತನಾಡಿ, 2008ನೇ ಸಾಲಿನಲ್ಲಿ ನಡೆದ ವಿಷಯವನ್ನು ಹಾಗೂ ವಿಷಯ ಕುರಿತು ಪೂರ್ವಬಾವಿಯಾಗಿ ಮನವಿ ಮಾಡಿಕೊಳ್ಳದೆ ಪ್ರಸ್ತಾಪಿಸುತ್ತಿರುವುದು ಸರಿಯಲ್ಲವೆಂದು ತಿಳಿಸಿ, ಆಯಾ ಸಾಲಿನ ಲೆಕ್ಕಪತ್ರಗಳು ಆಯಾ ಸಾಲಿನಲ್ಲಿ ಲೆಕ್ಕಪರಿಶೋಧಿಸಲ್ಪಟ್ಟು ಸರ್ವಸದಸ್ಯರ ಸಭೆಯ ತೀರ್ಮಾನಗಳಂತೆ ಅಂಗೀಕಾರವಾಗಿ ಇತ್ಯರ್ಥಗೊಂಡವುಗಳಾಗಿರುತ್ತದೆ. ಅಂತಹವುಗಳನ್ನು ಈಗ ಪುನಃ ಸರಿಪಡಿಸಲು ಸಾಧ್ಯವಿಲ್ಲವೆಂದು ತಿಳಿಸಿ, ಇಂತಹ ವಿಷಯಗಳನ್ನು ಈಗ ಚರ್ಚಿಸುತ್ತಾ ಹೋದಲ್ಲಿ ಮುಂದಿನ ಪ್ರಗತಿ ಅಸಾಧ್ಯವೆಂದು ತಿಳಿಸಿ, ಸರ್ವಸದಸ್ಯರ ಸಭೆ ಸಮಯ ವ್ಯರ್ಥಮಾಡದಂತೆ ತಿಳಿಸಿದರು. ಅಲ್ಲದೇ, ನಿರ್ದೇಶಕರೊಬ್ಬರ ಆಯ್ಕೆ ಸರ್ವಸದಸ್ಯರಿಂದ ಚುನಾವಣೆ ಮೂಲಕ

ನಿರ್ಣಯಿತವಾಗುವುದರಿಂದ ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನ ಕೈಗೊಳ್ಳುವುದು ಸಾಧ್ಯವಿಲ್ಲವೆಂದು ಸಮಜಾಯಿಷಿ ನೀಡಿದರು. ಚುನಾವಣೆಯಲ್ಲಿ ತಾವು ಸ್ಪರ್ಧಿಸಿ ಪರಾಭವಗೊಂಡು ಈಗ ಅವರ ವಿರುದ್ಧ ಈ ರೀತಿ ಆರೋಪಿಸುತ್ತಿರುವುದು ಸೂಕ್ತವಲ್ಲವೆಂದು ತಿಳಿಸಿ, ನಿರ್ದೇಶಕರಾಗಿ ಆಯ್ಕೆಯಾದ ಬಗ್ಗೆ ಆ ಹಂತದಲ್ಲೇ ಸಂಬಂಧಿಸಿದ ಪ್ರಾಧಿಕಾರದಲ್ಲಿ ಇದನ್ನು ಪ್ರಶ್ನಿಸಲು ಅವಕಾಶವಿದ್ದುದಾಗಿ ತಿಳಿಸಿ, ಅದರಂತೆ ಕ್ರಮವಿಡದೆ ಸರ್ವಸದಸ್ಯರ ಸಭೆಯಲ್ಲಿ ಪ್ರಶ್ನಿಸುತ್ತಿರುವುದು ಸರಿಯಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ಶ್ರೀಹರಿರಾಮ್‌ರವರು, ಹಿಂದಿನ ಆಧ್ಯಕ್ಷರಾದ ಶ್ರೀ ಎಂ.ರಾಮಚಂದ್ರರವರು ನಕಲಿ ಜಾತಿ ಸರ್ಟಿಫಿಕೇಟ್ ಹಾಗೂ ಅವರ ಅಧ್ಯಕ್ಷಾವಧಿಯಲ್ಲಿ ಹಲವಾರು ಹಗರಣಗಳು ನಡೆದಿದ್ದು ಇದರ ಬಗ್ಗೆ ತನಿಖೆ ನಡೆಸುವಂತೆ ಕಳೆದ ಸರ್ವಸದಸ್ಯರ ಸಭೆಯಲ್ಲಿ ಕೋರಿದ್ದು, ಈ ಕುರಿತು ಸಮಜಾಯಿಷಿ ಕೋರಿದರು. ಮುಂದುವರಿದು, ಬ್ಯಾಂಕಿನ ಸಿಬ್ಬಂದಿಯೊಬ್ಬರ ಜೊತೆ ಸೇರಿ ಸ್ವತ್ತಿಗೆ ಸಂಬಂಧಿಸಿದ ಸೇಲ್ ಡೀಡ್ ಕೂಡ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ದಾಖಲೆಗಳು ನಮ್ಮಲ್ಲಿದ್ದು ಇದನ್ನೂ ತನಿಖೆಗೊಳಪಡಿಸುವಂತೆ ಆಗ್ರಹಿಸಿ ಸರ್ವಸದಸ್ಯರ ಸಭೆಯಲ್ಲಿ ನಿರ್ಣಯ ಕೈಗೊಳ್ಳುವಂತೆ ಒತ್ತಾಯಿಸಿದರು. ಅವರ ಅವಧಿಯಲ್ಲಿ ಸಾಕಷ್ಟು ನಕಲಿ ದಾಖಲಾತಿಗಳ ಮೇಲೆ ಸಾಲ ನೀಡಿ, ವಸೂಲಾತಿಗೆ ಸಾಧ್ಯವಾಗದೇ ಸುಸ್ತಿಯಾಗಿದ್ದು ಇವೆಲ್ಲವನ್ನೂ ತನಿಖೆಗೊಳಪಡಿಸುವಂತೆ ಅಗ್ರಹಿಸಿದರು. ಇದಲ್ಲದೇ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಭಾರ ಕಾರ್ಯದರ್ಶಿಯವರಿಗೆ ವಿದ್ಯಾರ್ಹತೆಯ ಕೊರತೆಯಿದ್ದಾಗ್ಯೂ ನೇಮಕಾತಿ ಮಾಡಿರುವುದನ್ನು ಆಕ್ಷೇಪಿಸಿದರು. ಈ ಪ್ರಭಾರ ಕಾರ್ಯದರ್ಶಿ ಹಾಗೂ ಹಿಂದಿನ ಅಧ್ಯಕ್ಷರಾದ ಶ್ರೀ ಎಂ.ರಾಮಚಂದ್ರರವರ ಮೇಲೆ ಮಹಿಳಾ ಸಿಬ್ಬಂದಿಯೊಬ್ಬರು ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಇವೆಲ್ಲವುಗಳ ಬಗ್ಗೆ ವಿವರ ನೀಡುವಂತೆ ಆಗ್ರಹಿಸಿದರು.

ಮಹಿಳಾ ಸಿಬ್ಬಂದಿಯೊಬ್ಬರ ಪೋಲೀಸ್ ದೂರಿನ ಬಗ್ಗೆ ಪ್ರಭಾರ ಕಾರ್ಯದರ್ಶಿಯವರು ವಿವರ ನೀಡಿ, ಬ್ಯಾಂಕಿನ ಅಶಿಸ್ತು ತೋರಿದ ಕಾರಣ ನೋಟೀಸ್ ನೀಡಿ ಸರಿಪಡಿಸಿಕೊಳ್ಳುವಂತೆ ಒಂದೆರಡು ಬಾರಿ ಸೂಚನೆ ನೀಡಿದ್ದನ್ನೇ ತಪ್ಪಾಗಿ ತಿಳಿದು ಅಧ್ಯಕ್ಷರು, ನಿರ್ದೇಶಕರೊಬ್ಬರ ಹಾಗೂ ಪ್ರಭಾರ ಕಾರ್ಯದರ್ಶಿಯವರ ಮೇಲೆ ಪೋಲೀಸ್ ಇಲಾಖೆಯಲ್ಲಿ ದೂರು ನೀಡಿದ್ದು ಇದಕ್ಕೆ ಪೋಲೀಸ್ ವಿಚಾರಣೆ ನಡೆಸಿ ದಾಖಲಾತಿ ಸಹಿತ ಸಮರ್ಪಕ ಪ್ರತ್ಯುತ್ತರ ನೀಡಿದ ನಂತರ ಈ ಪ್ರಕರಣವನ್ನು ಇಲಾಖೆಯು ಇತ್ಯರ್ಥಗೊಳಿಸಿರುವುದಾಗಿ ಸಮಜಾಯಿಷಿ ನೀಡಿದರು.

ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿಯವರು ಮಾತನಾಡಿ, ಅರ್ಹತೆ ಅನುಭವದ ಆಧಾರದ ಮೇರೆ ಕಾರ್ಯದರ್ಶಿಯ ಕರ್ತವ್ಯ ನಿಯೋಜಿಸಿ ಕಾರ್ಯಭಾರಗಳನ್ನು ನೀಡಿದ್ದು ಹಾಗೂ ಸಿಬ್ಬಂದಿ ಮೇಲ್ವಿಚಾರಣೆಯನ್ನು ಆಡಳಿತ ಮಂಡಳಿಯು ನಿಭಾಯಿಸುತ್ತಿರುವುದಾಗಿ ತಿಳಿಸಿದರು. ಸರ್ವಸದಸ್ಯರ ಸಭೆಯಲ್ಲಿ ವ್ಯಕ್ತಿಗಳ ಹೆಸರನ್ನು ನಮೂದಿಸಿ ತೀರಾ ವೈಯಕ್ತಿಕ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದು, ಇದು ಶಿಷ್ಟಾಚಾರವಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ಪಿ.ವೆಂಕಟೇಶ್‌ರವರು, ಶ್ರೀ ಎಂ.ರಾಮಚಂದ್ರರವರು ಅಧ್ಯಕ್ಷ ಸ್ಥಾನಕ್ಕೆ ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿರುವುದಾಗಿ ತಿಳಿಸಿದ್ದು, ಆದರೆ ನಡವಳಿಕೆ ವಿವರದಲ್ಲಿ ಜಾತಿ ಪ್ರಮಾಣ ಪತ್ರದ ಆಕ್ಷೇಪಣೆಗಳು ದಾಖಲಾಗಿದ್ದು, ಸೂಕ್ತ ಉತ್ತರ ಅಗತ್ಯವೆಂದು ತಿಳಿಸಿ ಇವರ ಸದಸ್ಯತ್ವ ಮುಂದುವರಿಕೆ ಬಗ್ಗೆ ಸೂಕ್ತ ಕ್ರಮಕ್ಕೆ ಸೂಚಿಸಿದರು.

ಸದಸ್ಯರಾದ ಶ್ರೀ ಬಿ.ಸಿ.ವೆಂಕಟೇಶ್‌ರವರು ಮಾತನಾಡಿ, ತಾವು ಬ್ಯಾಂಕಿನಲ್ಲಿ ಹಲವಾರು ವರ್ಷಗಳ ಕಾಲ ಸಿಬ್ಬಂದಿಯಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿ ಹಾಲಿ ಬ್ಯಾಂಕಿನ ಸದಸ್ಯನಾಗಿರುತ್ತೇನೆ. ಇಂದಿನ ಸರ್ವಸದಸ್ಯರ ಸಭೆಯಲ್ಲಿ ಕೆಲ ವ್ಯಕ್ತಿಗಳ ಹೆಸರನ್ನು ನಮೂದಿಸಿ ತೀರ ವೈಯಕ್ತಿಕ ವಿಚಾರಗಳು ಪ್ರಸ್ತಾಪಿಸುತ್ತಿರುವುದನ್ನು ಆಕ್ಷೇಪಿಸಿದರು. ಸಭೆಯಲ್ಲಿ ಕೋರಿದ ಪ್ರಶ್ನೆಗಳಿಗೆ ವೇದಿಕೆಯಲ್ಲಿದ್ದವರು ಉತ್ತರಿಸಲು ಸಿದ್ಧರಿದ್ದರೂ ಸಹ ಕೇಳಿಸಿಕೊಳ್ಳದ ಸ್ಥಿತಿಯಲ್ಲಿದ್ದು ಅಡ್ಡಿ ಪಡಿಸುತ್ತಿರುವುದಕ್ಕೆ ತಮ್ಮ ಆಕ್ಷೇಪಣೆ ಹಾಗೂ ಅಸಮಾಧಾನ ವ್ಯಕ್ತಪಡಿಸಿದರು. ಈ ರೀತಿಯ ವರ್ತನೆಗಳಿಂದ ಸರ್ವಸದಸ್ಯರ ಸಭೆಗೆ ಅವಮಾನವಾಗಲಿದ್ದು ಬ್ಯಾಂಕಿನ ಪ್ರಗತಿಗೆ ಮಾರಕವಾಗಲಿರುವುದಾಗಿ ತಿಳಿಸಿ, ಉತ್ತಮ ಸಲಹೆ ಸೂಚನೆಗಳನ್ನು ನೀಡಿ ಸಮಾಧಾನದಿಂದ ವರ್ತಿಸುವಂತೆ ವಿನಂತಿಸಿದರು. ಸಿಬ್ಬಂದಿಗಳ ವಿದ್ಯಾರ್ಹತೆ ಬಗ್ಗೆ ಆಡಳಿತ ಮಂಡಳಿ ನಿಗಾವಹಿಸಲಿದೆ. ಅಲ್ಲದೇ ವಿದ್ಯಾರ್ಹತೆ ಹೊಂದಿದ ಅರ್ಹರನ್ನು ಕಾರ್ಯದರ್ಶಿಯಾಗಿ ನೇಮಿಸಿದಲ್ಲಿ ಅವರಿಗೆ ಕೆಲಸ ನಿರ್ವಹಿಸಲು ಸಾಧ್ಯವಾಗದ ವಾತಾವರಣವನ್ನು ಸೃಷ್ಟಿಸುವ ಹಿತಾಸಕ್ತಿಗಳಿರುವುದಾಗಿ ತಿಳಿಸಿದರು. ಹಾಲಿ ಬ್ಯಾಂಕ್ ಸಾಕಷ್ಟು ಪ್ರಗತಿಯಾಗಿರುವುದು ಅಂಕಿ ಅಂಶಗಳಿಂದ ಕಾಣಬಹುದಾಗಿರುವುದಾಗಿ ತಿಳಿಸಿ ವಿಷಯದ ಅನುಮೋದನೆಗೆ ತಮ್ಮ ಸಹಮತವನ್ನು ಸೂಚಿಸಿದರು.

ಸಭಾಧ್ಯಕ್ಷರು ಮಾತನಾಡಿ, ಹಿಂದಿನ ಆಧ್ಯಕ್ಷರ ಜಾತಿ ಪ್ರಮಾಣ ಪತ್ರ ಹಾಗೂ ಅವರ ಅವಧಿಯಲ್ಲಿ ಸಾಲ ನೀಡಿ ಸುಸ್ತಿಯಾದ ಪ್ರಕರಣಗಳ ಬಗ್ಗೆ ತನಿಖೆ ನಡೆಸುವಂತೆ ಸಭೆಯಲ್ಲಿ ಸದಸ್ಯರು ಕೋರಿದ ಪ್ರಶ್ನೆಗೆ ಉತ್ತರಿಸಿ, ಶ್ರೀ ಎಂ.ರಾಮಚಂದ್ರರವರ ಜಾತಿ ಪ್ರಮಾಣ ಪತ್ರಕ್ಕೆ ಸಂಬಂದಿಸಿದಂತೆ ಕಂದಾಯ ಇಲಾಖೆ ಹಾಗೂ ತಮ್ಮ ಮಧ್ಯೆ ನಡೆದ ಪತ್ರಗಳಿಂದ ಬ್ಯಾಂಕಿನ ಸದಸ್ಯತ್ವವನ್ನು ರದ್ದುಗೊಳಿಸಲು ಸಾಧ್ಯವಿಲ್ಲವೆಂದು ತಿಳಿಸಿ ಅವರು ವೈಯಕ್ತಿಕ ಕಾರಣಗಳಿಂದ ಈಗಾಗಲೇ ರಾಜೀನಾಮೆ ನೀಡಿದ್ದು ಬ್ಯಾಂಕಿನ ಸದಸ್ಯತ್ವ ಕುರಿತ ದಾಖಲಾತಿಗಳು ಸಮರ್ಪಕ ವಾಗಿರುವುದಲ್ಲದೆ ಸದಸ್ಯತ್ವ ರದ್ದತಿ ಬಗ್ಗೆ ಯಾವುದೇ ಇಲಾಖೆಯಿಂದ ಬ್ಯಾಂಕಿಗೆ ನಿರ್ದೇಶನವಿಲ್ಲದೇ ಕ್ರಮವಿಡಲು ಸಾಧ್ಯವಿಲ್ಲದಿರುವುದನ್ನು ಕಳೆದ ಸರ್ವಸದಸ್ಯರ ಸಭೆಯಲ್ಲೇ ಉತ್ತರಿಸಿರುವುದನ್ನು ಪುನರಾವರ್ತಿಸಿದರು. ಮುಂದುವರಿದು, ಅವರ ಅವಧಿಯಲ್ಲಿ ನೀಡಲಾದ ಕೆಲ ಸಾಲಗಳಲ್ಲಿ ಸುಸ್ತಿಯಾಗಿರುವ ಕೆಲ ಪ್ರಕರಣಗಳ ಬಗ್ಗೆ ಈಗಾಗಲೇ ಸರ್ವಸದಸ್ಯರ ಸಭೆಯಲ್ಲಿ ಕೆಲ ಸದಸ್ಯರು ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದ್ದು ಇವುಗಳೊಂದಿಗೆ ಇನ್ನೂ ಒಂದೆರಡು ಪ್ರಕರಣಗಳು ಸುಸ್ತಿಯಾಗಿ ವಸೂಲಾತಿಗೆ ತೊಡಕಾಗಿದ್ದು ಇವುಗಳ ಸಾಲ ಮಂಜೂರಾತಿಯಲ್ಲಿ ಕೆಲ ನಿರ್ದೇಶಕರ ಪಾತ್ರವಿರುವುದನ್ನು ಕೆಲವರು ಬ್ಯಾಂಕಿನ ಗಮನಕ್ಕೆ ತಂದಿದ್ದು ಈ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆದು ಕ್ರಿಮಿನಲ್ ಅಥವಾ ಸಿವಿಲ್ ಕಾನೂನು ಕ್ರಮವಿಡುವ ನಿರ್ಣಯವನ್ನು ಕೈಗೊಳುವುದಾಗಿ ಸಭೆಗೆ ತಿಳಿಸಿದರು. ಇದರಿಂದ ನಕಲಿ ದಾಖಲಾತಿಗಳಿದ್ದಲ್ಲಿ ಕಾನೂನು ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳೂ ಸಹ ಜಾರಿಯಾಗಲಿರುವುದಾಗಿ ಸಮಜಾಯಿಷಿ ನೀಡಿದರು.

ನಂತರ ದಿನಾಂಕ 04.09.2022 ರಂದು ವರ್ಚುವಲ್ ವಿಧಾನದ ಮೂಲಕ ನಡೆದ 2021-22ನೇ ಸಾಲಿನ 93ನೇ ವಾರ್ಷಿಕ ಸರ್ವಸದಸ್ಯರ ಸಭೆ ನಡವಳಿಕೆಗಳು ನಮೂದಾಗಿರುವುದು ಸರಿಯಾಗಿರುವುದೆಂದು ಸರ್ವಾನುಮತದಿಂದ ಒಪ್ಪಿ ದಾಖಲು ಮಾಡಲಾಯಿತು.

**6. 2022-23ನೇ ಸಾಲಿನ ಆಡಳಿತ ಮಂಡಳಿ ವರದಿ ಅಂಗೀಕರಿಸುವುದು:**

ವರದಿ ಪುಸ್ತಕ ಪುಟ 17 ರಿಂದ 26ರವರೆಗಿರುವ 2022-23ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಪ್ರಭಾರ ಕಾರ್ಯದರ್ಶಿಯವರು ಸವಿವರವಾಗಿ ಓದಿ, ವಿವರಿಸಿ ಸರ್ವಸದಸ್ಯರ ಸಭೆಯ ಅಂಗೀಕಾರಕ್ಕೆ ಮಂಡಿಸಿದರು. ಮುಂದುವರಿದು ವಾರ್ಷಿಕ ಸರ್ವಸದಸ್ಯರ ಸಭೆಗೆ ಸಂಬಂಧಿಸಿದ ನೋಟೀಸ್, ಆಡಳಿತ ವರದಿ, ಲೆಕ್ಕಪರಿಶೋಧನಾ ವರದಿಯೊಂದಿಗಿನ ಲೆಕ್ಕಪತ್ರ ತಃಖ್ತೆಗಳು, ಆಯವ್ಯಯ, ನಿವ್ವಳ ಲಾಭ ವಿತರಣಾ ವಿವರಗಳೊಂದಿಗಿನ ವಿಷಯ ಸೂಚಿ ಕುರಿತ ಎಲ್ಲಾ ಮಾಹಿತಿಗಳನ್ನು ಸದಸ್ಯರುಗಳಿಗೆ ನೀಡಿರುವುದಲ್ಲದೇ ಬ್ಯಾಂಕಿನ ವೆಬ್‌ಸೈಟ್ www.gmcbank.net ನಲ್ಲೂ ಪ್ರಕಟಿಸಿರುವುದಾಗಿ ತಿಳಿಸಿದರು. ನಂತರ ಸಭಾಧ್ಯಕ್ಷರು ವಿಷಯ ಕುರಿತ ಚರ್ಚೆಗೆ ಸೂಚಿಸಿದರು.

ಸದಸ್ಯರಾದ ಶ್ರೀ ಕೆ.ಆರ್.ಆನಂದಬಾಬುರವರು ಮಾತನಾಡಿ, ಸಹಕಾರ ಇಲಾಖೆ ಅನುಮತಿಯಿಲ್ಲದೇ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದರಿಂದ ಇಲಾಖೆಯಿಂದ ನೋಟೀಸ್ ಜಾರಿಯಾಗಿ ಈ ಸಿಬ್ಬಂದಿಗಳನ್ನು ಸೇವೆಯಿಂದ ತೆಗೆಯಬೇಕಾದ ಸಂದರ್ಭ ಬಂದು ತೊಂದರೆ ಅನುಭವಿಸಬೇಕಾಯಿತೆಂದು ತಿಳಿಸಿ, ಈ ಸಂದರ್ಭದಲ್ಲೇ ವ್ಯವಸ್ಥಾಪಕ ನಿರ್ದೇಶಕರನ್ನು ಸೇವೆಯನ್ನು ಹಿಂಪಡೆಯದ ಕಾರಣ ಇಲಾಖೆ ಕ್ರಮಕ್ಕೆ ಅವಕಾಶ ವಾಗಿದ್ದುದಾಗಿ ತಿಳಿಸಿದರು. ಮುಂದೆ ಈ ರೀತಿಯ ಆತುರದ ನಿರ್ಧಾರ ಕೈಗೊಳ್ಳದೆ ಇಲಾಖೆಯಿಂದ ಅನುಮತಿ ಪಡೆದು, ಸಮಿತಿ ರಚಿಸಿ, ವೃತ್ತ ಪತ್ರಿಕೆಯಲ್ಲಿ ಪ್ರಕಟಣೆ ನೀಡಿ ಕಾನೂನು ರೀತಿ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಹಾಗೂ ಕೂಡಲೇ ಪೂರ್ಣ ಪ್ರಮಾಣದ ಕಾರ್ಯದರ್ಶಿ ನೇಮಕಾತಿಗೆ ಒತ್ತಾಯಿಸಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು ಮಾತನಾಡಿ, ವೃತ್ತಪತ್ರಿಕೆಯಲ್ಲಿ ಪ್ರಕಟಣೆ ನೀಡದೇ ಸಿಬ್ಬಂದಿ ನೇಮಕಾತಿ ಮಾಡಿದ್ದರಿಂದ ಇಲಾಖೆಯಿಂದ ನೋಟೀಸ್ ಜಾರಿಯಾಗಿದ್ದು ಪಾರದರ್ಶಕ ಕ್ರಮವಿಡುವಂತೆ ತಿಳಿಸಿದರು.

ಸಭಾಧ್ಯಕ್ಷರು ಉತ್ತರಿಸಿ, ಬ್ಯಾಂಕಿಗೆ ಒಬ್ಬ ಮುಖ್ಯಕಾರ್ಯನಿರ್ವಹಣಾಧಿಕಾರಿ, ಇಬ್ಬರು ವ್ಯವಸ್ಥಾಪಕರು, ಮೂವರು ಲೆಕ್ಕಿಗರು ಮತ್ತು ಒಬ್ಬ ಕಂಪ್ಯೂಟರ್ ಅಡ್ಮಿನ್ ಅವಶ್ಯವಿರುವುದಾಗಿ ಕಳೆದ ಫೆಬ್ರವರಿ ಮಾಹೆಯಲ್ಲಿಯೆ ಪತ್ರ ಮುಖೇನ ಇಲಾಖೆಗೆ ತಿಳಿಸಿದ್ದು, ಈವರೆವಿಗೂ ಇಲಾಖೆಯಿಂದ ಯಾವುದೇ ಪ್ರತ್ಯುತ್ತರ ಬಂದಿರುವುದಿಲ್ಲವೆಂದು ತಿಳಿಸಿ, ಈ ಕೂಡಲೇ ಚಾಲನೆ ನೀಡುವುದಾಗಿ ತಿಳಿಸಿದರು.

ಈ ಹಂತದಲ್ಲಿ ಅಧ್ಯಕ್ಷರ ಅನುಮತಿ ಪಡೆದು ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿಯವರು ಮಾತನಾಡಿ, ಸದಸ್ಯರುಗಳ ಪ್ರಶ್ನೆಗಳಿಗೆ ಸಮಜಾಯಿಷಿ ನೀಡಲು ಸಿದ್ದರಿದ್ದು ಇದಕ್ಕೆ ಕೆಲ ಸದಸ್ಯರುಗಳೇ ಅಡ್ಡಿಪಡಿಸುತ್ತಿರುವುದನ್ನು ಆಕ್ಷೇಪಿಸಿದರು. ಮುಂದುವರಿದು, ಬ್ಯಾಂಕಿನ ದೈನಂದಿನ ಕೆಲಸ ಕಾರ್ಯಗಳಿಗೆ ತಾತ್ಕಾಲಿಕವಾಗಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿದ್ದು ತಾತ್ಕಾಲಿಕ ಅವಧಿ ಪೂರ್ಣಗೊಂಡ ನಂತರ ಬಿಡುಗಡೆಗೊಳಿಸಲೇ ಬೇಕಾಗುತ್ತದೆ. ಈ ಕಾರಣದಿಂದ ಸದಸ್ಯರುಗಳು ಉದ್ರೇಕಗೊಳ್ಳುವುದರಲ್ಲಿ ಅರ್ಥವಿಲ್ಲ. ಇಲಾಖೆಯಿಂದ ಬಂದ ನೋಟೀಸ್‌ಗಳಿಗೆ ಕಾಲಕಾಲಕ್ಕೆ ಸೂಕ್ತ ಸಮಜಾಯಿಷಿ ನೀಡಿದ್ದು, ಇಲಾಖೆಯು ಯಾವುದೇ ಕಾನೂನು ಕ್ರಮ ಜರುಗಿಸಿಲ್ಲವೆಂದು ಸರ್ವಸದಸ್ಯರ ಸಭೆಗೆ ತಿಳಿಸಿದರು.

ಸಭಾಧ್ಯಕ್ಷರು ಮಾತನಾಡಿ, ಹಿಂದಿನ ಆಡಳಿತ ಮಂಡಳಿ ಅವಧಿಯಲ್ಲಿ ಮಾಡಿಕೊಂಡ ತಾತ್ಕಾಲಿಕ ಸಿಬ್ಬಂದಿಗಳ ನೇಮಕಾತಿಯಿಂದಾಗಿ ಇಲಾಖೆಯಿಂದ 29(ಸಿ) ರಡಿ ಕಾರಣ ಕೇಳಿ ನೋಟೀಸ್ ಬಂದ ಪರಿಣಾಮವಾಗಿ ಎಲ್ಲರನ್ನೂ ಸೇವೆಯಿಂದ ಬಿಡುಗಡೆ ಮಾಡಲಾಗಿರುತ್ತದೆ ಹೊರತು ಆಡಳಿತ ಮಂಡಳಿ ವಿರುದ್ಧ 29(ಸಿ) ಕಾನೂನು ಕ್ರಮ ಜರುಗಿಲ್ಲವೆಂದು ಸಮಜಾಯಿಷಿ ನೀಡಿದರು. ಹೊಸದಾಗಿ ಇಲಾಖೆಯಿಂದ ಅನುಮತಿ ಪಡೆದು 11 ತಿಂಗಳ ಅವಧಿಗೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿರುವುದಾಗಿ ವಿವರಿಸಿ, ಈ ಬಗ್ಗೆ ಹೆಚ್ಚಿನ ಚರ್ಚೆ ಅನಗತ್ಯವೆಂದು ತಿಳಿಸಿದರು.

ಸದಸ್ಯರಾದ ಶ್ರೀ ಕೆ.ಆರ್.ಆನಂದಬಾಬುರವರು ಮಾತನಾಡಿ, ಬ್ಯಾಂಕಿನ ಸಿಆರ್‌ಎಆರ್ ಪ್ರಮಾಣ ಅಧಿಕವಾಗಿದ್ದು, ಬ್ಯಾಂಕಿನ ಸ್ವಂತ ಬಂಡವಾಳ ಹೆಚ್ಚಿರುವುದರಿಂದ ಹೆಚ್ಚಿನ ಮೊಬಲಗನ್ನು ಹೂಡಿಕೆಯಲ್ಲಿ ತೊಡಗಿಸದೇ ಸಾಲ ವಿತರಣೆಗೆ ಬಳಸಿ ಹೆಚ್ಚಿನ ಲಾಭ ಗಳಿಕೆ ಮಾಡುವಂತೆ ಸಲಹೆ ನೀಡಿದರು.

ಸದಸ್ಯರಾದ ಶ್ರೀ ಪಿ.ವೆಂಕಟೇಶ್‌ರವರು DICGC ಠೇವಣಿ ವಿಮೆ ಬಗ್ಗೆ ಪ್ರಸ್ತಾಪಿಸಿ, ರೂ.5.00 ಲಕ್ಷಗಳ ಮೇಲ್ಪಟ್ಟ ಠೇವಣಿಗಳಿಗೆ ವಿಮೆ ಅವಕಾಶವಿದೆಯೇ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರಭಾರ ಕಾರ್ಯದರ್ಶಿಯವರು ಸಮಜಾಯಿಷಿ ನೀಡಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾನದಂಡಗಳಡಿ DICGC ವಿಮೆಯು ಪ್ರತಿ ಠೇವಣಿದಾರರೊಬ್ಬರಿಗೆ ರೂ.5.00 ಲಕ್ಷಗಳ ಠೇವಣಿ ಮೊಬಲಗಿಗೆ ಖಾತರಿ ನೀಡಲಿದ್ದು, ಇದಕ್ಕೆ ಅರ್ಧ ವಾರ್ಷಿಕ ಕಂತನ್ನು ಕ್ರಮಬದ್ಧವಾಗಿ ಪಾವತಿಸುವುದು ಕಡ್ಡಾಯವಾಗಿದ್ದು ಇದನ್ನು ನಾವು ಸಹ ಪಾಲಿಸಿಕೊಂಡು ಬರುತ್ತಿರುವ ವಿವರವನ್ನು ನೀಡಿದರು.

ಸದಸ್ಯರಾದ ಶ್ರೀ ಎನ್.ಮುರಳಿಧರ್‌ರವರು ಮಾತನಾಡಿ, ಕಳೆದ 13-14 ವರ್ಷಗಳಿಂದ ಬ್ಯಾಂಕಿನ ಸಿಬ್ಬಂದಿಯಾದ ಶ್ರೀ ಶ್ರೀನಿವಾಸ್ ಎಂಬುವವರು ಸಹಕಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇವರಿಗೆ ಬ್ಯಾಂಕಿನಿಂದ ಮಾಹೆಯಾನ ವೇತನ ಪಾವತಿಸುತ್ತಿದ್ದು ಈ ಕಾರಣದಿಂದ ಬ್ಯಾಂಕಿಗೆ ರೂ.40-45 ಲಕ್ಷಗಳವರೆಗೂ ವೆಚ್ಚವಾಗಿ ಆರ್ಥಿಕ ನಷ್ಟಯುವುಂಟಾಗಿದ್ದು ಕೂಡಲೇ ಅವರನ್ನು ಬ್ಯಾಂಕಿನ ಸೇವೆಗೆ ವಾಪಸ್ ಕರೆಸುವಂತೆ ಆಗ್ರಹಿಸಿ ವಿವರ ಕೋರಿದರು. ಅಲ್ಲದೇ ಬ್ಯಾಂಕಿನ ಅನೆಕ್ಸ್ ಕಟ್ಟಡದಲ್ಲಿ ಕಳೆದ 3-4 ವರ್ಷಗಳಿಂದ ಬಿಡಿಸಿಸಿ ಬ್ಯಾಂಕಿನವರಿಗೆ ಬ್ಯಾಂಕಿಂಗ್ ವ್ಯವಹಾರಕ್ಕೆ ಬಾಡಿಗೆ ರಹಿತವಾಗಿ ಕಟ್ಟಡ ನೀಡಿದ್ದು ಇದನ್ನು ಕಳೆದ ಸರ್ವಸದಸ್ಯರ ಸಭೆಯಲ್ಲಿ ಆಕ್ಷೇಪಿಸಿದ್ದು, ಇದಕ್ಕೆ ಯಾವುದೇ ಕ್ರಮವಿಡದಿರುವುದಕ್ಕೆ ಆಕ್ಷೇಪಿಸಿದರು.

ಚರ್ಚಿತ ವಿಷಯದ ಬಗ್ಗೆ ಪ್ರಭಾರ ಕಾರ್ಯದರ್ಶಿಯವರು ಸಮಜಾಯಿಷಿ ನೀಡಲಿದ್ದು, ಅವಕಾಶ ಮಾಡಿಕೊಡುವಂತೆ ಉಪಾಧ್ಯಕ್ಷರು ವಿನಂತಿಸಿದರು. ಬ್ಯಾಂಕಿನ ಅಟೆಂಡರ್ ಶ್ರೀ ಕೆ.ಶ್ರೀನಿವಾಸ್‌ರವರು ಕಳೆದ 2009 ರಿಂದ ಸಹಕಾರ ಇಲಾಖಾಧಿಕಾರಿಗಳ ಕೋರಿಕೆ ಮೇರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಹಿಂದಿನ ಮಹಾಸಭೆಗಳ ಒತ್ತಾಯದ ಮೇರೆ ಈ ಸಿಬ್ಬಂದಿಯನ್ನು ಬ್ಯಾಂಕಿಗೆ ವಾಪಸ್ ಕಳುಹಿಸುವಂತೆ ಸಹಕಾರ ಇಲಾಖೆಯನ್ನು ಕೋರಿ ಪತ್ರ ನೀಡಿದ್ದು, ಆದರೆ ಇಲಾಖೆಯಲ್ಲಿ ಡಿ ಗ್ರೂಪ್ ನೌಕರರ ಕೊರತೆಯಿರುವುದರಿಂದ ಇವರ ಸೇವೆ ಅವಶ್ಯವಾಗಿದ್ದು ಇಲಾಖೆಯಲ್ಲಿ ಮುಂದುವರಿಸಲು ಸೂಚಿರುತ್ತಾರೆ. ಸರ್ಕಾರದ ಇಲಾಖಾಧಿಕಾರಿಗಳ ಸೂಚನೆಯನ್ನು ನಾವುಗಳು ಪಾಲಿಸಲೇಬೇಕಾದ್ದರಿಂದ ಸರ್ಕಾರದ ಕಛೇರಿಯಲ್ಲಿಯೇ ಅವರ ಸೇವೆ ಮುಂದುವರಿಸಲು ಆಡಳಿತ ಮಂಡಳಿಯು ಅವಕಾಶ ಮಾಡಿಕೊಟ್ಟಿರುವುದಾಗಿ ಪ್ರಭಾರ ಕಾರ್ಯದರ್ಶಿಯವರು ಸಮಜಾಯಿಷಿ ನೀಡಿದರು.

ಇದಕ್ಕೆ ಸದಸ್ಯರು ಸಮಾಧಾನಗೊಳ್ಳದೆ ಆವೇಶಭರಿತವಾಗಿ ಮಾತನಾಡಿದಾಗ ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿ ಯವರು ಉತ್ತರಿಸಿ, ಈಗಾಗಲೇ ಈ ಸಂಬಂಧ ಹಾಗೂ ಇನ್ನಿತರ ವಿಷಯ ಕುರಿತು ಇಲಾಖೆಗೆ ತಾವುಗಳೇ ದೂರು ನೀಡಿರುತ್ತೀರಿ. ಈ ಬಗ್ಗೆ ಬ್ಯಾಂಕಿನಿಂದಲೂ ಸಮಜಾಯಿಷಿಯನ್ನು ಸಹ ಪಡೆದಿರುತ್ತದೆ. ಇಲಾಖೆಯು ನಮ್ಮ ಮೇಲ್ಪಟ್ಟ ಪ್ರಾಧಿಕಾರವಾಗಿದ್ದು ಅದರ ನಿರ್ದೇಶನವನ್ನು ಪಾಲನೆ ಮಾಡಲೇ ಬೇಕಾಗಿರುತ್ತದೆ. ಆದ್ದರಿಂದ ಬ್ಯಾಂಕಿನಿಂದ ಕೈಗೊಂಡಿರುವ ಕ್ರಮವು ಸಮರ್ಪಕವಾಗಿರುವುದಾಗಿ ತಿಳಿಸಿ ಸಮಜಾಯಿಷಿ ನೀಡಿದರು.

ಶ್ರೀ ಎ.ಎಂ.ರಾಮಮೂರ್ತಿಯವರು, ಇಲಾಖೆಯಲ್ಲಿರುವ ಸಿಬ್ಬಂದಿಯನ್ನು ವಾಪಸ್ ಕರೆಸಿಕೊಳ್ಳಲು ಸರ್ವಸದಸ್ಯರ ಸಭೆಯಲ್ಲಿ ಸದಸ್ಯರುಗಳ ಒತ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ಸಿಬ್ಬಂದಿ ವಾಪಸ್ ಕಳುಹಿಸಲು ಇಲಾಖೆಯನ್ನು ಮತ್ತೊಮ್ಮೆ ಕೋರಲು ಒತ್ತಾಯಿಸಿದರು. ಮುಂದುವರಿದು, ಹಲವಾರು ವರ್ಷಗಳ ಹಿಂದಿನ ಅನೇಕ ಸುಸ್ತಿ ಬಾಕಿ ಪ್ರಕರಣಗಳು ಸಾಕಷ್ಟು ಪ್ರಮಾಣದಲ್ಲಿ ಹಾಗೆಯೇ ಮುಂದುವರೆದಿದ್ದು, ಇವುಗಳ ವಸೂಲಾತಿ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕೆಂದು ತಿಳಿಸಿ ಸದಸ್ಯರು ತಮ್ಮ ಮೇಲೆ ನಂಬಿಕೆಯಿಟ್ಟು ಆಯ್ಕೆ ಮಾಡಿರುವುದನ್ನು ಉಲ್ಲೇಖಿಸಿ, ಉತ್ತಮ ಆಡಳಿತ ನೀಡಲು ಕೋರಿದರು ಹಾಗೂ ದಿ|| ಎಂ.ಎಸ್. ಪಾಪಣ್ಣರವರ ಸಂಬಂಧಿತ ಸಾಲಗಳನ್ನು ಸೂಕ್ತ ತೀರ್ಮಾನ ಕೈಗೊಂಡು ಇತ್ಯರ್ಥಗೊಳಿಸುವಂತೆ ಸಲಹೆ ನೀಡಿದರು.

ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿಯವರು ಮಾತನಾಡಿ, ಹಳೆಯ ವರ್ಷಗಳ ಸುಸ್ತಿ ಬಾಕಿಗಳ ಕೆಲ ಮಾಹಿತಿಗಳನ್ನು ನಮ್ಮ ಗಮನಕ್ಕೆ ತಂದಿರುತ್ತೀರಿ. ಇವುಗಳನ್ನು ಇತ್ಯರ್ಥಗೊಳಸಲು ಸಾಕಷ್ಟು ಪ್ರಯತ್ನಪಡುವವರಿದ್ದು ತುಂಬಾ ಹಳೆಯ ವಿಚಾರ ಬಗ್ಗೆ ಪ್ರಸ್ತಾಪಿಸಿ, ಚರ್ಚಿಸುತ್ತಾ ಹೋದಲ್ಲಿ ಮುಂದಿನ ಪ್ರಗತಿಗೆ ಹಿನ್ನಡೆಯಾಗುವುದಾಗಿ ತಿಳಿಸಿದರು. ಹಾಲಿ ಬ್ಯಾಂಕಿಂಗ್ ಕ್ಷೇತ್ರ ತುಂಬಾ ಮುಂದುವರಿದಿದ್ದು ಮುಂದಿನ ಆಗುಹೋಗುಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದಲ್ಲಿ ಶಾಖಾ ವಿಸ್ತರಣೆ ಮುಂತಾದವುಗಳ ಬಗ್ಗೆ ಕ್ರಮವಿಡಲು ಸಾಧ್ಯವಾಗುವುದಾಗಿ ತಿಳಿಸಿದರು. ಆದಾಗ್ಯೂ ಕಾನೂನು ಚೌಕಟ್ಟಿನಲ್ಲಿ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಏನೆಲ್ಲಾ ಸಾಧ್ಯವೊ ಅದನ್ನು ಶಕ್ತಿ ಮೀರಿ ಮಾಡಲು ಸಿದ್ಧರಿದ್ದೇವೆಂದು ಸರ್ವಸದಸ್ಯರ ಸಭೆಗೆ ಮನವರಿಕೆ ಮಾಡುತ್ತಿರುವುದಾಗಿ ತಿಳಿಸಿದರು. ಆದ್ದರಿಂದ ಹಳೆಯ ವಿಚಾರಗಳನ್ನು ಪ್ರಸ್ತಾಪಿಸಿದಲ್ಲಿ ಪ್ರಯೋಜನವಾಗಲಾರದೆಂದು ಸಮರ್ಥಿಸಿದರು.

ಸಭಾಧ್ಯಕ್ಷರು ಮಾತನಾಡಿ, ಬ್ಯಾಂಕಿನ ಅನೆಕ್ಸ್ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಡಿಸಿಸಿ ಬ್ಯಾಂಕಿನವರು ಸದ್ಯದರಲ್ಲೆ ತಮ್ಮ ಸ್ವಂತ ಕಟ್ಟಡಕ್ಕೆ ಬ್ಯಾಂಕಿಂಗ್ ವ್ಯವಹಾರವನ್ನು ಸ್ಥಳಾಂತರಗೊಳಿಸುವವರಿದ್ದು ಪೂರ್ವಬಾವಿಯಾಗಿ ಕಟ್ಟಡ ರಿಪೇರಿ ವಗ್ಯೆರೆಗಳಿಗೆ ಮೊಬಲಗನ್ನು ನೀಡುವುದಾಗಿ ತಿಳಿಸಿರುತ್ತಾರೆ. ಆದರೇ, ಅವರು ನೀಡುವುದಾಗಿ ಭರವಸೆ ಕೊಟ್ಟಿರುವ ಮೊಬಲಗು ಕಡಿಮೆಯಾಗಿರುವುದಾಗಿ ಸಂಬಂಧಿಸಿದ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರನ್ನು ಹಲವಾರು ಬಾರಿ ಬ್ಯಾಂಕಿನವತಿಯಿಂದ ಅಧ್ಯಕ್ಷರು, ನಿರ್ದೇಶಕರೊಂದಿಗೆ ಭೇಟಿಯಾಗಿ ಮನವಿ ಸಲ್ಲಿಸಿರುವುದಲ್ಲದೇ ಬ್ಯಾಂಕಿನ ಆಡಳಿತ ಮಂಡಳಿ ಸಭೆಗೂ ಸಹ ಅವರನ್ನು ಬರಮಾಡಿಕೊಂಡು ಸಾಕಷ್ಟು ಚರ್ಚಿಸಿರುವುದಾಗಿ ಸಭಾಧ್ಯಕ್ಷರು ತಿಳಿಸಿದರು. ಅಲ್ಲದೇ ಬಿಡಿಸಿಸಿ ಬ್ಯಾಂಕಿನವರು ಈಗಾಗಲೇ ಒಂದಷ್ಟು ಮೊಬಲಗನ್ನು ನೀಡಲು ಒಪ್ಪಿದ್ದು, ಆದರೆ ಹೆಚ್ಚಿನ ಮೊಬಲಗಿನ ನಿರೀಕ್ಷೆಯಲ್ಲಿದ್ದು ಸಂದಾಯವಾಗುವ ಆಶಾವಾದ ಹೊಂದಿರುವುದಾಗಿ ತಿಳಿಸಿದರು.

ನಂತರ 2022-23ನೇ ಸಾಲಿನ ಆಡಳಿತ ಮಂಡಳಿ ವರದಿ ಸಮರ್ಪಕವಾಗಿದ್ದು, ಅಂಗೀಕರಿಸಬಹುದೆಂದು ಶ್ರೀ ಡಿ.ವಾಸುದೇವರಾವ್ (ಸ.ಸಂ.R13004)ರವರು ಸೂಚಿಸಿದುದನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**7. 2022-23ನೇ ಸಾಲಿನ ಲೆಕ್ಕಪರಿಶೋಧಿಸಲ್ಪಟ್ಟ (Audited) ಹಣಕಾಸಿನ ತಃಖ್ತೆ (ಲಾಭ-ನಷ್ಟ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆ) ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯವರ ಸಮಾಧಾನವನ್ನು ಅನುಮೋದಿಸುವುದು.**

ವರದಿ ಪುಸ್ತಕ ಪುಟ ಸಂಖ್ಯೆ 28 ರಿಂದ 34ರವರೆಗಿನ ಆಡಿಟ್ಟಾದ ಲಾಭ-ನಷ್ಟ, ಆಸ್ತಿ-ಜವಾಬ್ದಾರಿಯ ಲೆಕ್ಕಪತ್ರ ತಃಖ್ತೆ ಮತ್ತು ಪುಟ 35 ರಿಂದ 66 ರವರೆಗಿನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಲೆಕ್ಕಪರಿಶೋಧಕರು ತಿಳಿಸಿರುವ ನ್ಯೂನತೆಗಳಿಗೆ ಪುಟ 62-64ರಲ್ಲಿ ನೀಡಿರುವ ಆಡಳಿತ ಮಂಡಳಿಯವರ ಸಮಾಧಾನದ ವಿವರವನ್ನು ಸಭೆಯ ಅನುಮೋದನೆಗೆ ಪ್ರಭಾರ ಕಾರ್ಯದರ್ಶಿಯವರು ಮಂಡಿಸಿದರು.

ಸದಸ್ಯರಾದ ಶ್ರೀ ಕೆ.ಆರ್.ಆನಂದಬಾಬುರವರು ಮಾತನಾಡಿ, ಅಮಾನತ್ತಿನಲ್ಲಿದ್ದು ನಿವೃತ್ತರಾಗಿರುವ ಹಿಂದಿನ ಕಾರ್ಯದರ್ಶಿ ಪಿ.ಎಸ್.ಗುರುಪ್ರಸಾದ್‌ರವರ ಮೇಲೆ 2014-15ನೇ ಸಾಲಿನಲ್ಲಿ ಹೂಡಿರುವ ದಾವೆಗಳು ಇತ್ಯರ್ಥಕ್ಕೆ ಬಾಕಿಯಿದ್ದು, ಹಲವಾರು ವರ್ಷಗಳಿಂದ ಮುಂದುವರಿದಿರುವ ಈ ದಾವೆಗಳ ಬಗ್ಗೆ ಗಂಭೀರವಾಗಿ ಪರಿಗಣಿಸಿ ಹಿರಿಯ ವಕೀಲರನ್ನು ನೇಮಿಸಿ ಇತ್ಯರ್ಥಗೊಳಸಲು ಅಗತ್ಯ ಕ್ರಮವಿಡುವಂತೆ ಸಲಹೆ ನೀಡಿದರು. ದಾವಾ ಸಂಬಂಧ ಈವರೆವಿಗೂ ಅಗಿರುವ ನಡವಳಿಕೆ ವಿವರವನ್ನು ಪ್ರಭಾರ ಕಾರ್ಯದರ್ಶಿಯವರು ತಿಳಿಸಿದರು.

ನಂತರ 2022-23ನೇ ಸಾಲಿನ ಲೆಕ್ಕಪರಿಶೋಧಿಸಲ್ಪಟ್ಟ (Audited) ಹಣಕಾಸಿನ ತಃಖ್ತೆ (ಲಾಭ-ನಷ್ಟ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆ) ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯವರ ಸಮಾಧಾನವನ್ನು ಒಪ್ಪಬಹುದೆಂದು ಶ್ರೀ ಕೆ.ಆರ್.ಆನಂದಬಾಬು (ಸ.ಸಂ.R12691) ರವರು ಸೂಚಿಸಿದುದನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

**8. ಲೆಕ್ಕಪರಿಶೋಧಕರ ದೃಢೀಕರಣದಂತೆ ಸದಸ್ಯತ್ವ ಸೇರ್ಪಡೆ/ವಾಪಾಸಾತಿ ಮತ್ತು ನಿಧಿಗಳ ವಾಸ್ತವಿಕ ಬಳಕೆಯ ಅನುಮೋದನೆ.**
ವರದಿ ಪುಸ್ತಕ ಪುಟ ಸಂಖ್ಯೆ 28 ರಿಂದ 34ರವರೆಗಿನ ಸದಸ್ಯತ್ವ ಸೇರ್ಪಡೆ/ವಾಪಾಸಾತಿ ಹಾಗೂ ನಿಧಿಗಳ ಬಳಕೆ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ವಿಶ್ಲೇಷಿಸಿರುವ ವಿವರವನ್ನು ಸಭೆಯ ಅನುಮೋದನೆಗೆ ಪ್ರಭಾರ ಕಾರ್ಯದರ್ಶಿ ಯವರು ಮಂಡಿಸಿದರು.

2022-23ನೇ ಸಾಲಿನ ಸದಸ್ಯತ್ವ ಸೇರ್ಪಡೆ/ವಾಪಾಸಾತಿ ಹಾಗೂ ನಿಧಿಗಳ ಬಳಕೆ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ವಿಶ್ಲೇಷಿಸಿರುವ ವಿವರವನ್ನು ಒಪ್ಪಬಹುದೆಂದು ಶ್ರೀ ಬಿ.ವಿ.ವಿಜಯಕುಮಾರ್ (ಸ.ಸಂ.R13137) ರವರು ಸೂಚಿಸಿದುದನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

**9. 2022-23ನೇ ಸಾಲಿನ ನಿವ್ವಳ ಲಾಭದ ಹಂಚಿಕೆ**
ಪ್ರಭಾರ ಕಾರ್ಯದರ್ಶಿಯವರು ವರದಿ ಪುಸ್ತಕದ ಪುಟ 65ರಲ್ಲಿನ ಸಹಕಾರ ಸಂಘಗಳ ಕಾಯ್ದೆ ಕಲಂ 67, ನಿಯಮ 22, ಉಪನಿಯಮ ಸಂಖ್ಯೆ 109ರ ರೀತ್ಯ ಹಂಚಿಕೆ ಮಾಡಲಾದ 2022-23ನೇ ಸಾಲಿನ ಈ ಕೆಳಕಂಡಂತಿರುವ ನಿವ್ವಳ ಲಾಭದ ವಿಲೇವಾರಿ ಪಟ್ಟಿಯನ್ನು ಸರ್ವಸದಸ್ಯರ ಸಭೆಯ ಮಂಜೂರಾತಿಗೆ ವಿವರಿಸಿದರು. ಇದರಲ್ಲಿ ಕ್ರ.ಸ.11 ರಲ್ಲಿ ಗುಂತಾಯ ಏರಿಳಿತ ನಿಧಿ ತೆಗೆದಿರಿಸಿದ್ದು, ಇದನ್ನು ಹೂಡಿಕೆ ಇಳುವರಿ ನಿಧಿಯೆಂದು ತಿದ್ದುಪಡಿ ಮಾಡಿಕೊಂಡು ಅನುಮೋದನೆ ನೀಡುವಂತೆ ಸಭೆಯಲ್ಲಿ ವಿನಂತಿಸಿದರು.

| | **ವಿವರ** | | | **2022-23ನೇ ಸಾಲಿಗೆ ಹಂಚಿಕೆ** |
|---|---|---|---|---|
| 01 | ಆಪದ್ಧನ ನಿಧಿ | (ಶೇ.25 ರಂತೆ) | ಶೇ.25 | 84,27,771.42 |
| | ಜಾತ ಉಳಿದ ಲಾಭಾಂಶ ಮೊಬಲಗು ರೂ.2,52,83,314/-ಗಳ ಮೇಲೆ | | | |
| 02 | ಸಹಕಾರ ಶಿಕ್ಷಣ ನಿಧಿ (ಸಹಕಾರ ಮಹಾಮಂಡಳ ನಿ.,) | (ಶೇ.2 ರಂತೆ) | ಶೇ.2 | 5,05,700.00 |
| 03 | ಸಹಕಾರ ಶಿಕ್ಷಣ ನಿಧಿ (ಸ.ಪ.ಬ್ಯಾ. ಮಹಾಮಂಡಳ ನಿ.,) | (ಶೇ.1 ರಂತೆ) | ಶೇ.1 | 2,52,900.00 |
| | ಜಾತ ಉಳಿದ ಲಾಭಾಂಶ ರೂ.2,45,24,714/-ಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿದೆ | | | |
| 04 | ಕಟ್ಟಡ ನಿಧಿ | (ಶೇ.10ಕ್ಕೆ ಕಡಿಮೆ ಇಲ್ಲದಂತೆ | ಶೇ.10 | 24,52,471.00 |
| 05 | ಸದಸ್ಯರ ಕ್ಷೇಮ ನಿಧಿ | (ಶೇ.10ಕ್ಕೆ ಮೀರದಂತೆ) | ಶೇ.4 | 9,80,989.00 |
| 06 | ಮರಣ ಪರಿಹಾರ ನಿಧಿ | (ಶೇ.10ಕ್ಕೆ ಮೀರದಂತೆ) | ಶೇ.4 | 9,80,989.00 |
| 07 | ಸಿಬ್ಬಂದಿ ಕ್ಷೇಮ ನಿಧಿ | (ಶೇ.5ಕ್ಕೆ ಮೀರದಂತೆ) | ಶೇ.5 | 12,26,236.00 |
| 08 | ಮಹೋತ್ಸವ ನಿಧಿ | (ಶೇ.10ಕ್ಕೆ ಮೀರದಂತೆ) | ಶೇ.7 | 16,68,452.00 |
| 09 | ಸದಸ್ಯರುಗಳಿಗೆ ಡಿವಿಡೆಂಡ್ | (ಷೇರು ಬಂಡವಾಳಕ್ಕೆ ಶೇ.15 ರಂತೆ) | ಶೇ.15 | 1,24,22,199.00 |
| 10 | ಸಿಬ್ಬಂದಿಗಳಿಗೆ ಎಕ್ಸ್‌ಗ್ರೇಷಿಯಾ (ಬೋನಸ್ ಕಾಯ್ದೆಯಂತೆ) | | | 17,83,407.00 |
| 11 | ಹೂಡಿಕೆ ಇಳುವರಿ ನಿಧಿ (IDR) (ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನಗಳಡಿ) | | | 30,09,971.00 |
| | **ಒಟ್ಟು** | | | **3,37,11,085.42** |

ನಿವ್ವಳ ಲಾಭದ ವಿಲೇವಾರಿ ಬಗ್ಗೆ ಚರ್ಚೆಯಾಗಿ, ಸದಸ್ಯರಾದ ಶ್ರೀ ಎಸ್.ಎಸ್.ಸುರೇಶ್‌ಬಾಬು, ಶ್ರೀ ಎನ್.ಮುರಳಿಧರ್ ರವರುಗಳು ಬ್ಯಾಂಕಿನ ಪ್ರಗತಿ ಹಾಗೂ ಲಾಭ ಗಳಿಕೆಯನ್ನು ಪ್ರಶಂಶಿಸಿ ಶೇ.15 ರ ಡಿವಿಡೆಂಡ್ ವಿತರಣೆಗೆ ಹರ್ಷವ್ಯಕ್ತಪಡಿಸಿ, ಇನ್ನೂ ಹೆಚ್ಚಿನ ಪ್ರಗತಿಗೆ ಶ್ರಮಿಸಲು ಸಿಬ್ಬಂದಿಗಳನ್ನು ಉತ್ತೇಜಿಸುವಂತೆ ಸಲಹೆ ನೀಡಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು, ಬ್ಯಾಂಕಿನ ಲೆಕ್ಕಪತ್ರ ನಿರ್ವಹಣೆ ಬಗ್ಗೆ ನಮ್ಮ ಮೆಚ್ಚುಗೆಯಿದ್ದು, ಸಿಬ್ಬಂದಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವಂತೆ ತಿಳಿಸಿದರು.

ಉಪಾಧ್ಯಕ್ಷರಾದ ಶ್ರೀ ಬಿ.ವಿ.ಗೋಪಾಲರೆಡ್ಡಿಯವರು ಮಾತನಾಡಿ, ಬ್ಯಾಂಕಿನ ಪ್ರಗತಿ ಬಗ್ಗೆ ಸರ್ವಸದಸ್ಯರು ಸಭೆಯಲ್ಲಿ ಹರ್ಷ ವ್ಯಕ್ತಪಡಿಸಿರುವುದು ಸಂತೋಷದ ವಿಷಯವಾಗಿದ್ದು, ಇನ್ನೊಂದೆಡೆ ಬ್ಯಾಂಕಿನ ವಿರುದ್ಧ ಇಲಾಖೆ ದೂರು ಇತ್ಯಾದಿಗಳನ್ನು ಸಲ್ಲಿಸುವ ಪ್ರಯತ್ನವೂ ನಡೆಯುತ್ತಿದ್ದು, ಇದರಿಂದ ಬ್ಯಾಂಕಿನ ಪ್ರಗತಿ ಕುಂಠಿತವಾಗುವುದನ್ನು ಸಹ ಮನಗಾಣಬೇಕೆಂದು ತಿಳಿಸಿದರು.

ನಂತರ ನಿವ್ವಳ ಲಾಭದ ವಿಲೇವಾರಿ ಸಮರ್ಪಕವಾಗಿದ್ದು, ಒಪ್ಪಬಹುದೆಂದು ಶ್ರೀ ಪಿ.ಕೆ.ಸುರೇಶ್ (ಸ.ಸಂ.R06938)ರವರು ಸೂಚಿಸಿದುದನ್ನು ಶ್ರೀ ಎನ್.ಮುರಳಿಧರ್ (ಸ.ಸಂ.R09332)ರವರು ಅನುಮೋದಿಸಿದುದನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು.

**10. 2022-23ನೇ ಸಾಲಿಗೆ ಪಡೆಯಲಾದ ಆಯವ್ಯಯ ಹಾಗೂ ಆ ಸಾಲಿನಲ್ಲಿ ಆದ ವೆಚ್ಚಗಳನ್ನೊಳಗೊಂಡಂತೆ 2023-24 ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿ ಮಂಜೂರಾತಿ ಪಡೆಯುವುದು**.

ಪ್ರಭಾರ ಕಾರ್ಯದರ್ಶಿಯವರು, ವರದಿ ಪುಸ್ತಕದ ಪುಟ 66ರಲ್ಲಿರುವಂತೆ, 2022-23ನೇ ಸಾಲಿಗೆ ಪಡೆಯಲಾದ ಆಯವ್ಯಯ ಹಾಗೂ ಆ ಸಾಲಿನಲ್ಲಿ ಆದ ವೆಚ್ಚಗಳನ್ನೊಳಗೊಂಡಂತೆ 2023-24 ನೇ ಸಾಲಿನ ಆಯವ್ಯಯವನ್ನು ಸರ್ವಸದಸ್ಯರ ಸಭೆಯ ಮಂಜೂರಾತಿಗೆ ಮಂಡಿಸಿದರು.

ಮುಂದುವರಿದು, ಬ್ಯಾಂಕಿನ Digital Banking ಸೇವೆಯನ್ನು ಪ್ರಾರಂಭಿಸಿದ್ದು, ಇನ್ನೂ ಹೆಚ್ಚಿನ ವ್ಯವಸ್ಥೆಗಳಿಗೆ ಆರ್ಥಿಕ ಸಾಲಿನಲ್ಲಿ ವೆಚ್ಚವಾಗಲಿದ್ದು ಇದಕ್ಕೆ ಆಯವ್ಯಯದಲ್ಲಿ ಹೆಚ್ಚುವರಿ ಮೊಬಲಗನ್ನು ಕಾಯ್ದಿರಿಸಬೇಕಾಗಿರುವುದರಿಂದ 2023-24ನೇ ಸಾಲಿಗೆ ಮುದ್ರಣ ಲೇಖನ ಸಾಮಗ್ರಿ ಹಾಗೂ ಗಣಕಯಂತ್ರ ಖಾತೆಗೆ ರೂ.4.00 ಲಕ್ಷಗಳ ಬದಲಾಗಿ ರೂ.10.00 ಲಕ್ಷಗಳನ್ನು ಬಡ್ಜೆಟ್ ಮಂಜೂರಾತಿಗೆ ಅನುಮೋದನೆ ನೀಡಬೇಕೆಂದು ಪ್ರಭಾರ ಕಾರ್ಯದರ್ಶಿಯವರು ಕೋರಿದರು. ಮುಂದುವರಿದು, ಬ್ಯಾಂಕಿನ Digital Banking ಸೌಲಭ್ಯದ ಸಂಬಂಧ ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಎಂ.ಎಸ್.ಪವನ್‌ಕುಮಾರ್ ಹಾಗೂ ಶ್ರೀ ಎನ್.ವೆಂಕಟಾಚಲಂರವರ ಶ್ರಮ ಅಪಾರವಾದುದೆಂದು ತಿಳಿಸಿದರು,

ಶ್ರೀ ಪಿ.ವೆಂಕಟೇಶ್, ಶ್ರೀ ಎನ್.ಮುರಳಿಧರ್ ಮತ್ತು ಶ್ರೀ ಪಿ.ಕೆ.ಸುರೇಶ್‌ರವರುಗಳು, ರಾಜ್ಯ ಸರ್ಕಾರದ ಆದೇಶದಂತೆ ಸಿಬ್ಬಂದಿಗಳಿಗೆ ಏಳನೇ ವೇತನ ಆಯೋಗ ಶಿಫಾರಸ್ ಮಾಡಿರುವ ಶೇ.17ರ ಮಧ್ಯಂತರ ಪರಿಹಾರದ ಮೊಬಲಗನ್ನು ಪಾವತಿಸುವಂತೆ ಹಾಗೂ ವಸೂಲಾತಿ ಸಿಬ್ಬಂದಿಗಳಿಗೆ ಹೆಚ್ಚಿನ ಪ್ರೋತ್ಸಾಹ ಧನ ನೀಡಿ ಉತ್ತೇಜಿಸಲು ಸೂಚಿಸಿದರು.

ನಂತರ ಮೇಲ್ಕಂಡ ಖಾತೆಯ ತಿದ್ದುಪಡಿ ಮಾಡಿ ಈ ಕೆಳಕಂಡಂತೆ ಅನುಮೋದಿಸಲಾಯಿತು.

| | ವಿವರ | 2022-23ನೇ ಸಾಲಿಗೆ ಮಂಜೂರಾತಿ ಪಡೆದಿರುವುದು | 2022-23ನೇ ಸಾಲಿನಲ್ಲಿ ಖಚಾಸಿಗಿರುವುದು | 2022-23ನೇ ಸಾಲಿನಲ್ಲಿ ಹೆಚ್ಚಿಗೆ ಖಚಾಸಿಗಿರುವುದು | 2023-24ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ |
|---|---|---|---|---|---|
| 1 | ಸಿಬ್ಬಂದಿ ಖರ್ಚು, ಭವಿಷ್ಯ ನಿಧಿ ವಗೈರೆ ಪಾವತಿಗಳು | 4,30,00,000.00 | 3,57,53,156.94 | 0.00 | 4,50,00,000.00 |
| 2 | ಮುದ್ರಣ, ಲೇಖನ ಸಾಮಗ್ರಿ ಹಾಗೂ ಗಣಕಯಂತ್ರ | 4,00,000.00 | 3,10,072.83 | 0.00 | 10,00,000.00 |
| 3 | ಚಾರ್ಜಸ್ ಜನರಲ್/ಪೂಜಾ/ಓಡಾಟದ ವೆಚ್ಚ ವಗೈರೆ | 10,00,000.00 | 8,96,081.99 | 0.00 | 10,00,000.00 |
| 4 | ವಿಮೆ ಮತ್ತು ತೆರಿಗೆಗಳು | 30,00,000.00 | 22,82,213.42 | 0.00 | 30,00,000.00 |
| 5 | ಕಟ್ಟಡ ತೆರಿಗೆ | 1,50,000.00 | 1,01,422.00 | 0.00 | 1,50,000.00 |
| 6 | ಅಂಚೆ ಮತ್ತು ದೂರವಾಣಿ | 6,00,000.00 | 4,38,977.99 | 0.00 | 6,00,000.00 |
| 7 | ವಿದ್ಯುತ್‌ಚಕ್ತಿ ವೆಚ್ಚ | 6,50,000.00 | 5,90,054.00 | 0.00 | 6,50,000.00 |
| 8 | ಲೆಕ್ಕಪರಿಶೋಧನಾ ಶುಲ್ಕ | 10,00,000.00 | 7,42,500.00 | 0.00 | 10,00,000.00 |
| 9 | ಕಟ್ಟಡ ದುರಸ್ತಿ ಹಾಗೂ ನಿರ್ವಹಣೆ | 1,00,00,000.00 | 4,98,003.22 | 0.00 | 1,00,00,000.00 |
| 10 | ಕಾನೂನು ವೆಚ್ಚ | 10,00,000.00 | 45,000.00 | 0.00 | 10,00,000.00 |
| 11 | ಶಾಖೆಗಳ ಕಟ್ಟಡ ಬಾಡಿಗೆ | 15,00,000.00 | 14,43,312.00 | 0.00 | 16,00,000.00 |
| 12 | ಸರ್ವಸದಸ್ಯರ ಸಭೆ ಖರ್ಚು | 20,00,000.00 | 4,44,923.00 | 0.00 | 20,00,000.00 |
| 13 | ನಿರ್ದೇಶಕರ ಸಭಾ ಭತ್ಯೆ | 20,00,000.00 | 8,29,750.00 | 0.00 | 20,00,000.00 |
| 14 | ಚುನಾವಣಾ ವೆಚ್ಚ | 12,00,000.00 | 11,67,314.66 | 0.00 | 0.00 |
| | **ಒಟ್ಟು** | **6,75,00,000.00** | **4,55,42,782.05** | **0.00** | **6,90,00,000.00** |

ಸದಸ್ಯರಾದ ಶ್ರೀ ಎನ್.ಮುರಳಿಧರ್‌ರವರು, ಚುನಾವಣಾ ಸಂಬಂಧ ಆದ ವೆಚ್ಚದ ವಿವರ ಕೋರಿದ್ದನ್ನು ನೀಡಲಾಯಿತು. ನಂತರ 2022-23ನೇ ಸಾಲಿಗೆ ಪಡೆಯಲಾದ ಆಯವ್ಯಯ ಹಾಗೂ ಆ ಸಾಲಿನಲ್ಲಿ ಆದ ವೆಚ್ಚಗಳನ್ನೊಳಗೊಂಡಂತೆ 2023-24 ನೇ ಸಾಲಿಗೆ ರೂ.6.90 ಕೋಟಿಗಳ ಆಯವ್ಯಯದ ಅಂದಾಜು ಪಟ್ಟಿಯನ್ನು ಒಪ್ಪಬಹುದೆಂದು ಶ್ರೀ ಎಸ್.ಎಸ್.ಸುರೇಶ್ ಬಾಬು (ಸ.ಸಂ.R14685) ರವರು ಸೂಚಿಸಿದುದನ್ನು ಶ್ರೀ ಎನ್.ಸುಬ್ರಮಣ್ಯರಾಜು (ಸ.ಸಂ.R06720)ರವರು ಅನುಮೋದಿಸಿದರು. ಇದಕ್ಕೆ ಸಭೆಯು ಸರ್ವಾನುಮತದ ಒಪ್ಪಿಗೆಯ ಮಂಜೂರಾತಿ ನೀಡಿತು.

**11. ಉಪನಿಯಮ ತಿದ್ದುಪಡಿ ಅನುಮೋದಿಸುವುದು.**

ಪ್ರಭಾರ ಕಾರ್ಯದರ್ಶಿಯವರು ಪುಟ 66ರಲ್ಲಿರುವಂತೆ ಬ್ಯಾಂಕಿನ ಸದಸ್ಯರನ್ನು ಹೆಚ್ಚುವರಿ ಮಾಡಿ ವಹಿವಾಟನ್ನು ವಿಸ್ತರಿಸಿ ಶಾಖೆಗಳನ್ನು ತೆರೆಯುವ ಸಲುವಾಗಿ ಬ್ಯಾಂಕಿನ ಕಾರ್ಯಕ್ಷೇತ್ರ ವಿಸ್ತರಣೆಗೆ ಆಡಳಿತ ಮಂಡಳಿಯು ಉಪನಿಯಮ ಸಂಖ್ಯೆ: 3 ಕ್ಕೆ ತಿದ್ದುಪಡಿ ತರಲು ಉದ್ದೇಶಿಸಿರುವುದನ್ನು ಸಭೆಯ ಅನುಮೋದನೆ ಮಂಡಿಸಿದರು.

| ಹಾಲಿ ಇರುವ ಉಪವಿಧಿ | ತಿದ್ದುಪಡಿಗೆ ಪ್ರಸ್ತಾಪಿಸಿದ ಉಪವಿಧಿ | ತಿದ್ದುಪಡಿಗೆ ಕಾರಣ |
|---|---|---|
| 3) **ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :** ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಬದಲಾವಣೆಯಾಗಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ (ಜಿಲ್ಲಾ ವ್ಯಾಪ್ತಿಯೊಳಗಿನ ಕಾರ್ಯಕ್ಷೇತ್ರ ವಿಸ್ತರಣೆ ಹೊರತುಪಡಿಸಿ) ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ರಿಸರ್ವ್ ಬ್ಯಾಂಕಿನ ಪೂರ್ವಭಾವಿ ಮಂಜೂರಾತಿ ಅವಶ್ಯಕ. | 3) **ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :** ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಕರ್ನಾಟಕ ರಾಜ್ಯದ ಎಲ್ಲಾ ಪ್ರದೇಶಗಳನ್ನು ಒಳಗೊಂಡಿರುತ್ತದೆ. ಕಾರ್ಯವ್ಯಾಪ್ತಿ ವಿಸ್ತರಣೆ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯವಾಗತಕ್ಕದ್ದು. | ಆಡಳಿತ ಮಂಡಳಿ ನಡವಳಿಕೆ ಅನ್ವಯ |

ನಂತರ ಈ ಮೇಲ್ಕಂಡ ಉಪನಿಯಮ ಪ್ರಸ್ತಾವನೆಯನ್ನು ಒಪ್ಪಬಹುದೆಂದು ಶ್ರೀ ಪಿ.ಎಂ.ಸುಂದರ್ (ಸ.ಸಂ.R06670) ರವರು ಸೂಚಿಸಿದುದನ್ನು ಶ್ರೀ ಎ.ಎಂ.ರಾಮಮೂರ್ತಿ (ಸ.ಸಂ.R10375)ರವರು ಅನುಮೋದಿಸಿದರು. ಇದನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**12. ಮೂರು ವರ್ಷ ಮೇಲ್ಪಟ್ಟು ಪಾವತಿಯಾಗದ 2018-19ನೇ ಸಾಲಿನ ಡಿವಿಡೆಂಡ್ ಮೊಬಲಗನ್ನು ಸರ್ವಸದಸ್ಯರ ಸಭೆ ಅನುಮತಿ ಪಡೆದು ಉಪನಿಯಮ ರೀತ್ಯ ಆಪದ್ಧನ ನಿಧಿ (Reserve Fund)ಗೆ ವರ್ಗಾಯಿಸುವ ಬಗ್ಗೆ.**

ಪ್ರಭಾರ ಕಾರ್ಯದರ್ಶಿಯವರು ಪುಟ 22ರಲ್ಲಿರುವಂತೆ ವಿಷಯ ಕುರಿತ ಆಡಳಿತ ಮಂಡಳಿ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಿದರು.

ಹಂಚಿಕೆಯಾಗಿ ಮೂರು ವರ್ಷ ಮೇಲ್ಪಟ್ಟು ಪಾವತಿಯಾಗದ 2018-19ನೇ ಸಾಲಿನ ಡಿವಿಡೆಂಡ್ ಮೊಬಲಗನ್ನು ಕಾಯ್ದೆ/ ಉಪನಿಯಮ ರೀತ್ಯ ಆಪದ್ಧನ ನಿಧಿಗೆ ವರ್ಗಾಯಿಸಬಹುದೆಂದು ಶ್ರೀ ಪಿ.ವೆಂಕಟೇಶ್ (ಸ.ಸಂ.R07554)ರವರು ಸೂಚಿಸಿದುದನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**13. ವಸೂಲಾಗದ್ದೆಂದು ಪರಿಗಣಿಸಲಾದ ಪ್ರಕರಣಗಳಲ್ಲಿ ಹೋಕುಬಾಕಿ (ಬ್ಯಾಡ್ ಡೆಟ್ಸ್) ಸಾಲಗಳ ಬಗ್ಗೆ ಸೂಕ್ತ ರಿಯಾಯಿತಿ ನೀಡಿ ಇತ್ಯರ್ಥಗೊಳಿಸುವ ಬಗ್ಗೆ.**

ಪ್ರಭಾರ ಕಾರ್ಯದರ್ಶಿಯವರು ಪುಟ 22ರಲ್ಲಿರುವಂತೆ ವಿಷಯ ಕುರಿತ ಆಡಳಿತ ಮಂಡಳಿ ಪ್ರಸ್ತಾವನೆಯನ್ನು ಸಭೆಯ ಒಪ್ಪಿಗೆಗೆ ಮಂಡಿಸಿ, ವಿಷಯ ಕುರಿತ ಸಂಕ್ಷಿಪ್ತ ವಿವರ ನೀಡಿದರು.

ಬ್ಯಾಂಕಿನ ಒಟ್ಟಾರೆ ಸಾಲಗಳ ಪೈಕಿ ಸುಮಾರು ರೂ.17.58 ಕೋಟಿಗಳಷ್ಟು ಮೊಬಲಗು ಸುಸ್ತಿಯಾಗಿದ್ದು, ಇದರ ವಸೂಲಾತಿಗೆ ಗಂಭೀರವಾಗಿ ಪ್ರಯತ್ನಿಸುವಂತೆ ಲೆಕ್ಕಪರಿಶೋಧಕರು ತಮ್ಮ ಸಲಹೆ ಸೂಚನೆಗಳಡಿ ಸೂಚಿಸಿರುತ್ತಾರೆ. ಈ ಪೈಕಿ ಹಲವಾರು ವರ್ಷಗಳ ಹಿಂದಿನ ಪ್ರಕರಣಗಳೇ ಹೆಚ್ಚಿದ್ದು, ಇವುಗಳನ್ನು ಇತ್ಯರ್ಥಗೊಳಿಸಿದಲ್ಲಿ ಬ್ಯಾಂಕಿನ ಆರ್ಥಿಕ ವಹಿವಾಟು ಮುಂದಿನ ದಿನಗಳಲ್ಲಿ ಸುಗಮವಾಗಿ ನಡೆಯಲು ಅವಕಾಶವಾಗಿ ಶಾಖಾ ವಿಸ್ತರಣೆಗೂ ಸಹಕಾರಿಯಾಗಲಿದೆ.

ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಸುಸ್ತಿ ಸಾಲಗಳ ತಾಂತ್ರಿಕ ವಜಾ (Technical Write-off), ಏಕಕಾಲಿಕ ತೀರುವಳಿ ಯೋಜನೆ (OTS), ಸುಸ್ತಿ ರಾಜಿ ಪರಿಹಾರ (Compromise Settlement) ಗಳಿಗೆ ವಿವಿಧ ಸುತ್ತೋಲೆಗಳನ್ನು ಹೊರಡಿಸಿದೆ. ಈ ಸುತ್ತೋಲೆಯಂತೆ ಆಡಳಿತ ಮಂಡಳಿಗೆ ಹೆಚ್ಚಿನ ಅಧಿಕಾರ ನೀಡಿದ್ದು, ಜಾರಿಗೆ ತರಲು ಸೂಕ್ತ ನಿಯಮಾವಳಿ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ತಜ್ಞರ ಸಹಕಾರದಿಂದ ನಿಯಮಾವಳಿ ರೂಪಿಸಿ ಜಾರಿಗೆ ತರಲಿರುವುದನ್ನು ಮಹಾಸಭೆ ಗಮನಕ್ಕೆ ತರುತ್ತಿರುವುದಾಗಿ ತಿಳಿಸಿ ಚರ್ಚೆಗೆ ಮಂಡಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು ಅನುತ್ಪಾದಕ ಬಾಕಿಗಳ ಬಗ್ಗೆ ಮಾತನಾಡಿ, ಕೇವಲ ನಾಲ್ಕಾರು ಪ್ರಕರಣಗಳು ಇತ್ಯರ್ಥಗೊಂಡಲ್ಲಿ ಬ್ಯಾಂಕಿನ ಬಹುತೇಕ ಎನ್.ಪಿ.ಎ ಪ್ರಮಾಣ ಶೂನ್ಯಕ್ಕೆ ಬರಲಿದ್ದು ಇಂತಹ ಪ್ರಕರಣಗಳನ್ನು ಗುರುತಿಸಿ ಕಾನೂನು ಚೌಕಟ್ಟಿನಲ್ಲಿ ಸಿವಿಲ್/ಕ್ರಿಮಿನಲ್ ದಾವೆಗಳನ್ನು ದಾಖಲಿಸಿ ಇತ್ಯರ್ಥಗೊಳಿಸಲು ಕ್ರಮವಿಡುವಂತೆ ಸಲಹೆ ನೀಡಿದರು.

ಮುಂದುವರಿದು, ಏಕಕಾಲಿಕ ಸಾಲ ತೀರುವಳಿಯಡಿ ಇತ್ಯರ್ಥಕ್ಕೆ ಬಾಕಿಯಿರುವ ಪ್ರಕರಣಗಳು ನ್ಯಾಯಾಲಯದ ವ್ಯಾಪ್ತಿಯಲ್ಲಿ ಪ್ರಶ್ನಿತವಾಗಿದ್ದು ಸದಸ್ಯರ ಹಾಗೂ ಬ್ಯಾಂಕಿನ ಹಿತದೃಷ್ಟಿಯಿಂದ ಅಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸುವಂತೆ ಶ್ರೀ ವೈ.ಎನ್.ಜಯರಾಂರವರ ಪ್ರಕರಣವನ್ನು ಉದಾಹರಿಸಿ, ವಿನಂತಿಸಿದರು. ಶ್ರೀ ವೈ.ಎನ್.ಜಯರಾಂರವರ ಸುಸ್ತಿ ವಸೂಲಾತಿ ದಾವೆಯು ನ್ಯಾಯಾಲಯದ ವ್ಯಾಪ್ತಿಯಲ್ಲಿ ಪ್ರಶ್ನಿತವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ಸದಸ್ಯರಾದ ಶ್ರೀ ಸಿದ್ದೆಲ್ಲಪ್ಪರವರು ತಮ್ಮ ಪತ್ನಿ ಶ್ರೀಮತಿ ಪಿ.ಕಮಲರವರ ಹೆಸರಿನಲ್ಲಿನ ಸಾಲ ಸುಸ್ತಿಯಾಗಿ ಮರುಪಾವತಿ ಬಗ್ಗೆ ಆದ ಪ್ರಕರಣವನ್ನು ಸಭೆಯಲ್ಲಿ ವಿವರಿಸಲು ಮುಂದಾದಾಗ ಸಭಾಧ್ಯಕ್ಷರು ಈ ಬಗ್ಗೆ ಆಡಳಿತ ಮಂಡಳಿಗೆ ಮಾಹಿತಿಯಿದ್ದು ಇತ್ಯರ್ಥಗೊಳಿಸುವುದಾಗಿ ಭರವಸೆ ನೀಡಿ ಸದಸ್ಯರನ್ನು ಸಮಾಧಾನಗೊಳಿಸಿದರು.

ಸಭಾಧ್ಯಕ್ಷರು ಮಾತನಾಡಿ ಶ್ರೀಮತಿ ಪಿ.ಕಮಲ, ಶ್ರೀಮತಿ ಪ್ರಸನ್ನಕುಮಾರಿ, ಶ್ರೀಮತಿ ಕಮಲಮ್ಮ ಮುಂತಾದವರು ಪತ್ರ ನೀಡಿ ತಮ್ಮ ಸುಸ್ತಿ ಬಾಕಿಗಳನ್ನು ಇತ್ಯರ್ಥಗೊಳಿಸುವಂತೆ ಕೋರಿರುವ ವಿವರವನ್ನು ಸಭೆಗೆ ವಿವರಿಸಿದರು. ನಂತರ ವಿಷಯ ಕುರಿತ ಸರ್ವಸದಸ್ಯರ ಸಭೆ ಚರ್ಚೆಯಂತೆ ಆಡಳಿತ ಮಂಡಳಿಗೆ ಅಧಿಕಾರ ನೀಡುವ ಬಗ್ಗೆ ತೀರ್ಮಾನಿಸಿ ಮೇಲ್ಕಂಡ ಪ್ರಕರಣಗಳನ್ನೊಳಗೊಂಡಂತೆ ಇನ್ನಿತರ ಇಂತಹ ಪ್ರಕರಣಗಳನ್ನು ಗುರುತಿಸಿ ಸೂಕ್ತ ರಿಯಾಯಿತಿ ನೀಡಿ ಇತ್ಯರ್ಥಗೊಳಿಸಲು ಆಡಳಿತ ಮಂಡಳಿಗೆ ಸಭೆ ಸಂಪೂರ್ಣ ಅಧಿಕಾರ ನೀಡಿತು. ಇದನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.ಸದಸ್ಯರಾದ ಶ್ರೀ ಎನ್.ಮುರಳಿಧರ್‌ರವರು ಮಾತನಾಡಿ, OTS, Write-Off, Technical Write-Off & Concession Settlement ಗಳಿಗೆ ನಿಯಮಾವಳಿಗಳನ್ನು ರಚಿಸಿ ಜಾರಿಗೊಳಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಿದ್ದು ಈ ವ್ಯಾಪ್ತಿಯಲ್ಲಿ ಕ್ರಮವಿಡಲು ಸೂಚಿಸಿದರು. ಮುಂದುವರಿದು ಆರ್ಥಿಕ ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಿ ಇತ್ಯರ್ಥಗೊಳಿಸು ವಂತೆ ಸೂಚಿಸಿ, ಈ ನಿಟ್ಟಿನಲ್ಲಿ ಆಡಳಿತ ಮಂಡಳಿಗೆ ಅಧಿಕಾರ ನೀಡುವುದಾಗಿ ತಿಳಿಸಿದರು. ಅಲ್ಲದೇ, ಸರ್ವಸದಸ್ಯರ ಸಭೆಯಲ್ಲಿ ಕೆಲ ಸುಸ್ತಿ ಪ್ರಕರಣಗಳ ಇತ್ಯರ್ಥಕ್ಕೆ ಚರ್ಚೆಯಾಗುತ್ತಿದ್ದು, ಇವುಗಳನ್ನು ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಚರ್ಚಿಸಿ ಆಖೈರುಗೊಳಿಸಲು ಆಡಳಿತ ಮಂಡಳಿಗೆ ಆಧಿಕಾರ ನೀಡುವುದು ಹಾಗೂ ಇದಕ್ಕೆ ಇದಕ್ಕೆ ನಮ್ಮ ಸಹಮತವಿರುವುದಾಗಿ ತಿಳಸಿದರು. ಇದನ್ನು ಸಭೆಯಲ್ಲಿ ಒಪ್ಪಲಾಯಿತು.

ಬ್ಯಾಂಕಿನ ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿನ ಏಕಕಾಲಿಕ ಸಾಲ ತೀರುವಳಿಯಡಿ ಮೌಲ್ಯಾಧಾರಗಳಿಲ್ಲದ ಪ್ರಕರಣಗಳನ್ನು ಗುರುತಿಸಿ ಆಖೈರುಗೊಳಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಸಹಮತವಿರುವುದಾಗಿ ಸಭೆಯಲ್ಲಿ ತಿಳಿಸಿದ್ದನ್ನು ಒಪ್ಪಲಾಯಿತು. ನಂತರ ವಸೂಲಾಗದ್ದೆಂದು ಪರಿಗಣಿಸಲಾದ ಪ್ರಕರಣಗಳಲ್ಲಿ ನಿಯಮಾವಳಿ ರೀತ್ಯ ಕ್ರಮವಿಟ್ಟು ಸುಸ್ತಿ ಖಾತೆಗಳನ್ನು ಆಖೈರುಗೊಳಿಸಲು ಸದಸ್ಯರಾದ ಶ್ರೀ ಬಿ.ಸಿ.ವೆಂಕಟೇಶ್ (ಸ.ಸಂ.R14892)ರವರು ಸೂಚಿಸಿದನ್ನು ಶ್ರೀ ಬಿ.ಎಲ್.ಅರವಿಂದ್ ಕುಮಾರ್ (ಸ.ಸಂ.R11770)ರವರು ಅನುಮೋದಿಸಿದರು. ಇದನ್ನು ಸಭೆಯಲ್ಲಿ ಒಪ್ಪಲಾಯಿತು.

**14. ಭಾರತೀಯ ರಿಸರ್ವ್ ಬ್ಯಾಂಕಿನ DoS.CO.ARG/SEC.01/08.91.001/2021-22, dtd.27.04.2021 ರ ಪ್ರಕಾರ 2023-24ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಅನುಮೋದನೆ ಬಗ್ಗೆ.**

ಪ್ರಭಾರ ಕಾರ್ಯದರ್ಶಿಯವರು ಪುಟ 26ರಲ್ಲಿರುವಂತೆ ವಿಷಯ ಕುರಿತ ಪ್ರಸ್ತಾವನೆಯನ್ನು ಸಭೆಯ ಒಪ್ಪಿಗೆಗೆ ಮಂಡಿಸಿ, ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಲೆಕ್ಕಪರಿಶೋಧನಾ ಇಲಾಖೆ ಅನುಮೋದಿತ ಪಟ್ಟಿಯಲ್ಲಿನ ಆಡಿಟ್ ಸಂಸ್ಥೆಗಳಾದ ಈ ಕೆಳಕಂಡ ಎರಡು ಸಂಸ್ಥೆಗಳನ್ನು ಆದ್ಯತೆ ಮೇರೆ ಇಲಾಖೆ ನಿಗದಿಪಡಿಸುವ ಶುಲ್ಕದ ಮೇರೆ ಆಡಳಿತ ಮಂಡಳಿಯು ಗೊತ್ತುಪಡಿಸಿದ್ದು, ಅನುಮೋದನೆಗೆ ಮಂಡಿಸಿದರು.

1. **M/s R S T and Co.,**
   Chartered Accountants
   (Reg. No.013239s), No.222,
   1st & 2nd Floor, 80 Ft. Service Road,
   12th Block, Nagarabhavi
   Bangalore-560 072

2. **M/s MNS & Co.,**
   Chartered Accountants,
   (Reg. No.03968s),
   No.163, 2nd Floor,
   R.V.Road, Near Minarva Circle
   Bangalore-560 004

ಈ ಪೈಕಿ ಮೊದಲ ಆದ್ಯತೆಯಾಗಿ ಎರಡು ವರ್ಷಗಳ ಕಾಲ ಲೆಕ್ಕಪರಿಶೋಧಿಸಿದ M/s R S T and Co., ಸಂಸ್ಥೆ ಯವರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಡಿ 2023-24ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕ ರನ್ನಾಗಿ ಮರು ನೇಮಕ (Re Appointment) ಮಾಡಲು ತೀರ್ಮಾನಿಸಿರುವ ಆಡಳಿತ ಮಂಡಳಿಯ ಈ ಪ್ರಸ್ತಾವನೆಗೆ ಸರ್ವಸದಸ್ಯರ ಸಭೆಯು ಸರ್ವಾನುಮತದ ಅನುಮೋದನೆ ನೀಡಿತು.

**15. ಇತರ ಬ್ಯಾಂಕುಗಳಿಂದ ಪಡೆಯಬಹುದಾದ 10 ಕೋಟಿ ರೂ.ಗಳ ಸಾಲದ ಪರಿಮಿತಿಯನ್ನು ಮಂಜೂರು ಮಾಡುವುದುಃ**

ಪ್ರಭಾರ ಕಾರ್ಯದರ್ಶಿಯವರು ವಿಷಯವನ್ನು ಸರ್ವಸದಸ್ಯರ ಸಭೆಯ ಮಂಜೂರಾತಿಗೆ ಮಂಡಿಸಿದರು. ಇದನ್ನು ಸಭೆಯಲ್ಲಿ ಒಪ್ಪಿ, ರೂ. 10.00 ಕೋಟಿ ಸಾಲದ ಪರಿಮಿತಿಯನ್ನು ಮಂಜೂರು ಮಾಡಲು ಸರ್ವಸದಸ್ಯರ ಸಭೆಯು ಸರ್ವಾನುಮತದ ಅನುಮೋದನೆ ನೀಡಿತು.

**16. ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಬಹುದಾದ ಇತರೆ ವಿಷಯಗಳು:**

ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳಡಿ ಚರ್ಚಿಸಲು ಶ್ರೀ ಪಿ.ವೆಂಕಟೇಶ್, ಶ್ರೀ ಪಿ.ಕೆ.ಸುರೇಶ್, ಶ್ರೀ ಎಸ್.ಎಸ್.ಸುರೇಶ್‌ಬಾಬು ಹಾಗೂ ಶ್ರೀ ಎನ್.ಮುರಳಿಧರ್‌ರವರುಗಳು ಪತ್ರ ನೀಡಿರುವ ವಿವರವನ್ನು ಸಭೆಗೆ ವಿವರಿಸಿ, ಇದರಲ್ಲಿನ ಹಲವಾರು ವಿಚಾರಗಳು ಆಯಾ ವಿಷಯಗಳಡಿ ಚರ್ಚೆಯಾಗಿ ಪ್ರತ್ಯುತ್ತರವನ್ನೂ ಸಹ ನೀಡಿರುವುದಾಗಿ ಪ್ರಭಾರ ಕಾರ್ಯದರ್ಶಿಯವರು ಸಭೆಗೆ ನೀಡಿದರು.

ನಂತರ ಅಧ್ಯಕ್ಷರ ಅನುಮತಿಯೊಡನೆ ಸದಸ್ಯರುಗಳು ತಮ್ಮ ಚರ್ಚೆಯಲ್ಲಿ ಸಲಹೆ ಸೂಚನೆಗಳನ್ನು ನೀಡಿದರು.

ಇತರೆ ವಿಷಯಗಳಡಿ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಶ್ರೀ ಎಸ್.ಎಸ್.ಸುರೇಶ್‌ಬಾಬುರವರು ನೀಡಿದ ಪತ್ರದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ, ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಗೌರವಕ್ಕೆ ಹಾಗೂ ಬ್ಯಾಂಕಿನ ಹಿತಾಸಕ್ತಿಗೆ ಧಕ್ಕೆ ತರುವಂತಹ ಪದ ಬಳಕೆ ಮಾಡಿರುವುದನ್ನು ಸಭಾಧ್ಯಕ್ಷರು ಸಭೆ ಗಮನಕ್ಕೆ ತಂದು ಇಂತಹ ಪದ ದಾಖಲಿಸದೇ ಕ್ರಮವಿಡುವುದಾಗಿ ತಿಳಿಸಿದಾಗ, ಈ ಪತ್ರ ಹಾಗೂ ಇದರಲ್ಲಿ ಬಳಸಿರುವ ಪದವನ್ನು ಹಿಂಪಡೆಯುತ್ತಿರುವುದಾಗಿ ಶ್ರೀ ಎಸ್.ಎಸ್.ಸುರೇಶ್ ಬಾಬುರವರು ಸಭೆ ಸಮಕ್ಷಮ ತಿಳಿಸಿದರು. ಮುಂದುವರಿದು ತಾವು ಇಲಾಖೆಗೆ ನೀಡಿದ ದೂರುಗಳಲ್ಲಿ ಕೆಲ ದಾಖಲಾತಿಗಳನ್ನು ಕೋರಿದ್ದು, ಇನ್ನೂ ನನಗೆ ನೀಡಿಲ್ಲವೆಂದು ತಿಳಿಸಿ ನನ್ನ ಪ್ರಕರಣವೊಂದರಲ್ಲಿ ನನಗೆ ನ್ಯಾಯ ದೊರಕಿಸಿಕೊಟ್ಟಲ್ಲಿ ನಾನು ಹೂಡಿರುವ ಎಲ್ಲಾ ದಾವೆಗಳನ್ನು ಹಿಂಪಡೆಯುವುದಾಗಿ ಸರ್ವಸದಸ್ಯರ ಸಭೆ ಸಮಕ್ಷಮ ತಿಳಿಸಿದರು.

ಶ್ರೀ ಎಸ್.ಎಸ್.ಸುರೇಶ್ ಬಾಬುರವರ ಪ್ರಶ್ನೆಗೆ ಅಧ್ಯಕ್ಷರ ಅನುಮತಿಯೊಡನೆ ಉಪಾಧ್ಯಕ್ಷರು ಪ್ರತ್ಯುತ್ತರ ನೀಡಿ ತಾವು ಬ್ಯಾಂಕಿನಿಂದ ಪಡೆಯುವ ದಾಖಲೆಗಳನ್ನು ಬ್ಯಾಂಕಿನ ವಿರುದ್ಧದ ದಾವೆಗಳಿಗೆ ಬಳಸುವ ಪ್ರಯತ್ನ ಮಾಡುತ್ತಿದ್ದು, ತಮ್ಮದಲ್ಲದ ಹಾಗೂ ಬೇರೆಯವರಿಗೆ ಸಂಬಂಧಿಸಿದ ಬ್ಯಾಂಕಿನಲ್ಲಿನ ದಾಖಲಾತಿ ವಿವರಗಳನ್ನು ನೀಡಲು ಕಾಯ್ದೆಯಲ್ಲಿ ಅವಕಾಶವಿಲ್ಲದಿರುವುದು ಹಲವಾರು ಬಾರಿ ತಮ್ಮ ಗಮನಕ್ಕೂ ನೀಡಿರುವುದಾಗಿ ತಿಳಿಸಿದರು. ಇದಲ್ಲದೇ ತಮ್ಮ ಬೇಡಿಕೆಗಳ ವಿಚಾರಗಳು ನ್ಯಾಯಾಲಯದ ವ್ಯಾಪ್ತಿಯಲ್ಲಿ ಪ್ರಶ್ನಿತವಾಗಿರುವುದರಿಂದ ಆ ತೀರ್ಮಾನಕ್ಕೊಳಪಟ್ಟು ಆಡಳಿತ ಮಂಡಳಿಯಲ್ಲಿ ಇತ್ಯರ್ಥಗೊಳಿಸುವ ಭರವಸೆ ನೀಡಿದರು.

ಸದಸ್ಯರಾದ ಶ್ರೀ ಅಶ್ವತ್ ನಾರಾಯಣರವರು, ಬ್ಯಾಂಕಿನ ಆವರಣ ಚಿಕ್ಕದಾಗಿದ್ದು, ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಸಭಾಂಗಣದಲ್ಲಿ ನಡೆಸಿ, ಉತ್ತಮ ಉಪಹಾರ ಹಾಗೂ ಊಟದ ವ್ಯವಸ್ಥೆ ಮಾಡಲು ಹಾಗೂ ಮುಂದಿನ ದಿನಗಳಲ್ಲಿ ಹಿರಿಯ ಸದಸ್ಯರುಗಳನ್ನು ಸರ್ವಸದಸ್ಯರ ಸಭೆಯಲ್ಲಿ ಸನ್ಮಾನಿಸಿ ಗೌರವಿಸುವಂತೆ ಸಲಹೆ ನೀಡಿದರು. ಮುಂದುವರಿದು, ಇಂದಿನ ಸಭೆಗೆ ಹಾಜರಾದ ಸದಸ್ಯರುಗಳಿಗೆ ರೂ.500.00 ಪಾವತಿಸಿರುವುದಕ್ಕೆ ತಮ್ಮ ಸಹಮತವಿದ್ದು ಒಪ್ಪಿಗೆ ನೀಡುವುದಾಗಿ ತಿಳಿಸಿದುದನ್ನು ಸಭೆಯಲ್ಲಿ ಒಮ್ಮತದಿಂದ ಒಪ್ಪಲಾಯಿತು.

ಸದಸ್ಯರಾದ ಶ್ರೀ ಪಿ.ವೆಂಕಟೇಶ್‌ರವರು, ಬ್ಯಾಂಕಿನಲ್ಲಿನ ಮೊಬಲಗನ್ನು ಮ್ಯೂಚುವಲ್ ಫಂಡ್ ಮುಂತಾದ ಹೂಡಿಕೆಗಳಲ್ಲಿ ತೊಡಗಿಸಲು ಅವಕಾಶ ಮಾಡಿಕೊಡುವಂತೆ ಸಲಹೆ ನೀಡಿ ಬ್ಯಾಂಕಿನ ವೃತ್ತಿಪರ ನಿರ್ದೇಶಕರಾದ ಶ್ರೀ ಎನ್.ವೆಂಕಟಾಚಲಂರವರು ವೃತ್ತಿಯಲ್ಲಿ ಆಡಿಟರ್ ಆಗಿದ್ದು ಅವರಿಗಿರುವ ಅನುಭವವನ್ನು ಉಪಯೋಗಿಸಿ ಕೊಳ್ಳುವಂತೆ ಸಲಹೆ ನೀಡಿದರು. ಮುಂದುವರಿದು, ಮಹಿಳಾ ಸಿಬ್ಬಂದಿಗಳಿಗೆ ಪ್ರತ್ಯೇಕ ಭದ್ರತಾ ಸಿಬ್ಬಂದಿ ನೇಮಕಕ್ಕೆ ಹಾಗೂ ಎರಡು ಸಹಕಾರ ಬ್ಯಾಂಕುಗಳಲ್ಲಿ ಸದಸ್ಯತ್ವ ಹೊಂದಿರುವವರ ಬಗ್ಗೆ ಕ್ರಮವಿಡಲು ಮತ್ತು ಯಶಸ್ವಿನಿ ಯೋಜನೆಯಡಿಯ ಫಲಾನುಭವಿಗಳಿಗೆ ವೈದ್ಯಕೀಯ ಸಹಾಯಕ್ಕೆ ಸಲಹೆ ನೀಡಿದರು. ಮುಂದುವರಿದು, ಪ್ರತಿಭಾ ಪುರಸ್ಕಾರದ ವಿವರಗಳನ್ನು ನೋಟೀಸ್ ಬೋರ್ಡಿನಲ್ಲಿ ಹಾಗೂ ವೆಬ್‌ಸೈಟಿನಲ್ಲಿ ಪ್ರಕಟಿಸಬೇಕಿತ್ತೆಂದು ಸೂಚಿಸಿ, ಸಭೆ ಪ್ರಾರಂಭವಾದ ನಂತರ ಪ್ರತಿಭಾ ಪುರಸ್ಕಾರ ನೀಡಬೇಕೆಂದು ಸಲಹೆ ನೀಡಿದರು. ಸದಸ್ಯರಾದ ಶ್ರೀ ಎನ್.ಮುರಳಿಧರ್ ರವರು, ಪ್ರೋತ್ಸಾಹ ಧನದ ಮೊಬಲಗನ್ನು ಹೆಚ್ಚುವರಿ ಮಾಡಲು ಸಲಹೆ ನೀಡಿದರು.

ಮೇಲಿನ ಚರ್ಚೆಗೆ ಸಭಾಧ್ಯಕ್ಷರು ಉತ್ತರಿಸಿ, ಸದಸ್ಯರು ತಿಳಿಸಿದಂತೆ ಮುಂದಿನ ದಿನಗಳಲ್ಲಿ ಪ್ರತಿಭಾ ಪುರಸ್ಕಾರದ ವಿವರಗಳನ್ನು ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಪಿ.ಕೆ.ಸುರೇಶ್‌ರವರು, ಗುತ್ತಿಗೆ ಆಧಾರದ ಸಿಬ್ಬಂದಿಗಳನ್ನು 11 ತಿಂಗಳ ಅವಧಿಗೆ ನೇಮಿಸಿಕೊಂಡಿದ್ದು ಇಷ್ಟಕ್ಕೆ ಸೀಮಿತಗೊಳಿಸದೆ ಅನುಭವವಿರುವ ಸಿಬ್ಬಂದಿಗಳಿಗೆ ಮುಂದಿನ ದಿನಗಳಲ್ಲಿ ಅನುಕೂಲವಾಗುವಂತೆ ಸಹಕಾರ ನೀಡಲು ಸೂಚಿಸಿದರು. ಮುಂದುವರಿದು ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಸೌಲತ್ತುಗಳನ್ನು ನೀಡುವುದಲ್ಲದೇ ನಿವೃತ್ತ ಸಿಬ್ಬಂದಿಗಳ ಆಗುಹೋಗುಗಳನ್ನು ಗಮನದಲ್ಲಿರಿಸುವಂತೆ ಸಲಹೆ ನೀಡಿದರು. ಮುಂದುವರಿದು, ಈ ಹಿಂದೆ ಶ್ರೀ ದೀಪಕ್‌ರವರಿಗೆ ನೀಡಿರುವ ಸಾಲದ ಬಗ್ಗೆ ಪ್ರಸ್ತಾಪಿಸಿ, ಈ ಸ್ವತ್ತಿಗೆ ಸಂಬಂಧಿಸಿದಂತೆ ನೀಡಿರುವ ದಾಖಲಾತಿಗಳು ಬೋಗಸ್ ಆಗಿದ್ದು ಇದರ ಬಗ್ಗೆ ಕ್ರಮಕೈಗೊಳ್ಳುವಂತೆ ದಾಖಲಾತಿಗಳ ಸಮೇತ ಸುಮಾರು 5 ವರ್ಷಗಳಿಂದಲೂ ತಿಳಿಸುತ್ತಾ ಬಂದಿದ್ದರೂ ಈವರೆವಿಗೂ

ಕ್ರಮಕೈಗೊಳ್ಳದಿರುವುದಕ್ಕೆ ಹಾಗೂ ಇದೇ ರೀತಿ ನೀಡಿರುವ ಇತರೆ ಸಾಲಗಳಾದ ಶ್ರೀ ಗಂಗಭೈರಯ್ಯ, ಶ್ರೀಮತಿ ಸುಮಾ ನಾಗೇಶ್‌ರವರುಗಳ ಬಗ್ಗೆ ಪ್ರಸ್ತಾಪಿಸಿ, ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆಗ್ರಹಿಸಿ, ಆಗಿರುವ ಪ್ರಮಾದಗಳನ್ನು ಸರಿಪಡಿಸಿಕೊಳ್ಳುವಂತೆ ಒತ್ತಾಯಿಸಿ, ಶ್ರೀಮತಿ ಸುಮಾನಾಗೇಶ್‌ರವರು ಸಾಲದ ಕಡತವು ಸಮಿತಿಗೆ ಬಾರದೇ ಮಂಜೂರಾಗಿರುವುದನ್ನು ಪರಿಶೀಲಿಸುವಂತೆ ಆಗ್ರಹಿಸಿದರು.

ಶ್ರೀ ಎಸ್.ಎಸ್.ಸುರೇಶ್‌ಬಾಬುರವರು ಮಾತನಾಡಿ, ಬ್ಯಾಂಕ್ ಉತ್ತಮ ಲಾಭ ಗಳಿಸಿ, ಪ್ರಗತಿಯತ್ತ ಸಾಗಿರುವುದಕ್ಕೆ ಪ್ರಶಂಸಿದರು. ಸಭೆಗೆ ಮುನ್ನ ಪ್ರಾದೇಶಿಕ ಸಹಕಾರ ತರಬೇತಿ ಕೇಂದ್ರ, ಬೆಂಗಳೂರು ಇದರ ಪ್ರತಿನಿಧಿಗಳು ಈ ಕೇಂದ್ರದ ವತಿಯಿಂದ ಸಹಕಾರ ತರಬೇತಿ ನಡೆಸುತ್ತಿದ್ದು ಸದಸ್ಯರುಗಳಿಗೂ ಕೂಡ ತರಬೇತಿಯಿರುವ ಮಾಹಿತಿ ನೀಡಿರುವುದು ಪ್ರಶಂಸನೀಯ. ಬ್ಯಾಂಕ್ ಉತ್ತಮ ಲಾಭ ಗಳಿಸುತ್ತಿದ್ದು, ಲಾಭದ ಮೇಲೆ ಹೆಚ್ಚಿನ ತೆರಿಗೆ ಪಾವತಿಸುವ ಬದಲು ಇಂತಹ ತರಬೇತಿಗಳಿಗೆ ಖರ್ಚುವೆಚ್ಚಗಳನ್ನು ನಿಭಾಯಿಸಿ ಉತ್ತೇಜನ ನೀಡುವಂತೆ ಸಲಹೆ ನೀಡಿದರು.

ಶ್ರೀ ಎನ್.ಮುರಳಿಧರ್‌ರವರು, ಕಾಯ್ದೆ ಕಲಂ 64ರ ವಿಚಾರಣೆ ಹಾಗೂ ಕಲಂ 68ರ ಆದೇಶವು ಕಾನೂನು ವ್ಯಾಪ್ತಿಯಲ್ಲಿ ದೋಷಪೂರಿತವೆಂದು ಈ ಹಿಂದೆಯೆ ತೀರ್ಮಾನವಾಗಿದ್ದು, ಹಲವಾರು ಸಿಬ್ಬಂದಿಗಳಿಂದ ಸಂಗ್ರಹಿಸಿರುವ ಹಾಗೂ ಸಂಗ್ರಹಿಸುತ್ತಿರುವ ಮೊಬಲಗನ್ನು ಸ್ಥಗಿತಗೊಳಿಸಿ ಸಂಬಂಧಿಸಿದ ಆಯಾ ಸಿಬ್ಬಂದಿಗಳಿಗೆ ವಾಪಸ್ ನೀಡಿ ಅನುಕೂಲ ಮಾಡಿಕೊಡುವಂತೆ ಸಲಹೆ ನೀಡಿದರು. ಈ ಪೈಕಿ ಹಲವಾರು ಸಿಬ್ಬಂದಿಗಳು ನಿವೃತ್ತರಾಗಿದ್ದು ಈ ಮೊಬಲಗನ್ನು ಹಿಂದಿರುಗಿಸಿದಲ್ಲಿ ಅವರುಗಳ ಕೌಂಟುಂಬಿಕ ವೆಚ್ಚಗಳಿಗೆ ಸಹಾಯವಾಗಲಿರುವುದಾಗಿ ಸಲಹೆ ನೀಡಿ ಸೂಕ್ತ ಕ್ರಮಕ್ಕೆ ಒತ್ತಾಯಿಸಿದರು.

ಶ್ರೀ ಬಿ.ಪಿ.ಮಹೇಶ್‌ಬಾಬು (ಸ.ಸಂ.13660)ರವರು ಮಾತನಾಡಿ, ಬ್ಯಾಂಕಿನಲ್ಲಿ ಎಟಿಎಂ ಯಂತ್ರ ಅಳವಡಿಸಲು ಹಾಗೂ ಹೆಚ್ಚಿನ ಶಾಖಾ ಪ್ರಾರಂಭಕ್ಕೆ ಸಲಹೆ ನೀಡಿದರು.

ಶ್ರೀ ಕೆ.ಆರ್.ಆನಂದಬಾಬುರವರು, ಪಿಗ್ಮಿ ಏಜೆಂಟರುಗಳು ಬ್ಯಾಂಕಿನ ದುಡಿಯುವ ಬಂಡವಾಳದ ಸಂಗ್ರಹಕಾರರಾಗಿದ್ದು ಇವರುಗಳಿಗೆ ಆರೋಗ್ಯ ವಿಮೆಯಂತಹ ಹೆಚ್ಚಿನ ಸೌಲತ್ತುಗಳನ್ನು ಒದಗಿಸುವಂತೆ ಸಲಹೆ ನೀಡಿದರು. ಇದೇ ಅಭಿಪ್ರಾಯವನ್ನು ಶ್ರೀ ಪಿ.ಕೆ.ಸುರೇಶ್‌ರವರು ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಮಾವಳ್ಳಿ ಅರವಿಂದ್‌ರವರು, ಪೂರ್ಣ ಪ್ರಮಾಣದ ಕಾರ್ಯದರ್ಶಿ ನೇಮಕಾತಿಗೆ ಒತ್ತಾಯಿಸಿದರು.

ನಂತರ ಸಭಾಧ್ಯಕ್ಷರು ಸರ್ವಸದಸ್ಯರ ಸಭೆಯಲ್ಲಿನ ಸಲಹೆ ಸೂಚನೆಗಳ ಬಗ್ಗೆ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಚರ್ಚಿಸಿ ಅಗತ್ಯ ಕ್ರಮವಿಡುವುದಾಗಿ ತಿಳಿಸಿ, ಸಭೆಯಲ್ಲಿ ಸಲಹೆ ಸೂಚನೆ ನೀಡಿದ ಸದಸ್ಯರುಗಳಿಗೆ ಅಭಿನಂದನೆ ಸಲ್ಲಿಸಿದರು. ನಂತರ ಅಧ್ಯಕ್ಷರ ಅನುಮತಿಯೊಡನೆ ಚರ್ಚಿಸಬಹುದಾದ ಇತರೆ ವಿಷಯಗಳಡಿಯ ಚರ್ಚೆ ಮುಕ್ತಾಯವಾಯಿತು.

**17. ವಂದನಾರ್ಪಣೆ :**

ಪ್ರಭಾರ ಕಾರ್ಯದರ್ಶಿಯವರು, ಇಂದಿನ ವಾರ್ಷಿಕ ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ.ಸತ್ಯನಾರಾಯಣರವರಿಗೆ, ಸಭೆಗೆ ಹಾಜರಾದ ನಿರ್ದೇಶಕರುಗಳಿಗೆ, ಸಭೆಯಲ್ಲಿ ಭಾಗವಹಿಸಿ ಸಲಹೆ ಸಹಕಾರ ನೀಡಿದ ಸದಸ್ಯರುಗಳಿಗೆ, ಸಿಬ್ಬಂದಿಗಳಿಗೆ, ಸಭೆಗೆ ಸ್ಥಳಾವಕಾಶ ನೀಡಿದ ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಆಡಳಿತ ವರ್ಗದವರಿಗೆ, ಶಾಮಿಯಾನ, ಮೈಕ್ ಸಿಸ್ಟಂ, ಊಟೋಪಚಾರ ವ್ಯವಸ್ಥೆ ಮಾಡಿಕೊಟ್ಟ ಸಂಸ್ಥೆಯವರಿಗೆ, ಸಂಚಾರ/ಕಾನೂನು ಸುವ್ಯವಸ್ಥೆ ಮಾಡಿದ ಪೋಲೀಸ್ ಇಲಾಖೆ ಸಿಬ್ಬಂದಿಗಳಿಗೆ ಮತ್ತು ಪ್ರತ್ಯಕ್ಷ ಪರೋಕ್ಷ ಸಹಕಾರ ನೀಡಿದವರೆಲ್ಲರಿಗೂ ವಂದನೆಯನ್ನರ್ಪಿಸಿದರು.

ನಂತರ ಸಭಾಧ್ಯಕ್ಷರು ಸರ್ವಸದಸ್ಯರ ಸಭೆಯು ಅಧಿಕೃತವಾಗಿ ಮುಕ್ತಾಯವಾಗಿರುವುದಾಗಿ ಘೋಷಿಸಿದರು. ನಂತರ, ರಾಷ್ಟ್ರಗೀತೆಯೊಂದಿಗೆ ಸರ್ವಸದಸ್ಯರ ಸಭೆಯ ಕಾರ್ಯಕಲಾಪಗಳನ್ನು ಮುಕ್ತಾಯಗೊಂಡಿತು.

| | | |
|---|---|---|
| | ಸಹಿ:– | ಸಹಿ:– |
| ದಿನಾಂಕ: 10.09.2023 | **(ಆನಂದ್ ಎಸ್.ಆರ್.)** | **(ಆರ್.ಪಿ.ಎಂ.ಸತ್ಯನಾರಾಯಣ)** |
| ಬೆಂಗಳೂರು | ಪ್ರಭಾರ ಕಾರ್ಯದರ್ಶಿ | ಅಧ್ಯಕ್ಷರು |

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಛೇರಿಃ ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18

## 2023-24ನೇ ಸಾಲಿನ ಆಡಳಿತ ವರದಿ

ಆತ್ಮೀಯ ಸದಸ್ಯರೇ,

ಶ್ರೀಮಾನ್ ಮಂಡಿ ಹರಿಯಣ್ಣನವರ ಮಾರ್ಗದರ್ಶನ, ಮುಂದಾಳತ್ವದಲ್ಲಿ 1927 ರಲ್ಲಿ ಪ್ರಾರಂಭವಾದ ಈ ನಮ್ಮ ಸಹಕಾರ ಬ್ಯಾಂಕ್ ಹಾಲಿ 95 ವರ್ಷಗಳನ್ನು ಪೂರೈಸಿ ಶತಮಾನದತ್ತ ಮುನ್ನಡೆಯುತ್ತಿರುವುದು ಸಂತಸದ ವಿಷಯವಾಗಿರುತ್ತದೆ. ಈ ಸಂದರ್ಭದಲ್ಲಿ ಬ್ಯಾಂಕಿನ ಸ್ಥಾಪನೆಗೆ ಕಾರಣಕರ್ತರಾದ ಹಿರಿಯರನ್ನು ಸ್ಮರಿಸುತ್ತೇವೆ. ಅಲ್ಲದೇ, ಬ್ಯಾಂಕಿನ 2023-24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ದಿನಾಂಕ 31.03.2024ಕ್ಕೆ ಇದ್ದಂತೆ ಆಡಳಿತ ಮಂಡಳಿ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಿದ್ದೇವೆ.

**ಸಂತಾಪಃ** ಕಳೆದ ಮಹಾಸಭೆಯಿಂದೀಚೆಗೆ ಈ ಕೆಳಕಂಡ ಸದಸ್ಯರುಗಳು ಮೃತರಾಗಿದ್ದು, ಮೃತರ ಗೌರವಾರ್ಥ 2 ನಿಮಿಷ ಮೌನವನ್ನಾಚರಿಸಿ ಶ್ರದ್ಧಾಂಜಲಿ ಅರ್ಪಿಸಬೇಕಾಗಿ ಕೋರುತ್ತೇವೆ.

| ಹೆಸರು | ಸದಸ್ಯತ್ವ ಸಂಖ್ಯೆ | ಹೆಸರು | ಸದಸ್ಯತ್ವ ಸಂಖ್ಯೆ | ಹೆಸರು | ಸದಸ್ಯತ್ವ ಸಂಖ್ಯೆ |
|---|---|---|---|---|---|
| 01 ಭಾನುಮತಿ | R03314 | 18 ಬಿ.ಎಸ್.ಕಿರಣ್ ಕುಮಾರ್ | R04335 | 35 ಸುಬ್ಬಲಕ್ಷ್ಮಮ್ಮ | R14800 |
| 02 ಆರ್.ಅನಸೂಯದೇವಿ | R03004 | 19 ಲತಾ ರಜನಿಕಾಂತ್ ಲಾತಿಯ | R12678 | 36 ಆರ್.ಮುಗುವಾಳಪ್ಪ | R04555 |
| 03 ಎಸ್.ಸರೋಜ | R10736 | 20 ಬಿ.ಎಂ.ಮಹದೇವಪ್ಪ | R04745 | 37 ಕೆ.ಎಸ್.ಪಾರ್ಥಸಾರಥಿ | R05355 |
| 04 ಕೆ.ಎನ್.ಕೃಷ್ಣಮೂರ್ತಿ | R04160 | 21 ಎ.ಎನ್.ರಂಗನಾಥ | R14178 | 38 ನಂಜುಂಡರಾಜು | R04912 |
| 05 ಎಲ್.ಶ್ರೀನಿವಾಸ ಮೂರ್ತಿ | R12272 | 22 ಎಸ್.ನಾಗರಾಜ್ | R05214 | 39 ಕೆ.ಸುನಂದಮ್ಮ | R06280 |
| 06 ಚಿತ್ರಕಲಾ | R03428 | 23 ಟಿ.ನಿಜಗುಣ | R15561 | 40 ದೀಪಾ ಮಾಕಂ | R13368 |
| 07 ಡಿ.ಹೆಚ್.ಸತ್ಯಲಕ್ಷ್ಮಿ | R12419 | 24 ಶ್ರೀಕಾಂತ್ ಟಿ.ವನಕುದುರೆ | R11781 | 41 ಕೆ.ಸತ್ಯನಾರಾಯಣ ಗುಪ್ತ | R06631 |
| 08 ಅನಂತರಾಂ | R16864 | 25 ಎಸ್.ಬಿ.ರಜನಿ | R12484 | 42 ಜೆ.ಎಸ್.ಶ್ರೀಕಾಂತ ಗುಪ್ತ | R12308 |
| 09 ಸೈಯದ್ ಹಫೀಜ್ | R14028 | 26 ಕೆ.ರಾಮಕುಮಾರ್ | R05933 | 43 ವಿ.ಕನುಮಯ್ಯ | R04164 |
| 10 ಸಿ.ಆರ್.ಬಾಲಸುಬ್ರಮಣ್ಯ | R03128 | 27 ಎನ್.ಮಂಜುಳ | R14243 | 44 ಎಸ್.ಮಂಜುಳಾವಾಣಿ | R09201 |
| 11 ಬಿ.ಕಾಂತರಾಜು | R16538 | 28 ಕೆ.ಎಸ್.ಜ್ವಾಲಾಕುಮಾರ್ | R08730 | 45 ಜಿ.ಆರ್.ಶಿವರುದ್ರಪ್ಪ | R06572 |
| 12 ಕೆ.ಎಸ್.ಸುಗುಣ | R07190 | 29 ಸೂರ್ಯಕುಮಾರಿ | R14087 | 46 ಎ.ವಿಜಯಕುಮಾರ್ | R11571 |
| 13 ವಿ.ಎಲ್.ಸರೋಜಮ್ಮ | R10933 | 30 ಡಿ.ವಿ.ಚಿನ್ನೂಬಾಯಿ | R11734 | 47 ಎಂ.ಜಯರಾಮಯ್ಯ | R15957 |
| 14 ಹೆಚ್.ಪಿ.ಜ್ಞಾನೇಶ್ವರ್ | R07792 | 31 ಕೆ.ಆರ್.ಪ್ರಸಾದ್ | R13837 | 48 ಪಿ.ಎಸ್.ಚಂದ್ರಶೇಖರ್ | R03436 |
| 15 ಎಸ್.ನಾಚಿಮುತ್ತು | R04959 | 32 ಟಿ.ಎಲ್.ರಾಮಮೂರ್ತಿ | R05651 | 49 ಡಿ.ವಾಸುದೇವರಾವ್ | R13004 |
| 16 ಜಯಮ್ಮ | R03979 | 33 ಬಿ.ವಿ.ಪ್ರೇಮಾ | R09912 | | |
| 17 ಎ.ಗೋವಿಂದಸ್ವಾಮಿ ನಾಯ್ಡು | R03611 | 34 ಪಿ.ಗೋವಿಂದರಾಜುಲು | R03637 | | |

**ಸದಸ್ಯತ್ವ ಮತ್ತು ಷೇರು ಬಂಡವಾಳ:**

**2023-24ನೇ ಸಾಲಿನ ಸದಸ್ಯತ್ವ ಸೇರ್ಪಡೆ ಹಾಗೂ ಹಿಂಪಡೆದ ಸದಸ್ಯರ ಕುರಿತ ಟಿಪ್ಪಣಿಃ**

ಸಾಲಿನ ಪ್ರಾರಂಭದಲ್ಲಿ 11438 ಸದಸ್ಯರಿಂದ ರೂ.828.15 ಲಕ್ಷಗಳಷ್ಟು ಷೇರು ಬಂಡವಾಳವಿದ್ದು, ವರದಿ ಸಾಲಿನಲ್ಲಿ 802 ಸದಸ್ಯರ ಸೇರ್ಪಡೆಯಿಂದ ರೂ.73.94 ಲಕ್ಷ ಜಮೆಯಾಗಿ, 131 ಸದಸ್ಯರ ಷೇರು ವಾಪಸಾತಿ ಬಗ್ಗೆ ರೂ.53.90 ಲಕ್ಷ ಹಿಂದಿರುಗಿಸಲಾಗಿದೆ. ದಿನಾಂಕ 31.03.2024ರ ಅಂತ್ಯಕ್ಕೆ 12371 ಸದಸ್ಯರಿಂದ ರೂ..848.18 ಲಕ್ಷಗಳ ಷೇರು ಬಂಡವಾಳವಿದ್ದು, ನಿವ್ವಳ ರೂ.20.03 ಲಕ್ಷಗಳ ಷೇರು ಬಂಡವಾಳವು ಹೆಚ್ಚಾಗಿರುತ್ತದೆ. ವರದಿ ಸಾಲಿನಲ್ಲಿ ನಾಮಮಾತ್ರ ಸದಸ್ಯರು ಸೇರ್ಪಡೆಯಾಗಿರುವುದಿಲ್ಲ. ಸದಸ್ಯತ್ವ ಸೇರ್ಪಡೆ ಹಾಗೂ ವಾಪಸಾತಿಯ ಅಂಕಿ ಅಂಶಗಳನ್ನು ಲೆಕ್ಕಪರಿಶೋಧಕರ ವರದಿಯಲ್ಲಿ ದೃಢೀಕರಿಸಿದ್ದು, ಮೂರು ವರ್ಷಗಳ ಹೋಲಿಕೆಯ ಅಂಕಿ ಅಂಶಗಳನ್ನು ಅನುಮೋದನೆಗೆ ಮಂಡಿಸಿದೆ.

| | 31.03.2022 | 31.03.2023 | 31.03.2024 |
|---|---|---|---|
| ಸದಸ್ಯರು | 11118 | 11119 | 11790 |
| ನಾಮಮಾತ್ರ ಸದಸ್ಯರು | 38 | 38 | 38 |
| ಸಹ ಸದಸ್ಯರು | 245 | 281 | 281 |
| **ಒಟ್ಟು ಸದಸ್ಯರು** | **11401** | **11438** | **12371** |
| **ಷೇರು ಬಂಡವಾಳ (ರೂ.ಲಕ್ಷಗಳಲ್ಲಿ)** | **839.01** | **828.15** | **848.18** |

ಉಪನಿಯಮ ರೀತ್ಯ ಸದಸ್ಯತ್ವದ ಪ್ರತಿ ಷೇರಿನ ಮುಖಬೆಲೆಯು ರೂ.100/- ಗಳಂತೆ ಕನಿಷ್ಠ 10 ಷೇರುಗಳನ್ನು ಸದಸ್ಯರು ಹೊಂದಬೇಕಾಗಿರುತ್ತದೆ. ಬಹಳಷ್ಟು ಸದಸ್ಯತ್ವದಲ್ಲಿ ಷೇರು ಮೊಬಲಗು ರೂ.100/- ರ ಗುಣಕದಲ್ಲಿ ಹಾಗೂ 10 ಷೇರುಗಳು ಇಲ್ಲದಿರುವುದರಿಂದ ಕ್ರಮಬದ್ಧಗೊಳಿಸಲು ಹಿಂದಿನ ಮಹಾಸಭೆಗಳಿಂದಲೂ ತಿಳುವಳಿಕೆ ನೀಡುತ್ತಾ ಬರಲಾಗಿದೆ. ಅಲ್ಲದೇ, ಹಲವಾರು ವರ್ಷಗಳಿಂದ ಸದಸ್ಯತ್ವಕ್ಕೆ ಕೆ.ವೈ.ಸಿ ದಾಖಲಾತಿಗಳು ಕಡ್ಡಾಯವಾಗಿರುವ ಮಾಹಿತಿಯನ್ನು ಸದಸ್ಯರ ಗಮನಕ್ಕೆ ತರಲಾಗುತ್ತಿದ್ದರೂ ಕೆಲವು ದಾಖಲಾತಿಗಳು ಈವರೆವಿಗೂ ಸಲ್ಲಿಕೆಯಾಗಿರುವುದಿಲ್ಲ. ಅದರಂತೆ ಸದಸ್ಯರು ತಮ್ಮ ದಾಖಲಾತಿ ಪುರಾವೆಗಳನ್ನು ಸಲ್ಲಿಸಿ ಸದಸ್ಯತ್ವ ಖಾತೆಯನ್ನು ಕ್ರಮಬದ್ಧಗೊಳಿಸಿಕೊಳ್ಳಲು ಹಾಗೂ ಈಗಾಗಲೇ ಸಲ್ಲಿಸಿದ್ದಲ್ಲಿ ಖಾತರಿಪಡಿಸಿಕೊಳ್ಳಲು ಕೋರಿದೆ. ಇಲ್ಲವಾದಲ್ಲಿ ಕೈ.ವೈ.ಸಿ ರಹಿತ ಸದಸ್ಯರುಗಳು ಮತದಾನದ ಹಕ್ಕಿಂದ ವಂಚಿತರಾಗಲಿದ್ದು, ಅಲ್ಲದೇ ಇಂತಹ ಖಾತೆಗಳನ್ನು ಅಮಾನತ್ ಖಾತೆಗೆ ವರ್ಗಾಯಿಸಲು ಆಡಳಿತ ಮಂಡಳಿಯು ತೀರ್ಮಾನಿಸಿದ್ದು, ಈ ನಿಟ್ಟಿನಲ್ಲಿ ಆಗುವ ತೊಡಕುಗಳ ನಿವಾರಣೆಗೆ ಸರ್ವಸದಸ್ಯರ ಸಹಕಾರ ಕೋರಿದೆ.

**ಆಪದ್ಧನ ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆ:**

ವರದಿ ಸಾಲಿನ ಆಪದ್ಧನ ಮತ್ತು ಇತರ ನಿಧಿಗಳ ತುಲನಾತ್ಮಕ ಅಂಕಿ ಅಂಶಗಳು ಈ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸ | ವಿವರ | 2021-22 | 2022-23 | 2023-24 |
|---|---|---|---|---|
| 1. | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | 2,237.06 | 2,405.79 | 2,430.39 |
| 2. | ಕಟ್ಟಡ ನಿಧಿ | 340.92 | 363.29 | 387.82 |
| 3. | ಷೇರು ನಫೆ ಸಮತೋಲನಾ ನಿಧಿ | 100.02 | 100.02 | 100.02 |
| 4. | ಗುಂತಾಯಗಳ ಸವಕಳಿ ನಿಧಿ | 132.09 | 132.09 | 162.19 |
| 5. | ಗುಂತಾಯಗಳ ಏರಿಳಿತ ನಿಧಿ | 376.22 | 376.22 | 376.22 |
| 6. | ಗೃಹ ಸಾಲಗಳ ವಿಶೇಷ ನಿಧಿ | 29.50 | 29.50 | 29.50 |
| 7. | ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | 34.00 | 34.00 | 34.00 |
| 8. | ಆಪದ್ಧನ ನಿಧಿ | 2,427.29 | 2,520.87 | 2,640.52 |
| 9. | ಇತರೆ ನಿಧಿಗಳು<br>(ದಾನ ನಿಧಿ, ಪ್ರಚಾರ ನಿಧಿ, ಸದಸ್ಯರ ಕ್ಷೇಮ ನಿಧಿ, ಮರಣ ಪರಿಹಾರ ನಿಧಿ ಹಾಗೂ ಇತರೆ) | 659.54 | 693.08 | 720.58 |
| | **ಒಟ್ಟು** | **6,336.64** | **6,654.86** | **6,881.24** |

**ವರದಿ ಸಾಲಿನಲ್ಲಿ ಈ ಕೆಳಕಂಡಂತೆ ನಿಧಿಗಳನ್ನು ಬಳಸಲಾಗಿದೆ.**

**ಸದಸ್ಯರ ಕ್ಷೇಮ ನಿಧಿ:** ಕಳೆದ ಮಹಾಸಭೆಯ ತೀರ್ಮಾನದಂತೆ ವರದಿ ಸಾಲಿನಲ್ಲಿ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲು 155 ಪ್ರತಿಭಾನ್ವಿತರಿಗೆ ರೂ.5.02 ಲಕ್ಷಗಳ ಮೊಬಲಗನ್ನು ಪ್ರತಿಭಾ ಪುರಸ್ಕಾರವಾಗಿ ನೀಡಿ ಗೌರವಿಸಿದೆ. ಇದಲ್ಲದೇ ಇದರೊಂದಿಗೆ ಕೆಲ ಸದಸ್ಯರ ವೈದ್ಯಕೀಯ, ಶೈಕ್ಷಣಿಕ ಖರ್ಚುಗಳಿಗೆ ಸಹಾಯ ನೀಡಿ ಒಟ್ಟು ಈ ನಿಧಿಯಿಂದ ರೂ.14.66 ಲಕ್ಷ ಮೊತ್ತದ ನಿಧಿ ಬಳಕೆಯಾಗಿದೆ.

**ಮರಣೋತ್ತರ ಪರಿಹಾರ ನಿಧಿಃ** ವರದಿ ಸಾಲಿನಲ್ಲಿ ಮೃತ ಸದಸ್ಯರ ಮರಣೋತ್ತರ ಕಾರ್ಯಗಳಿಗೆ ಕುಟುಂಬದವರ ಮನವಿ ಮೇರೆಗೆ ರೂ.2.30 ಲಕ್ಷಗಳ ಮೊಬಲಗನ್ನು ಪಾವತಿಸಲಾಗಿದೆ. ಮೃತ ಸದಸ್ಯರ ಮಾಹಿತಿಯನ್ನು 6 ತಿಂಗಳ ಒಳಗಾಗಿ ಮೃತ ಸದಸ್ಯರ ವಾರಸುದಾರರು (Nominee) ಬ್ಯಾಂಕಿಗೆ ತಿಳಿಸಲು ಕೋರಲಾಗಿದೆ.

**ದಾನ ಧರ್ಮದ ನಿಧಿಃ** ವರದಿ ಸಾಲಿನಲ್ಲಿ ಸಂಘ ಸಂಸ್ಥೆಗಳ ಧಾರ್ಮಿಕ ಕಾರ್ಯಕ್ರಮಗಳಿಗೆ ಹಾಗೂ ಸಮಾಜದ ಕಡುಬಡವರ ವೈದ್ಯಕೀಯ ಇನ್ನಿತರ ವೆಚ್ಚಗಳಿಗಾಗಿ ರೂ.0.72 ಲಕ್ಷಗಳ ದೇಣಿಗೆ ನೀಡಿ ಸಹಾಯ ಮಾಡಲಾಗಿದೆ.

ವರದಿ ಸಾಲಿನಲ್ಲಿ ಮಾಡಿರುವ ನಿಧಿಗಳ ಒಟ್ಟು ಬಳಕೆಯನ್ನು ಸರ್ವಸದಸ್ಯರ ಸಭೆಯ ವಿಷಯ-08ರಲ್ಲಿ ಅನುಮೋದನೆಗೆ ಮಂಡಿಸಿದೆ.

**ಠೇವಣಿಗಳುಃ** ದಿನಾಂಕ 31.03.2024ರಲ್ಲಿದ್ದಂತೆ ಠೇವಣಿಗಳ ವಿವರಗಳನ್ನು ಈ ರೀತಿ ಕಾಣಬಹುದಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸ | ವಿವರ | 2021-22 | 2022-23 | 2023-24 |
|---|---|---|---|---|
| 1. | ನಿಶ್ಚಿತ ಠೇವಣಿ | 4,462.00 | 4,409.43 | 4720.20 |
| 2. | ನಗದು ಸರ್ಟಿಫಿಕೇಟ್ | 4,721.98 | 4,789.17 | 4516.01 |
| 3. | ಉಳಿತಾಯ ಖಾತೆ | 2,490.32 | 2,427.87 | 2419.49 |
| 4. | ಪಿಗ್ಮಿ ಠೇವಣಿ | 1,087.72 | 1,180.58 | 1284.62 |
| 5. | ಚಾಲ್ತಿ ಖಾತೆ | 1,218.39 | 884.30 | 909.48 |
| 6 | ಸಂಚಿತ ಠೇವಣಿ | 120.07 | 98.75 | 94.69 |
| 7. | ಇತರೇ ಠೇವಣಿ | 810.36 | 602.24 | 474.21 |
| | **ಒಟ್ಟು** | **14,910.84** | **14,392.34** | **14,418.70** |

ಬ್ಯಾಂಕಿನ ಪ್ರತಿ ಠೇವಣಿದಾರರ ರೂ.5.00 ಲಕ್ಷ ಮೊತ್ತದ ವರೆಗಿನ ಠೇವಣಿಗಳು "ಡಿಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟೀ ಕಾರ್ಪೊರೇಷನ್ ಆಫ್ ಇಂಡಿಯಾ, ಮುಂಬಯಿ" (DICGC, Mumbai) ರವರಿಂದ ವಿಮೆಗೊಳಪಟ್ಟಿವೆ. ಈ ಸಂಬಂಧ 2023-24ರ ಸಾಲಿನಲ್ಲಿ ಬ್ಯಾಂಕಿನ ಠೇವಣಾತಿ ರೂ.147.38 ಕೋಟಿಗಳ ಮೇಲೆ ವರ್ಷಾಂತ್ಯದ ವರೆಗಿನ ಪ್ರೀಮಿಯಂ ರೂ.17.61 ಲಕ್ಷಗಳನ್ನು ಪಾವತಿಸಿದೆ. ಠೇವಣಿ ವಿಮಾ ಯೋಜನೆಯಿಂದಾಗಿ ದೇಶದ ಯಾವುದೇ ಬ್ಯಾಂಕ್ ನಷ್ಟದಿಂದಾಗಿ ಸಮಾಪನಾಗೊಂಡಲ್ಲಿ ಅಂತಹ ಬ್ಯಾಂಕಿನ ಪ್ರತಿ ಗ್ರಾಹಕನ ರೂ.5.00 ಲಕ್ಷಗಳ ವರೆಗಿನ ಠೇವಣಿಯು ವಿಮೆಗೊಳಪಟ್ಟಿರುತ್ತದೆ. ಇದರಿಂದಾಗಿ ಗ್ರಾಹಕರು ಹೆಚ್ಚಿನ ವಿಶ್ವಾಸದಿಂದ ಬ್ಯಾಂಕಿನೊಂದಿಗೆ ವ್ಯವಹರಿಸಬಹುದಾಗಿದೆ. ಅಲ್ಲದೇ ಠೇವಣಿದಾರರಿಗೆ ಅನುಕೂಲ ಮಾಡಿಕೊಡುವ ದೃಷ್ಠಿಯಿಂದ ಅವಧಿ ಮುಗಿದ ನಿಶ್ಚಿತ ಠೇವಣಿಗಳನ್ನು ಸ್ವಯಂ ನವೀಕರಣ (Auto Renewal) ವ್ಯವಸ್ಥೆ ಜಾರಿಗೊಳಿಸಲಾಗಿದೆ.

**ಠೇವಣಿದಾರರ ಶಿಕ್ಷಣ ಮತ್ತು ಜಾಗೃತ ನಿಧಿ (Deposit Education & Awareness Fund)**

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ 10 ವರ್ಷಕ್ಕೂ ಮೇಲ್ಪಟ್ಟು ಚಾಲ್ತಿಯಲ್ಲಿಲ್ಲದ ಠೇವಣಿಗಳು, ಉಳಿತಾಯ/ ಚಾಲ್ತಿ ಖಾತೆ, ಬ್ಯಾಂಕ್ ಗ್ಯಾರೆಂಟಿಗಳ ಮೊಬಲಗನ್ನು DEAF ಖಾತೆಗೆ ವರ್ಗಾಯಿಸುವುದು ಕಡ್ಡಾಯವಾಗಿದ್ದು, ಸಂಬಂಧಿಸಿದವರು ಕೆ.ವೈ.ಸಿ ಹಾಜರುಪಡಿಸಿ, ವಾಪಸ್ ಪಡೆಯಲು ಅವಕಾಶವಿರುತ್ತದೆ. ಆದ್ದರಿಂದ ಸದಸ್ಯರು/ಗ್ರಾಹಕರು ತಮ್ಮ ಎಲ್ಲಾ ಖಾತೆಗಳಿಗೆ ಕೆ.ವೈಸಿ ದಾಖಲೆಗಳೊಂದಿಗೆ ಅಡೆತಡೆಯಿಲ್ಲದಂತೆ ಚಾಲ್ತಿಯಲ್ಲಿಟ್ಟುಕೊಳ್ಳಲು ಕೋರುತ್ತೇವೆ.

**ವಾರ್ಷಿಕ ವ್ಯವಹಾರಿಕ ಗುರಿ ಸಾಧನೆ (Annual Business Plan)**

2024-25ನೇ ಸಾಲಿನಲ್ಲಿ ಬ್ಯಾಂಕಿನ ಠೇವಣಿ ಸಂಗ್ರಹಣೆಗೆ ಆದ್ಯತೆ ನೀಡಿ, ಶಾಖಾ ವಿಸ್ತರಣೆಗೆ ಪ್ರಯತ್ನಿಸಲಾಗುವುದು. ಸಾಲ ಮತ್ತು ಮುಂಗಡಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡಲು, ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ಉದ್ಯಮ, ಗೃಹ ಖರೀದಿ ನಿರ್ಮಾಣ, ಮಹಿಳೆಯರು ಹಾಗೂ ಆರ್ಥಿಕ ದುರ್ಬಲ ವರ್ಗ ಮುಂತಾದ ಆದ್ಯತಾ ವಲಯಕ್ಕೆ ಸಾಲ ನೀಡುವಿಕೆಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ಪಾಲನೆಯಡಿ ಉತ್ತೇಜಿಸುವ ಗುರಿ ಹೊಂದಿದೆ. ಅಲ್ಲದೇ ಹಳೆಯ ಸುಸ್ತಿ ಬಾಕಿಗಳ ವಸೂಲಾತಿಗೆ ಹೆಚ್ಚಿನ ಗಮನ ಹರಿಸಿ ಆದಾಯ ಗಳಿಕೆಗೂ ಸಹ ಪ್ರಯತ್ನಿಸುವ ಗುರಿ ಹೊಂದಿದ್ದೇವೆ. ಅಲ್ಲದೇ ಹೂಡಿಕೆಗಳ ವಹಿವಾಟಿಗೂ ಹೆಚ್ಚಿನ ಗಮನಹರಿಸಿ, ಈ ಮೂಲಕ ಬ್ಯಾಂಕಿನ ನಿವ್ವಳ ಲಾಭ ರೂ.5.00 ಕೋಟಿ ನಿರೀಕ್ಷೆಯಲ್ಲಿದ್ದೇವೆ.

**ಕ್ಯಾಪಿಟಲ್ ಅಡಿಕ್ವೆಸಿ (Capital Risk Adequency Ratio) :**

ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳ ಪ್ರಕಾರ ಬ್ಯಾಂಕು ತನ್ನ ಒಟ್ಟು ಆಸ್ತಿಗಳ ಅಪಾಯದ ನಿರ್ವಹಣೆಗೋಸ್ಕರ ಕನಿಷ್ಠ ಶೇ.12 ರಷ್ಟು CRAR ನ್ನು ಹೊಂದಬೇಕಾಗಿರುತ್ತದೆ. ಹಾಲಿ ಬ್ಯಾಂಕ್ ಶೇ.44.71 ರಷ್ಟು ಹೊಂದಿದ್ದು ನಿಗದಿತ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಹೊಂದಿ Financially Sound and Well Management (FSWM) ವಿಭಾಗದಲ್ಲಿದ್ದು ಆರ್ಥಿಕವಾಗಿ ಸದೃಢವಾಗಿರುತ್ತದೆ. ಇದರ ಪ್ರಮಾಣವು ಕಳೆದ ಸಾಲಿಗಿಂತ ಹೆಚ್ಚಾಗಿರುತ್ತದೆ. ಬ್ಯಾಂಕ್ ತನ್ನ ಲಾಭದಿಂದ ತೆಗೆದಿರಿಸಿದ ಎಲ್ಲಾ ನಿಧಿಗಳನ್ನು ಸೇರಿಸಿ ಸ್ವಂತ ಬಂಡವಾಳವನ್ನು ಹೆಚ್ಚಿಸಿದಷ್ಟು CRAR ಪ್ರಮಾಣದಲ್ಲಿ ಏರಿಕೆ ಉಂಟಾಗಿ, ಬ್ಯಾಂಕ್ ಸಕ್ಷಮವಾಗಿ ಬೆಳೆಯಲು ಸಹಕಾರಿಯಾಗುತ್ತದೆ. ಬ್ಯಾಂಕಿನಲ್ಲಿ ಹೆಚ್ಚುವರಿಯಾಗಿ ಲಭ್ಯವಿರುವ ಮೊಬಲಗನ್ನು ಆದ್ಯತೆ ಮೇರೆ ಸಾಲ ನೀಡುವಿಕೆಗೆ ಮತ್ತು ಹೂಡಿಕೆಗೆ ಬಳಸಿ ಲಾಭ ಗಳಿಕೆ ಮಾಡಲಾಗುತ್ತಿದೆ.

**ಸರ್ಕಾರಿ ಭದ್ರತೆ, ಹೂಡಿಕೆಗಳು ಮತ್ತು ದ್ರವ್ಯಾಸ್ತಿಗಳ ನಿರ್ವಹಣೆಃ**

ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಯಂತೆ ಬೇಡಿಕೆ ಮತ್ತು ನಿಶ್ಚಿತಾವಧಿ ಜವಾಬ್ದಾರಿ (DTL) ಮೇಲಿನ ನಗದು ಮೀಸಲು ಪ್ರಮಾಣ (CRR) ವು ಶೇ.4 ಮತ್ತು ಶಾಸನಾತ್ಮಕ ದ್ರವ್ಯಾಸ್ತಿ ಪ್ರಮಾಣ (SLR)ವು ಶೇ.18.25 ರಷ್ಟಿರಬೇಕಿದ್ದು, ವರದಿ ಸಾಲಿನಲ್ಲಿ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಕೊರತೆಯಾಗದಂತೆ ನಿರ್ವಹಿಸಲಾಗಿದೆ. ಶಾಸನಾತ್ಮಕ ಹೂಡಿಕೆಗಳನ್ನು ಸರ್ಕಾರಿ ಭದ್ರತೆಯಲ್ಲಿ ತೊಡಗಿಸಿದ್ದು, ವರದಿ ಸಾಲಿನಲ್ಲಿ ವಹಿವಾಟು ನಡೆಸಿ ಅಲ್ಪ ಪ್ರಮಾಣದ ಲಾಭ ಗಳಿಸಲಾಗಿದೆ. ಈ ಹೂಡಿಕೆ ಹಾಗೂ ವಹಿವಾಟಿನ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದನ್ವಯ ಪ್ರತ್ಯೇಕ ಹೂಡಿಕೆ ನಿಯಮಾವಳಿ (Investment Policy)ಗಳನ್ನು ರೂಪಿಸಿದೆ. ಇದಲ್ಲದೇ ಸರ್ಕಾರಿ ಭದ್ರತೆಯ ಹೂಡಿಕೆಯಿಂದ ಹಾಲಿ ಆರ್ಥಿಕ ಸಾಲಿನಲ್ಲಿ ರೂ.4.61 ಕೋಟಿಗಳ ಬಡ್ಡಿ ಆಖರಗೊಂಡಿದೆ. ಈ ಎಲ್ಲಾ ವಹಿವಾಟುಗಳನ್ನು ಕಾರ್ಯನಿರ್ವಾಹಕ ಸಮಿತಿಯ ಮೇಲ್ವಿಚಾರಣೆಯಲ್ಲಿ ನಿಗಾವಹಿಸಲಾಗುತ್ತಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಬ್ಯಾಂಕಿನ ಒಟ್ಟು ಠೇವಣಿ ಮೇಲಿನ ಶೇ.20ಕ್ಕಿಂತ ಹೆಚ್ಚಿನ ಮೊಬಲಗನ್ನು ಇತರ ಬ್ಯಾಂಕ್‌ಗಳಲ್ಲಿನ ಹೂಡಿಕೆಗೆ ನಿರ್ಬಂಧ (Inter Bank Exposure Limit) ವಿಧಿಸಿದ್ದು, ಸರ್ಕಾರಿ ಭದ್ರತೆಯಲ್ಲಿ ಗರಿಷ್ಠ ಪ್ರಮಾಣದಲ್ಲಿ ವಹಿವಾಟು ನಡೆಸಲು ಅವಕಾಶ ನೀಡಿದೆ. ಅಲ್ಲದೆ ಸರ್ಕಾರಿ ಭದ್ರತೆಗಳ ಮಾರುಕಟ್ಟೆ ದರದ ಬೆಲೆಯನ್ನು ನಿರ್ಧರಿಸಿ ಸಾಲಾಖೈರಿಗೆ ಅದಕ್ಕೆ ಸಮನಾದ ಮೊಬಲಗನ್ನು ಇಳುವರಿ ರೂಪದಲ್ಲಿ ತೆಗೆದಿರಿಸಬೇಕಿದ್ದು, ಗುಂತಾಯಗಳ ಸವಕಳಿ ನಿಧಿ (Investment Depriciation Reserve) ಹಾಗೂ ಗುಂತಾಯ ಏರಿಳಿತ ನಿಧಿ (Investment Fluctuation Reserve) ಗಳನ್ನಾಗಿ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಅವಕಾಶ ಕಲ್ಪಿಸಿ ತೆಗೆದಿರಿಸಲಾಗಿದೆ. ಹೀಗೆ ಕಲ್ಪಿಸಿರುವ ಈ ನಿಧಿಗಳ ಹೆಚ್ಚುವರಿ ಅವಕಾಶವು ಸರ್ಕಾರಿ ಭದ್ರತೆ ಬೆಲೆಯ ಏರಿಳಿತದಿಂದ ಉಂಟಾಗುವ ಹಿನ್ನಡೆಯಿಂದ ರಕ್ಷಣೆ ನೀಡಲಿದೆ.

ದಿನಾಂಕ 31.03.2024ಕ್ಕೆ ಹೂಡಿಕೆಗಳ ವಿವರ ಈ ಕೆಳಕಂಡಂತೆ ಹೂಡಿಕೆಗಳಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸ | ವಿವರ | 2021-22 | 2022-23 | 2023-24 |
|---|---|---|---|---|
| 1. | ಅಪೆಕ್ಸ್ ಬ್ಯಾಂಕ್ | 406.74 | 406.74 | 406.74 |
| 2. | ಬಿಡಿಸಿಸಿ ಬ್ಯಾಂಕ್ ಷೇರುಗಳು | 3.02 | 3.02 | 287.15 |
| 3. | ಗೌರ್ನಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿ | 7,008.33 | 7008.33 | 7008.33 |
| 4. | ಬೆಂಗಳೂರು ಮರ್ಕೆಂಟೈಲ್ ಕೊ–ಆಪ್.ಬ್ಯಾಂಕ್ | 55.81 | 55.81 | 55.81 |
| 5. | ಹೆಚ್.ಡಿ.ಎಫ್.ಸಿ, ಕಸ್ತೂರ್ಬಾ ರಸ್ತೆ ಶಾಖೆ | 1,503.37 | 1406.86 | 3632.06 |
| 6. | SEDBI MSE Refinance Fund 2022-23 | 0.00 | 703.85 | 0.00 |
| | **ಒಟ್ಟು** | **8,977.26** | **9584.59** | **11390.09** |

**ಸಾಲ ಮತ್ತು ಮುಂಗಡಗಳುಃ**

ದಿನಾಂಕ 31.03.2024ರಲ್ಲಿದ್ದಂತೆ ಸಾಲ ಮತ್ತು ಮುಂಗಡಗಳ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸ | ವಿವರ | 2021-22 | 2022-23 | 2023-24 |
|---|---|---|---|---|
| 1 | ಜಂಟಿ ಸಾಲಗಳು/ಓವರ್ ಡ್ರಾಫ್ಟ್ | 555.09 | 463.68 | 476.11 |
| 2 | **ಆಧಾರ ಸಾಲಗಳು** | | | |
| | a) ಸ್ಥಿರಾಧಾರ ಸಾಲ ಓವರ್ ಡ್ರಾಫ್ಟ್ | 1,368.39 | 1,212.02 | 801.04 |
| | b) ಸ್ಥಿರಾಧಾರ ಸಾಲ | 8,670.78 | 7,620.69 | 6,904.94 |
| | c) ಆಧಾರ ರಹಿತ ಸಾಲ | 156.14 | 144.88 | 107.22 |
| | d) ಗೃಹ ನಿರ್ಮಾಣ ಸಾಲ | 363.76 | 408.14 | 345.65 |
| | e) ವಾಹನ ಸಾಲ | 58.96 | 57.73 | 61.13 |
| | f) ಚಿನ್ನಾಭರಣ ಸಾಲ | 26.06 | 53.70 | 50.65 |
| | g) ಇತರೆ ಸಾಲ – (FD, CC, GD, RD, SIL, IL LIC, NSC, UTI, etc) | 826.14 | 845.52 | 830.67 |
| | **ಒಟ್ಟು** | **12,025.32** | **10,806.36** | **9,577.41** |

ಬ್ಯಾಂಕು ವರ್ಷಾಂತ್ಯಕ್ಕೆ ರೂ. 9577.41 ಲಕ್ಷಗಳಷ್ಟು ಸಾಲ ನೀಡಿದ್ದು, ಇದು ಕಳೆದ ಸಾಲಿಗಿಂತ ಕಡಿಮೆಯಾಗಿರುತ್ತದೆ. ಸದಸ್ಯರುಗಳ ಅನುಕೂಲಕ್ಕಾಗಿ ಆಡಳಿತ ಮಂಡಳಿಯು ವಿವಿಧ ಸಾಲಗಳ ಯೋಜನೆ ರೂಪಿಸಿದ್ದು, ಇದರ ಸೌಲಭ್ಯ ಪಡೆಯಲು ಸದಸ್ಯರ ಸಹಕಾರ ಕೋರುತ್ತೇವೆ.

ಬ್ಯಾಂಕಿನಲ್ಲಿ ನೀಡುವ ಒಟ್ಟಾರೆ ಸಾಲಗಳ ಪೈಕಿ ಶೇ.೬೦ ರಷ್ಟು ವಿವಿಧ ವಿಭಾದ ಆದ್ಯತಾ ವಲಯಕ್ಕೆ (Priority Sector) ನೀಡಬೇಕಾಗಿದ್ದು ಈ ಪೈಕಿ ಆರ್ಥಿಕ ದುರ್ಬಲ ವರ್ಗಕ್ಕೆ ನೀಡಬೇಕಾದ ಸಾಲದಲ್ಲಿ ಕೊರತೆಯಾದ ಕಾರಣ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಮೇರೆ Small Industries Development Bank of India (SIDBI) ದಲ್ಲಿ ಠೇವಣಿಯಿರಿಸಲಾಗಿತ್ತು. ನಂತರದಲ್ಲಿ ಕಳೆದ ಸಾಲಿನ ಲೆಕ್ಕಪರಿಶೋಧಕರ ದೃಢೀಕರಣದ ಮೇರೆ ಈ ಕೊರತೆ ನೀಗಿರುವ ಅಂಕಿಅಂಶಗಳನ್ನು ನೀಡಿ ಹಾಲಿ ಆರ್ಥಿಕ ಸಾಲಿನಲ್ಲಿ ಠೇವಣಿ ಹಿಂಪಡೆಯಲಾಗಿದೆ. ಈ ಆದ್ಯತಾ ವಲಯ ಸಾಲ ನೀಡುವಿಕೆಯ ನಿರ್ದೇಶನಗಳ ಪಾಲನೆಗೆ ಅಗತ್ಯ ಕ್ರಮವಹಿಸಲಾಗಿದೆ.

**ಅನುತ್ಪಾದಕ ಆಸ್ತಿ (ಎನ್.ಪಿ.ಎ)ಃ** ಭಾರತೀಯ ರಿಸರ್ವ್ ಬ್ಯಾಂಕಿನ Income Recognisation & Assets Classification (IRAC) ನಿಯಮದಂತೆ ಯಾವುದೇ ಸಾಲವು 90 ದಿನಗಳಲ್ಲಿ ಮರುಪಾವತಿಯಾಗದಿದ್ದಲ್ಲಿ ನಿಷ್ಕ್ರಿಯ ಆಸ್ತಿಗಳಾಗುತ್ತದೆ. ನಿಷ್ಕ್ರಿಯ ಆಸ್ತಿ ಪ್ರಮಾಣ ಹೆಚ್ಚಾದಲ್ಲಿ ಇದಕ್ಕಾಗಿ ಮೊಬಲಗನ್ನು ಕಾಯ್ದಿರಿಸಬೇಕಿರುವುದರಿಂದ ಲಾಭದ ಮೇಲೂ ಹೆಚ್ಚಿನ ಪರಿಣಾಮ ಬೀರಿ ಬ್ಯಾಂಕಿನ ಗುಣಮಟ್ಟದ ವರ್ಗೀಕರಣವು ಕಡಿಮೆಯಾಗುತ್ತದೆ. ಆದಾಗ್ಯೂ ದಿನಾಂಕ 31.03.2024ಕ್ಕೆ ಬ್ಯಾಂಕ್ ನೀಡಿದ ಒಟ್ಟು ಸಾಲ ರೂ.9577.41 ಲಕ್ಷಗಳ ಪೈಕಿ ಅನುತ್ಪಾದಕ ಮೊಬಲಗು ರೂ.1696.41 ಲಕ್ಷಗಳಿದ್ದು, ಗ್ರಾಸ್ ಎನ್.ಪಿ.ಎ ಪ್ರಮಾಣ ಶೇ.17.71 ರಷ್ಟಿದ್ದು ಹಿಂದಿನ ಸಾಲಿಗೆ ಹೋಲಿಸಿದಾಗ ಶೇ.1.44 ರಷ್ಟು ಅಲ್ಪ ಪ್ರಮಾಣದಲ್ಲಿ ಹೆಚ್ಚಾಗಿದೆ. ಈ ಬಗ್ಗೆ ಬ್ಯಾಂಕಿನಲ್ಲಿ ಈವರೆವಿಗೂ ರೂ.2430.39 ಲಕ್ಷಗಳನ್ನು ಕಾಯ್ದಿರಿಸಿದ್ದು, ಇದರಿಂದಾಗಿ ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣ ಶೂನ್ಯ ಮಟ್ಟದಲ್ಲಿರುತ್ತದೆ.

ಹಿಂದಿನ ಕೆಲವು ಸರ್ವಸದಸ್ಯರ ಸಭೆಗಳ ತೀರ್ಮಾನದಂತೆ ಸುಸ್ತಿ ಬಾಕಿಗಳನ್ನು ರಿಯಾಯಿತಿ ನೀಡಿ ಚುಕ್ತಗೊಳಸಲು ಆಡಳಿತ ಮಂಡಳಿಗೆ ನೀಡಿದ ಅಧಿಕಾರದಿಂದಾಗಿ ಕೆಲ ಸುಸ್ತಿ ಬಾಕಿಗಳನ್ನು ಈ ಹಿಂದೆ ವಸೂಲ್ಮಾಡಿದ ಪರಿಣಾಮವಾಗಿ ಅನುತ್ಪಾದಕ ಪ್ರಮಾಣ ಕಡಿತಗೊಂಡಿರುವುದು ಗಮನಾರ್ಹ ಅಂಶವಾಗಿದೆ. ವರದಿ ಸಾಲಿನಲ್ಲಿಯೂ ವಸೂಲಾತಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಇದಕ್ಕಾಗಿ ಪ್ರತ್ಯೇಕ ವಿಭಾಗ ರಚನೆ, ನುರಿತ ಕಾನೂನು ಸಲಹೆಗಾರರ ನೇಮಕ, ವಸೂಲಾತಿಗೆ ಹೊರಗುತ್ತಿಗೆಯಲ್ಲಿ ಏಜೆನ್ಸಿಗಳ ನೇಮಕಾತಿ ಇತ್ಯಾದಿಗಳ ನಡವಳಿಕೆಗಳನ್ನು ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಕೂಲಂಕುಶವಾಗಿ ಚರ್ಚಿಸಿ ಕ್ರಮವಿಟ್ಟಿದೆ.

**ವಸೂಲಾಗದ್ದೆಂದು ಪರಿಗಣಿಸಲಾದ ಪ್ರಕರಣಗಳಲ್ಲಿ ಹೋಕುಬಾಕಿ (ಬ್ಯಾಡ್ ಡೆಟ್ಸ್) ಸಾಲಗಳ ಬಗ್ಗೆ ಸೂಕ್ತ ರಿಯಾಯಿತಿ ನೀಡಿ ಆಖೈರುಗೊಳಿಸುವ ಬಗ್ಗೆ:**

ಬ್ಯಾಂಕಿನ ಒಟ್ಟಾರೆ ಸಾಲಗಳ ಪೈಕಿ ಸುಮಾರು 16.96 ಕೋಟಿಗಳಷ್ಟು ಮೊಬಲಗು ಸುಸ್ತಿಯಾಗಿದ್ದು ಇದರ ವಸೂಲಾತಿಗೆ ಗಂಭೀರವಾಗಿ ಪ್ರಯತ್ನಿಸುವಂತೆ ಲೆಕ್ಕಪರಿಶೋಧಕರು ತಮ್ಮ ಸಲಹೆ ಸೂಚನೆಗಳಡಿ ಸೂಚಿಸಿರುತ್ತಾರೆ. ಈ ಪೈಕಿ ಹಲವಾರು ವರ್ಷಗಳ ಹಿಂದಿನ ಪ್ರಕರಣಗಳೇ ಹೆಚ್ಚಿದ್ದು, ಇವುಗಳನ್ನು ಇತ್ಯರ್ಥಗೊಳಿಸಿದಲ್ಲಿ ಬ್ಯಾಂಕಿನ ಆರ್ಥಿಕ ವಹಿವಾಟು ಮುಂದಿನ ದಿನಗಳಲ್ಲಿ ಸುಗಮವಾಗಿ ನಡೆಯಲು ಅವಕಾಶವಾಗಿ ಶಾಖಾ ವಿಸ್ತರಣೆಗೂ ಸಹಕಾರಿಯಾಗಲಿದೆ.

ಕಳೆದ ಹಲವಾರು ವರ್ಷಗಳಿಂದ ವಸೂಲಾಗದೆ ಬಾಕಿಯುಳಿದಿದ್ದ 10 ವರ್ಷಗಳಿಗೂ ಮೇಲ್ಪಟ್ಟ ಕೆಲ ಸುಸ್ತಿ ಬಾಕಿಗಳನ್ನು ಸರ್ವಸದಸ್ಯರ ಸಭೆ ತೀರ್ಮಾನದಂತೆ ಆಖೈರುಗೊಳಿಸಿದ ಪರಿಣಾಮ ಅನುತ್ಪಾದಕ ಆಸ್ತಿ ಪ್ರಮಾಣವು ಗಮನಾರ್ಹ ಇಳಿಕೆಯಾಗಿ ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸುವ ನಿರ್ಬಂಧದಿಂದ ಹೊರಬಂದಿದೆ. ಈ ಕಾರಣದಿಂದ ಬ್ಯಾಂಕ್ ಗಳಿಸಿದ ಲಾಭದಲ್ಲಿ ಮುಕ್ತವಾಗಿ ಡಿವಿಡೆಂಡ್ ವಿತರಣೆಗೂ ಸಹಕಾರಿಯಾಗಿದೆ. ಸರ್ವಸದಸ್ಯರ ಸಭೆಯು ಆಡಳಿತ ಮಂಡಳಿಗೆ ನೀಡಲಾಗಿದ್ದ ಅಧಿಕಾರ ವ್ಯಾಪ್ತಿಯಲ್ಲಿ ಚರ್ಚಿಸಿ, ತೀರ್ಮಾನಿಸಿ ಬ್ಯಾಂಕಿನ ಹಿತದೃಷ್ಟಿಯೊಂದಿಗೆ ಮಾನವೀಯ ದೃಷ್ಟಿಯಿಂದ ಆರ್ಥಿಕ ಸಂಕಷ್ಟದಲ್ಲಿದ್ದ ಸದಸ್ಯರುಗಳಿಗೆ ಸಹಾಯ ಮಾಡಿ ತನ್ಮೂಲಕ ಬ್ಯಾಂಕಿನ ಹಿತವನ್ನೂ ಕೂಡ ಕಾಪಾಡಿ ಹಳೆಯ ಸುಸ್ತಿ ಬಾಕಿಗಳನ್ನು ಇತ್ಯರ್ಥಗೊಳಿಸಲಾಗುತ್ತಿದೆ.

ಈ ಹಿಂದಿನ ಮಹಾಸಭೆಗಳ ತೀರ್ಮಾನದಂತೆ ಸಮಿತಿ ವ್ಯಾಪ್ತಿಯಲ್ಲಿ ಚರ್ಚಿಸಲು ಆಡಳಿತ ಮಂಡಳಿಯಲ್ಲಿ ಸೂಕ್ತ ಅಧಿಕಾರ ನೀಡಿ ವಸೂಲಾತಿಗೆ ತೊಡಕಿರುವ 10 ವರ್ಷಗಳಿಗೂ ಹಿಂದಿನ ಸುಸ್ತಿ ಪ್ರಕರಣಗಳಲ್ಲಿ ಕಾಸ್ಟ್ ಆಫ್ ಫಂಡ್‌ಗೆ ಕೊರತೆಯಾಗದಂತೆ ಖಾತೆಗಳನ್ನು ಚುಕ್ತಗೊಳಿಸಲು ಅಧಿಕಾರ ಪಡೆಯಲಾಗಿತ್ತು. ಅಲ್ಲದೇ, ಸರ್ವಸದಸ್ಯರ ಸಮಕ್ಷಮ ಕೆಲ ಸುಸ್ತಿದಾರರು ಹಾಜರಿದ್ದು, ತಮ್ಮ ಆರ್ಥಿಕ ಸಂಕಷ್ಟಗಳನ್ನು ತಿಳಿಸಿ ಸೂಕ್ತ ರಿಯಾಯಿತಿ ಅಹವಾಲುಗಳನ್ನು ಪ್ರಸ್ತಾಪಿಸಿರುತ್ತಾರೆ. ಆದರಂತೆ ಈ ಎಲ್ಲಾ ಅಂಶಗಳನ್ನು ಗಮನಿಸಿ, ಹಾಲಿ ಆರ್ಥಿಕ ಸಾಲಿನಲ್ಲಿ ಈ ಕೆಳಕಂಡ ಪ್ರಕರಣಗಳನ್ನು ಪರಿಗಣಿಸಿ ಚುಕ್ತಗೊಳಿಸಲಾಗಿದೆ.

| | | |
|---|---|---|
| ಶ್ರೀ ವಾಜೀರ್ | ಶ್ರೀಮತಿ ಪಿ.ಕಮಲ | ಶ್ರೀ ಕಮಲಮ್ಮ |
| ಶ್ರೀಮತಿ ಸುಧಾ ಮಾಧುರಿ | ಶ್ರೀ ವಾಸನ್ ಬಿ.ಆರ್ & ಶ್ರೀಮತಿ ಸಿಂಧು ಎಸ್.ಎಲ್ | |

ಈ ಮೇಲ್ಕಂಡ ತೀರ್ಮಾನಕ್ಕೆ ಸರ್ವಸದಸ್ಯರು ಅನುಮೋದನೆ ಮತಿ ನೀಡಲು ಕೋರಲಾಗಿದೆ.

ಅದೇ ರೀತಿ ಮುಂದಿನ ದಿನಗಳಲ್ಲಿಯೂ ವಸೂಲಾತಿಗೆ ತೊಡಕಾದ ಅನುತ್ಪಾದಕ ಸಾಲಗಳ ವ್ಯಾಪ್ತಿಯಲ್ಲಿ ಬರುವ ಆಯ್ದ ಪ್ರಕರಣಗಳನ್ನೂ ಸಹ ನಿಯಮಾನುಸಾರ ಇತ್ಯರ್ಥಗೊಳಿಸಲು ಉದ್ದೇಶಿಸಿದೆ. ಇಂತಹವುಗಳನ್ನು ಇತ್ಯರ್ಥಗೊಳಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಅಪೇಕ್ಷಿಸಿದ್ದು ಇದಕ್ಕೆ ಸರ್ವಸದಸ್ಯರು ಅನುಮೋದನೆ ನೀಡಲು ಕೋರಲಾಗಿದೆ.

ಕಳೆದ ಆರ್ಥಿಕ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸುಸ್ತಿ ಸಾಲಗಳ ತಾಂತ್ರಿಕ ವಜಾ (Technical Write-off), ಏಕಕಾಲಿಕ ತೀರುವಳಿ ಯೋಜನೆ (OTS), ಸುಸ್ತಿ ರಾಜಿ ಪರಿಹಾರ (Compromise Settlement) ಗಳಿಗೆ ವಿವಿಧ ಸುತ್ತೋಲೆಗಳನ್ನು ಹೊರಡಿಸಿದೆ. ಈ ಸುತ್ತೋಲೆಯಂತೆ ಆಡಳಿತ ಮಂಡಳಿಗೆ ಹೆಚ್ಚಿನ ಅಧಿಕಾರ ನೀಡಿದ್ದು, ಜಾರಿಗೆ ತರಲು ಸೂಕ್ತ ನಿಯಮಾವಳಿ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿಯಲ್ಲಿ ಈ ಕುರಿತ ನಿಯಮಾವಳಿಗಳನ್ನು ರಚಿಸಿದ್ದು, ಇವುಗಳಡಿಯಲ್ಲಿ ಕಾರ್ಯಪ್ರವೃತ್ತರಾಗಿರುವುದಾಗಿ ಸರ್ವಸದಸ್ಯರ ಗಮನಕ್ಕೆ ತರುತ್ತಿದ್ದೇವೆ.

**2023-24ನೇ ಸಾಲಿನ ನಿವ್ವಳ ಲಾಭ:**

ಬ್ಯಾಂಕ್ ಪ್ರಾರಂಭದಿಂದಲೂ ಸತತವಾಗಿ ಲಾಭಗಳಿಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯವಾಗಿದೆ. 2023-24ನೇ ಸಾಲಿನಲ್ಲಿ ರೂ. 322.60 ಲಕ್ಷ ಕ್ರೋಢೀಕೃತ ಲಾಭಗಳಿಸಿದ್ದು, ಈ ಪೈಕಿ ರೂ.62.07 ಲಕ್ಷ ಆದಾಯ ತೆರಿಗೆ ಪಾವತಿಸಿ, ರೂ.25.90 ಲಕ್ಷ ಕರಡು ಹಾಗೂ ಸಂಶಯಾಸ್ಪದ ನಿಧಿ, ರೂ.1.36 ಲಕ್ಷ ಸಿಬ್ಬಂದಿ ಗಳಿಕೆ ರಜೆ ನಗದೀಕರಣ ಕಾಯ್ದಿರಿಸಿ ಅಂತಿಮವಾಗಿ ರೂ.272.17 ಲಕ್ಷ ನಿವ್ವಳ ಲಾಭ ಗಳಿಸಿದೆ. ಶಾಖೆಗಳ ವಹಿವಾಟನ್ನು ವಿಸ್ತರಿಸಿ ಇನ್ನೂ ಹೆಚ್ಚಿನ ಲಾಭಗಳಿಕೆಯತ್ತ ಸಾಗಬೇಕಿದೆ. ಹಾಲಿ ಸಾಲಿನ ಈ ನಿವ್ವಳ ಲಾಭವನ್ನು ಕಾಯ್ದೆ, ನಿಯಮ, ಉಪನಿಯಮ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನಗಳ ರೀತ್ಯ ವಿಲೇ ಮಾಡಿ ವಿಷಯ–8ರಲ್ಲಿ ಮಹಾಸಭೆಯ ಅನುಮೋದನೆಗೆ ಆಡಳಿತ ಮಂಡಳಿಯು ಮಂಡಿಸಿದೆ.

**ಡಿವಿಡೆಂಡ್ ವಿತರಣೆಃ**

2022-23ನೇ ಸಾಲಿನಲ್ಲಿ ಸದಸ್ಯರುಗಳಿಗೆ ಶೇ.15ರ ದರದಲ್ಲಿ ಡಿವಿಡೆಂಡ್ ವಿತರಿಸಲಾಗಿತ್ತು. 2023-24ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯಲ್ಲಿ ಸದಸ್ಯರುಗಳ ಷೇರುಧನ ರೂ.8.48 ಕೋಟಿಗಳ ಮೇಲೆ ಶೇ.20ರ ದರದಲ್ಲಿ ರೂ.169.64 ಲಕ್ಷಗಳ ಡಿವಿಡೆಂಡ್ ಮೊಬಲಗನ್ನು ಆಡಳಿತ ಮಂಡಳಿಯು ಘೋಷಿಸಲು ನಿರ್ಧರಿಸಿದೆ. ಇದಕ್ಕೆ ಸರ್ವಸದಸ್ಯರ ಸಭೆಯು ಒಪ್ಪಿಗೆ ನೀಡಬೇಕಾಗಿ ಕೋರಿದೆ.

**ಮೂರು ವರ್ಷಗಳಿಗೆ ಮೇಲ್ಪಟ್ಟ ಪಾವತಿಯಾಗದ ಡಿವಿಡೆಂಡ್ ಮೊಬಲಗು ಃ**

ವಿಲೇಯಾಗಿ ಪಾವತಿಯಾಗದಿರುವ ಮೂರು ವರ್ಷಗಳಿಗೂ ಮೇಲ್ಪಟ್ಟ ಡಿವಿಡೆಂಡ್ ಮೊಬಲಗನ್ನು ಕಾಯ್ದೆ /ಉಪನಿಯಮ ರೀತ್ಯ ಆಪದ್ಧನ ನಿಧಿಗೆ ವರ್ಗಾಯಿಸಬೇಕಾಗಿರುತ್ತದೆ. ಆ ಅವಧಿಯ ಲಾಭದ ವಿಲೇವಾರಿಯಲ್ಲಿ ಶೇ.10 ರಂತೆ ಡಿವಿಡೆಂಡ್ ಘೋಷಿಸಿದ್ದು, ಕೋವಿಡ್–19 ರಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಡಿವಿಡೆಂಡ್ ವಿತರಣೆಗೆ ಅನುಮತಿ ನೀಡದ ಕಾರಣ 2019-20ನೇ ಸಾಲಿಗೆ ಡಿವಿಡೆಂಡ್ ವಿತರಿಸಿರುವುದಿಲ್ಲವಾದ್ದರಿಂದ ಯಾವುದೇ ಮೊಬಲಗು ಬಾಕಿಯಿರುವುದಿಲ್ಲ.

**ಬ್ಯಾಂಕಿನ ಸಿಬ್ಬಂದಿ ವೃಂದಬಲ/ವೇತನ ಪಾವತಿ/ತರಬೇತಿ ಹಾಗೂ ನೇಮಕಾತಿ ಬಗ್ಗೆಃ**

ಸಹಕಾರ ಇಲಾಖೆಯ ಆದೇಶ ಸಂಖ್ಯೆಃ ಯುಬಿಸಿಃಯುಸಿಎಸ್ಃ57/94-95, ದಿನಾಂಕ 30.05.1995ರಲ್ಲಿ 85 ಹುದ್ದೆ ಮತ್ತು ಆದೇಶ ಸಂಖ್ಯೆಃ ಯುಬಿಸಿಃಯುಸಿಎಸ್ಃ77/95-96, ದಿನಾಂಕ 08.01.1996ರಲ್ಲಿ 25 ಹುದ್ದೆ ಒಟ್ಟು ಹಾಲಿ ಅನುಮೋದಿಸಲ್ಪಟ್ಟ ವೃಂದಬಲ 110 ಇರುತ್ತದೆ. ಸಿಬ್ಬಂದಿಗಳಿಗೆ ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕ್ ಮಹಾಮಂಡಳ ನಿ., ದ ವೇತನ ಶ್ರೇಣಿ ಅಳವಡಿಸಿ, ಕಾಲಕಾಲಕ್ಕೆ ಕರ್ನಾಟಕ ರಾಜ್ಯ ಸರ್ಕಾರವು ಮಂಜೂರು ಮಾಡುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ಗಳಿಕೆ ರಜೆ ನಗದೀಕರಣ ಇತ್ಯಾದಿಗಳನ್ನು ನೀಡುತ್ತಾ ಬಂದಿದೆ, ಇದಲ್ಲದೇ, ಸಿಬ್ಬಂದಿಗಳ ಕಾರ್ಯಕ್ಷಮತೆಗಳಿಗನುಗುಣವಾಗಿ ಬಡ್ತಿ, ಕಾಲಕಾಲಕ್ಕೆ ಇನ್‌ಕ್ರಿಮೆಂಟ್, ಬೋನಸ್/ಎಕ್ಸ್‌ಗ್ರೇಷಿಯಾ ಇತ್ಯಾದಿ ಸೌಲಭ್ಯ ನೀಡಿ ಉತ್ತೇಜಿಸಲಾಗುತ್ತಿದೆ. ಇದರ ಒಟ್ಟಾರೆ ನಿರ್ವಹಣೆಯು ದುಡಿಯುವ ಬಂಡವಾಳದ ಶೇ.2ಕ್ಕೆ ಮೀರದಂತೆ ನಿಗಾವಹಿಸಲಾಗಿದೆ.

ಬ್ಯಾಂಕಿನ ವಹಿವಾಟು ವಿಸ್ತರಣೆ ದೃಷ್ಠಿಯಿಂದ ಶಾಖೆಗಳನ್ನು ತೆರೆಯಬೇಕಿದ್ದು, ಹೆಚ್ಚಿನ ಪ್ರಮಾಣದ ಅಧಿಕಾರಿ ವರ್ಗ ಹಾಗೂ ಸಹಾಯ ಸಿಬ್ಬಂದಿಗಳ ಅಗತ್ಯವಿರುತ್ತದೆ. ಅಲ್ಲದೇ ಕೆಲ ಹಿರಿಯ ಅಧಿಕಾರಿ ಸಿಬ್ಬಂದಿ ವರ್ಗದವರು ವಯೋಮಾನ ರೀತ್ಯ ನಿವೃತ್ತರಾಗಿರುವುದರಿಂದ ಸಿಬ್ಬಂದಿ ನೇಮಕಾತಿಗೆ ಸರ್ವಸದಸ್ಯರ ಸಭೆಗಳ ತೀರ್ಮಾನದಂತೆ ಕ್ರಮವಿಡಲಾಗಿದೆ. ಅಲ್ಲದೇ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ, ಲೆಕ್ಕಪರಿಶೋಧಕರ ಹಾಗೂ ಸರ್ವಸದಸ್ಯರ ಸೂಚನೆ ಮೇರೆಗೆ ಪೂರ್ಣಪ್ರಮಾಣದ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಅಧಿಕಾರಿಗಳ ನೇಮಕಾತಿಗೂ ಕ್ರಮವಿಡಲಾಗಿದ್ದು, ಈ ಬಗ್ಗೆ ಸಹಕಾರಿ ಇಲಾಖೆಯಿಂದ ಅನುಮತಿ ಬಂದ ಮೇರೆಗೆ ನೇಮಕಾತಿ ಸಮಿತಿ ರಚಿಸಿದ್ದು, ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್, ಇನ್ಸಿಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು ತರಬೇತಿ ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕ್ ಮಹಾಮಂಡಳ ನಿ.,ದ ಆಶ್ರಯದಲ್ಲಿ ಆನ್‌ಲೈನ್ ಮೂಲಕ ವಿವಿಧ ತರಬೇತಿ/ಕಾರ್ಯಗಾರಗಳು ಜರುಗುತ್ತಿದ್ದು ಬ್ಯಾಂಕಿನ ಸಿಬ್ಬಂದಿಗಳಿಗೆ ಇವುಗಳ ಸಹಕಾರದಿಂದ ತರಬೇತಿಗೆ ನಿಯೋಜಿಸಲಾಗುತ್ತಿದೆ. ಅಲ್ಲದೇ ಬ್ಯಾಂಕಿಂಗ್ ವಹಿವಾಟಿಗೆ ಸಂಬಂಧಿಸಿದಂತೆ ತಜ್ಞರು, ಬ್ಯಾಂಕಿನ ಲೆಕ್ಕಪರಿಶೋಧಕರುಗಳಿಂದ ಉಪನ್ಯಾಸ ಆಯೋಜಿಸುವ ಗುರಿ ಹೊಂದಲಾಗಿದೆ. ಅಲ್ಲದೇ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕ್ ನಡೆಸುವ ಡಿಪ್ಲೋಮಾ ಇನ್ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (DUCBM) ದ ಲಿಖಿತ ಪರೀಕ್ಷೆಗೆ ಬ್ಯಾಂಕಿನ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ. ರಾಜ್ಯಮಟ್ಟದ ಪ್ರಾದೇಶಿಕ ಸಹಕಾರಿ ತರಬೇತಿ ಕೇಂದ್ರ, ಬೆಂಗಳೂರುದಲ್ಲಿನ ತರಬೇತಿದಾರರು ಒಂದು ದಿನದ ಕಾರ್ಯಾಗಾರವನ್ನು ಬ್ಯಾಂಕಿನಲ್ಲಿ ನಡೆಸಿರುವುದು ಸಹಕಾರಿ ಕ್ಷೇತ್ರದಲ್ಲಿ ಬ್ಯಾಂಕಿನ ಘನತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಈ ಸಂಸ್ಥೆ ನಡೆಸುವ ಕಾರ್ಯಾಗಾರಗಳಿಗೆ ಬ್ಯಾಂಕಿನ ವತಿಯಿಂದ ನಿರ್ದೇಶಕರು/ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಬರಲಾಗುತ್ತಿದೆ.

**ಆಡಳಿತ ಮಂಡಳಿ, ಸಮಿತಿ ಸಭೆಗಳು ಮತ್ತು ವಾರ್ಷಿಕ ಸರ್ವಸದಸ್ಯರ ಸಭೆಃ**

ವರದಿ ಸಾಲಿನಲ್ಲಿ 19 ಆಡಳಿತ ಮಂಡಳಿ ಸಭೆ, 44 ಸಮಿತಿ ಸಭೆ, 2 ವ್ಯವಸ್ಥಾಪನಾ ಮಂಡಳಿ ಸಭೆಗಳು ಮತ್ತು ದಿನಾಂಕ 10.09.2023 ರಂದು 94ನೇ ವಾರ್ಷಿಕ ಸರ್ವಸದಸ್ಯರ ಸಭೆ ನಡೆದಿರುತ್ತದೆ. ಸಾಲದ ಸಮಿತಿ, ಕಾರ್ಯನಿರ್ವಾಹಕ ಸಮಿತಿ ಹಾಗೂ ಲೆಕ್ಕಪರಿಶೋಧನಾ ಸಮಿತಿಗಳನ್ನು ಹೊಂದಿದ್ದು, ಈ ಸಮಿತಿಯ ಸದಸ್ಯರು ಕಾಲಕಾಲಕ್ಕೆ ಸಭೆ ಸೇರಿ ಸಮಿತಿಯ ಉದ್ದೇಶಕ್ಕನುಗುಣವಾಗಿ ಕಾರ್ಯಭಾರಗಳನ್ನು ನಡೆಸಿ ಸಹಕರಿಸಿರುತ್ತಾರೆ. ಸಾಲ ಸಮಿತಿಯನ್ನೊಳಗೊಂಡಂತೆ ಕೆಲ ನಿರ್ದೇಶಕರನ್ನು ಸೇರ್ಪಡಿಸಿ ಈ ಸಮಿತಿ ವ್ಯಾಪ್ತಿಯಲ್ಲಿ ವಸೂಲಾತಿಗೆ ಸಂಬಂಧಿಸಿದ ಪೂರ್ಣ ಅಧಿಕಾರ ನೀಡಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

## 2023-24 ನೇ ಸಾಲಿನ ಆಡಳಿತ ಮಂಡಳಿ ನಿರ್ದೇಶಕರ ಸಭೆ ಹಾಜರಾತಿ ವಿವರ

| | ನಿರ್ದೇಶಕರ ಹೆಸರು | ಹುದ್ದೆ | ಆಡಳಿತ ಮಂಡಳಿ | ಸಮಿತಿ | ಒಟ್ಟು |
|---|---|---|---|---|---|
| 01 | ಶ್ರೀ ಆರ್.ಪಿ.ಎಂ.ಸತ್ಯನಾರಾಯಣ | ಅಧ್ಯಕ್ಷರು | 19 | 43 | 62 |
| 02 | ಶ್ರೀ ಬಿ.ವಿ.ಗೋಪಾಲರೆಡ್ಡಿ | ಉಪಾಧ್ಯಕ್ಷರು | 10 | 5 | 15 |
| 03 | ಶ್ರೀ ಕೆ.ಎಂ.ಶ್ರೀನಿವಾಸಮೂರ್ತಿ | ನಿರ್ದೇಶಕರು | 5 | -- | 5 |
| 04 | ಶ್ರೀ ಎಂ.ಎಸ್.ಪವನ್ ಕುಮಾರ್ | ನಿರ್ದೇಶಕರು | 12 | 11 | 23 |
| 05 | ಶ್ರೀ ಪಿ.ಎಸ್.ಬಾಲಕೃಷ್ಣಶೆಟ್ಟಿ | ನಿರ್ದೇಶಕರು | 13 | -- | 13 |
| 06 | ಶ್ರೀ ಕೆ.ಆರ್.ಕೃಷ್ಣ | ನಿರ್ದೇಶಕರು | 16 | 15 | 31 |
| 07 | ಶ್ರೀ ಕೆ.ಸಿ.ರುದ್ರಮೂರ್ತಿ | ನಿರ್ದೇಶಕರು | 17 | 14 | 31 |
| 08 | ಶ್ರೀ ಬಿ.ಎಸ್.ಪ್ರಸನ್ನಬಾಬು | ನಿರ್ದೇಶಕರು | 17 | -- | 17 |
| 09 | ಶ್ರೀ ಎನ್.ದಯಾನಂದ್ | ನಿರ್ದೇಶಕರು | 19 | 16 | 35 |
| 10 | ಶ್ರೀ ಪಿ.ಪಳನಿ | ನಿರ್ದೇಶಕರು | 10 | 3 | 13 |
| 11 | ಶ್ರೀ ಬಿ.ಎಸ್.ಶ್ರೀರಂಗ | ನಿರ್ದೇಶಕರು | 15 | -- | 15 |
| 12 | ಶ್ರೀಮತಿ ಹೆಚ್.ಸಿ.ನಾಗರತ್ನ | ನಿರ್ದೇಶಕರು | 19 | 19 | 38 |
| 13 | ಶ್ರೀಮತಿ ಎನ್.ಮಾಲಿನಿ | ನಿರ್ದೇಶಕರು | 19 | 20 | 39 |
| 14 | ಶ್ರೀ ಎಂ.ಮಾರಪ್ಪ | ನಿರ್ದೇಶಕರು | 14 | 8 | 22 |
| 15 | ಶ್ರೀ ಹೆಚ್.ಕೆ.ಚಂದ್ರಪ್ಪ | ನಿರ್ದೇಶಕರು | 19 | -- | 19 |
| 16 | ಶ್ರೀ ಬಿ.ವಿ.ಶ್ರೀನಿವಾಸ್ | ವೃತ್ತಿಪರ ನಿರ್ದೇಶಕರು | 5 | -- | 5 |
| 17 | ಶ್ರೀ ಎನ್.ವೆಂಕಟಾಚಲಂ | ವೃತ್ತಿಪರ ನಿರ್ದೇಶಕರು | 17 | 19 | 36 |

**ವ್ಯವಸ್ಥಾಪನಾ ಮಂಡಳಿ (Board of Management) ರಚನೆ**

ಭಾರತೀಯ ರಿಸರ್ವ್ ಬ್ಯಾಂಕಿನವರು ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ವಹಣೆಯಲ್ಲಿ ವೃತ್ತಿಪರತೆ ತರುವ ನಿಟ್ಟಿನಲ್ಲಿ ಅರ್ಹ ವಿದ್ಯಾರ್ಹತೆ ಹೊಂದಿರುವ ವ್ಯಕ್ತಿಗಳಿರುವ ವ್ಯವಸ್ಥಾಪನಾ ಮಂಡಳಿ (Board of Management) ಹೊಂದಿರಬೇಕೆಂದು ನಿರ್ದೇಶಿಸಿದ ಹಿನ್ನೆಲೆಯಲ್ಲಿ ಬ್ಯಾಂಕಿನ ಬೈಲಾ ಅನುಮೋದನೆ ಪಡೆದಿದೆ. ಈ ಮಂಡಳಿಯು ಬ್ಯಾಂಕಿನ ಮೇಲ್ವಿಚಾರಣೆಗೆ ಸಂಬಂಧಿಸಿದ ಅಗತ್ಯ ಹೂಡಿಕೆ, ಸಾಲ ಮತ್ತು ಮುಂಗಡ, ಸುಸ್ತಿ ವಸೂಲಾತಿ, ಸಿಬ್ಬಂದಿ ಇತ್ಯಾದಿ ನಿಯಮಾವಳಿ (Policies) ಗಳನ್ನು ರಚಿಸಿ ಜಾರಿಗೆ ತರುವಲ್ಲಿ ಅಗತ್ಯ ಪಾತ್ರ ವಹಿಸಲಿದೆ. ಈ ನಿಯಮಾವಳಿಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಡಿ ರಚಿತವಾಗಿ ಕಾಲಕಾಲಕ್ಕೆ ಪರಾಮರ್ಶೆ (Review)ಗೊಳ್ಳುವುದು ಅಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಬ್ಯಾಂಕಿನಲ್ಲಿ ವೃತ್ತಿಪರ ತಜ್ಞರನ್ನೊಳಗೊಂಡ ವ್ಯವಸ್ಥಾಪನಾ ಮಂಡಳಿ ರಚಿಸಿ ಕಾಲಕಾಲಕ್ಕೆ ಸಭೆ ನಡೆಸಲಾಗಿರುತ್ತದೆ.

**Digitalisation ಹಾಗೂ ಗಣಕೀಕರಣಃ**

ಬ್ಯಾಂಕಿಂಗ್ ಕ್ಷೇತ್ರದ ತಂತ್ರಜ್ಞಾನವು ಹೊಸ ಹೊಸ ಆವಿಷ್ಕಾರದಿಂದ ವೇಗದಲ್ಲಿ ಮುನ್ನಡೆಯುತ್ತಿದೆ. ಅಂತೆಯೇ, ಬ್ಯಾಂಕಿಂಗ್ ವ್ಯವಸ್ಥೆಯು ಸಂಪೂರ್ಣ ಗಣಕೀಕರಣಗೊಳಸಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶಿಸಿದೆ. ಅದರಂತೆ ಬ್ಯಾಂಕಿಂಗ್ ವ್ಯವಹಾರದ ಪ್ರತಿಯೊಂದು ವಹಿವಾಟು ತಂತ್ರಾಂಶದಡಿ ಲಭ್ಯವಾಗುವ ರೀತಿಯಲ್ಲಿ ಕೋರ್ ಬ್ಯಾಂಕಿಂಗ್ ಸಿಸ್ಟಂ ಅನ್ನು ಅಳವಡಿಸಿ, ತಂತ್ರಾಂಶದ ಗುಣಮಟ್ಟ, ಹತೋಟಿ, ನಿಯಂತ್ರಣ ಅಂಶಗಳ ಬಗ್ಗೆ ಸೂಕ್ತ ಮಾರ್ಗಸೂಚಿಯನ್ನು ಪಾಲಿಸಲಾಗುತ್ತಿದೆ. ಬ್ಯಾಂಕಿಂಗ್ ಹಣಕಾಸು ವಹಿವಾಟಿನ ರಕ್ಷಣೆಗೆ ಪ್ರತ್ಯೇಕ ಸೈಬರ್ ಸೆಕ್ಯೂರಿಟಿ ಪಾಲಿಸಿಗಳನ್ನು ಜಾರಿಗೊಳಿಸಿ, ಬ್ಯಾಂಕಿನ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಿದೆ. ಈ ಬೆಳವಣಿಗೆಗಳು ಶೀಘ್ರ ನಗದು ವರ್ಗಾವಣೆಗೆ ಅನುಕೂಲಕವಾಗಲಿವೆ. ಹಾಲಿ RTGS/NEFT ಸೌಲಭ್ಯ ಮತ್ತು SMS, BALANCE ENQUIRY, ಎ.ಟಿ.ಎಂ ಗಳಂತಹ ಮೌಲ್ಯವರ್ಧಿತ ಸೇವೆಗಳು ಈಗಾಗಲೇ ಜಾರಿಯಲ್ಲಿದೆ.

ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಡಿಜಿಟಲೈಸೇಷನ್ ಸೌಲಭ್ಯಗಳಾದ ಮೊಬೈಲ್ ಬ್ಯಾಂಕಿಂಗ್, ಯುಪಿಐ ಪೇಮೆಂಟ್ಸ್ (POS/E-Com, GPay, PhonePe, Paytm), IMPS ಗಳ ಜಾರಿಗೆ ಅಗತ್ಯ ಲೈಸೆನ್ಸ್ ಪಡೆಯುವಲ್ಲಿ ಬ್ಯಾಂಕ್ ಯಶಸ್ವಿಯಾಗಿ ಡಿಜಿಟಲ್ ಸೌಲಭ್ಯಗಳನ್ನೂ ಸಹ ಜಾರಿಗೊಳಿಸಿದ್ದು ಗ್ರಾಹಕರುಗಳು ಇದರ ಸದುಪಯೋಗಿಸಿಕೊಳ್ಳಬೇಕೆಂದು ಕೋರುತ್ತೇವೆ. ಇದಲ್ಲದೇ ಬ್ಯಾಂಕ್ ತನ್ನದೇ ಆದ ವೆಬ್‌ಸೈಟ್ (www.gmcbank.net) ಹೊಂದಿದ್ದು, ಠೇವಣಿ/ಸಾಲ ಬಡ್ಡಿ ಹಾಗೂ ಇನ್ನಿತರ ವಿವರಗಳನ್ನು ಕಾಲಕಾಲಕ್ಕೆ ಜಾಲತಾಣದಲ್ಲಿ ಪ್ರಕಟಿಸುತ್ತಿದ್ದು, ಪರಿಶೀಲನೆಗೆ ಲಭ್ಯವಿದೆ. ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿಯನ್ನೂ ಸಹ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುತ್ತಿದ್ದು, ಈ ಸಾಲಿನ ವರದಿಯನ್ನೂ ಸಹ ಸದಸ್ಯರುಗಳು ಜಾಲತಾಣದಲ್ಲಿ ಪರಿಶೀಲಿಸಬಹುದಾಗಿದೆ.

**ಸಮವರ್ತಿ, ತೆರಿಗೆ, ಜಿ.ಎಸ್.ಟಿ ಮತ್ತು ಶಾಸನಾತ್ಮಕ ಲೆಕ್ಕಪರಿಶೋಧನೆ :**
ಬ್ಯಾಂಕಿನ 2023-24ನೇ ಸಾಲಿನಲ್ಲಿ ಸಮವರ್ತಿ ಲೆಕ್ಕಪರಿಶೋಧನೆಯನ್ನು ಶ್ರೀ ರಾಘವೇಂದ್ರ ಆಚಾರ್ಯ ಸಿ ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ರವರು ಹಾಗೂ ವಾರ್ಷಿಕ ಶಾಸನಾತ್ಮಕ ಲೆಕ್ಕಪರಿಶೋಧನೆಯನ್ನು ಮೆಃ ಆರ್.ಎಸ್.ಟಿ & ಕಂ., ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರುಗಳು ನಿರ್ವಹಿಸಿರುತ್ತಾರೆ. ಸದರಿ ಸಾಲಿನ ಜಿ.ಎಸ್.ಟಿ ಆಡಿಟ್ ಹಾಗೂ ವಾರ್ಷಿಕ ತೆರಿಗೆಯನ್ನು ನಿರ್ವಹಿಸಲು ಶ್ರೀ ಹೆಚ್.ಎಸ್.ಉಡುಪ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ನಿಯೋಜಿಸಲಾಗಿದೆ.

**2023-24ನೇ ಸಾಲಿನ ಲೆಕ್ಕಪರಿಶೋಧನಾ "ಎ" ದರ್ಜೆ ವರ್ಗೀಕರಣಃ**
ಇತ್ತೀಚಿನ ದಿನಗಳಲ್ಲಿ ಬ್ಯಾಂಕಿನ ಪ್ರಗತಿಗಾಗಿ ಶ್ರಮವಹಿಸಿದ ಫಲದಿಂದಾಗಿ ಕಳೆದ ಸಾಲುಗಳಿಂದ ಮುಂದುವರಿದು 2023-24ನೇ ಸಾಲಿಗೂ ಬ್ಯಾಂಕಿನ **ಲೆಕ್ಕಪರಿಶೋಧನಾ ವರ್ಗೀಕರಣ "ಎ"** ದರ್ಜೆಗೆ ಬಂದಿರುವುದನ್ನು ಮಾನ್ಯ ಸದಸ್ಯರುಗಳಿಗೆ ತಿಳಿಸಲು ಹರ್ಷಿಸುತ್ತೇವೆ. ಸದಸ್ಯರ ಸಹಕಾರದೊಂದಿಗೆ ಮುಂದಿನ ಸಾಲುಗಳಲ್ಲೂ ಸಹ ಇದನ್ನೇ ಮುಂದುವರಿಸಿಕೊಂಡು ಹೋಗುವ ಇಚ್ಛೆ ಆಡಳಿತ ಮಂಡಳಿಯದ್ದಾಗಿರುತ್ತದೆ.

ಬ್ಯಾಂಕಿನ 2023-24ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಟ್ಟ ಮೆಃ ಆರ್.ಎಸ್.ಟಿ & ಕಂ., ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರುರವರಿಗೆ ಧನ್ಯವಾದಗಳನ್ನರ್ಪಿಸುತ್ತೇವೆ. ಈ ಲೆಕ್ಕಪರಿಶೋಧನಾ ವರದಿಯಲ್ಲಿ ಲೆಕ್ಕಪರಿಶೋಧರು ಗುರುತಿಸಿರುವ ನ್ಯೂನತೆಗಳಿಗೆ ಆಡಳಿತ ಮಂಡಳಿಯವರ ಸಮಾಧಾನದೊಂದಿಗೆ ಸರ್ವಸದಸ್ಯರ ಸಭೆ ಅನುಮೋದನೆಗೆ ವಿಷಯ–07ರಲ್ಲಿ ಮಂಡಿಸಿದೆ.

**ಪ್ರಧಾನ ಕಛೇರಿ ಮೊದಲ ಮಹಡಿ ದುರಸ್ತಿ/ನವೀಕರಣ ಹಾಗೂ ಸಭಾ ಆವರಣ ನಿರ್ಮಾಣಃ**
ಕಳೆದ ಸರ್ವಸದಸ್ಯರ ಸಭೆಯ ತೀರ್ಮಾನದಂತೆ ಬ್ಯಾಂಕಿನ ದುರಸ್ತಿ/ಕಟ್ಟಡ ನವೀಕರಣಕ್ಕೆ ರೂ.1.00 ಕೋಟಿ ಮೊಬಲಗನ್ನು ಆಯವ್ಯಯದೊಂದಿಗೆ ಮಂಜೂರಾತಿ ಪಡೆಯಲಾಗಿತ್ತು. ಕಾರಣಾಂತರದಿಂದ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗಿದ್ದಿಲ್ಲ. ಹಾಲಿ ಇದಕ್ಕೆ ಚಾಲನೆ ನೀಡಲು ಆಡಳಿತ ಮಂಡಳಿ ಸಿದ್ದತೆ ನಡೆಸಿ ಅಂದಾಜು ಆಯವ್ಯಯದಲ್ಲಿ ರೂ.80.00 ಲಕ್ಷ ಮೊಬಲಗನ್ನು ಕಾಯ್ದಿರಿಸಿದ್ದು, ಇದಕ್ಕಾಗಿ ತಾಂತ್ರಿಕ ತಜ್ಞರ ಸಮಿತಿ ರಚಿಸಿ ಕಾಮಗಾರಿ ಮೇಲ್ವಿಚಾರಣೆ ನಿರ್ವಹಿಸಲಿದ್ದು ಇದಕ್ಕೆ ಮಹಾಸಭೆ ಅನುಮೋದನೆ ನೀಡಬೇಕಾಗಿ ಕೋರಿದೆ.

**ಭಾರತೀಯ ರಿಸರ್ವ್ ಬ್ಯಾಂಕಿನ DoS.CO.ARG/SEC.01/08.91.001/2021-22, dtd.27.04.2021ರ ಪ್ರಕಾರ 2024-25ನೇ ಸಾಲಿಗೆ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ**
ತಿದ್ದುಪಡಿಗೊಂಡ ಬ್ಯಾಂಕಿಂಗ್ ಕಾಯಿದೆ ಅನ್ವಯ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ 2024-25 ರ ಅವಧಿಗೆ ಬ್ಯಾಂಕಿನ ಶಾಸನಾತ್ಮಕ ಲೆಕ್ಕಪರಿಶೋಧನೆ ಮಾಡಲು ಅರ್ಹತೆಯುಳ್ಳ ಕೆಳಕಂಡ ಎರಡು ಸಂಸ್ಥೆಗಳನ್ನು ಆದ್ಯತಾನುಸಾರ ಗೊತ್ತುಪಡಿಸಿ, ಅನುಮತಿ ಕೋರಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

1. **M/s NNR & Co.,**
   Chartered Accountants
   (Reg. No.11162s),
   No.162, 2nd Floor,
   Rajeshwari Complex
   R.V.Road, Bangalore-560 004

2. **M/s Gireesha Vijayan & Associates**
   Chartered Accountants,
   (Reg. No.014117s),
   No.3072, 7th Floor, High Point 3
   Next to Hotel Chalukya
   Bangalore-560 001

ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯನ್ವಯ 2024-25ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡಲಿದ್ದು ವಿಷಯ–14ರಲ್ಲಿ ಸರ್ವಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

**ಬ್ಯಾಂಕಿನ ಪ್ಯಾನಲ್ ವಕೀಲರುಃ**

| | | | |
|---|---|---|---|
| ಶ್ರೀ ಬಿ.ಎಸ್.ರಂಗಪ್ಪ | ಶ್ರೀ ಡಿ.ಪಿ.ಸುಬ್ಬಕೃಷ್ಣ | ಶ್ರೀ ಗಿರೀಶ್ ಬಿ.ಎನ್ | ಶ್ರೀ ಅಶ್ವತ್ ನಾರಾಯಣ |
| ಶ್ರೀ ಎ.ವೈ.ಎನ್.ಗುಪ್ತ | ಶ್ರೀ ಎಸ್.ಬಿ.ಮುಕ್ಕಣ್ಣಪ್ಪ | ಶ್ರೀ ಎಲ್.ಆರ್.ಶಶಿಕಾಂತ್ | ಶ್ರೀ ಎಂ.ಎನ್.ಮುನಿರೆಡ್ಡಿ |
| ಶ್ರೀ ಕೆ.ಎಸ್.ಶ್ರೀಕಾಂತ | ಶ್ರೀ ಎಲ್.ಎಸ್.ವೆಂಕಟಕೃಷ್ಣ | ಶ್ರೀ ಕೆ.ವಿ.ಲೋಕೇಶ್ | ಶ್ರೀ ಅರವಿಂದ್ ಬಾಬು |
| ಶ್ರೀ ವಿ.ಎನ್.ಶಿವಾನಂದ | ಶ್ರೀ ಹೆಚ್.ಎ.ಪ್ರಭಾಕರ್ | ಶ್ರೀಮತಿ ಮಂಜುಳ | ಶ್ರೀ ರಮೇಶ್ ಐತಾಳ್ |
| ಶ್ರೀ ಆರ್.ರಾಜೇಶ್ ತಿವಾರಿ | ಶ್ರೀ ಸಂದೇಶ್ ಟಿ.ಬಿ | ಶ್ರೀ ಸುಬ್ಬರಾಯ ಕಾರ್ವಿ | ಶ್ರೀ ಅನಂತನಾರಾಯಣ B.N |
| ಮೆಃ ಜಿ.ಕೆ.ಅಸೋಸಿಯೇಟ್ಸ್ | ಶ್ರೀ ಸಿ.ಎಸ್.ಸುಧೀರ್ ಅಸೋಸಿಯೇಟ್ | | |

**ಬ್ಯಾಂಕಿನ ಪ್ಯಾನಲ್ ಇಂಜೀನೀಯರ್ಸ್ಃ**

| | | |
|---|---|---|
| ಶ್ರೀ ಆರ್.ಜಗಧೀಶ್ | ಶ್ರೀ ಎಂ.ಆರ್.ಪುಟ್ಟರಾಜು | ಶ್ರೀ ಎನ್.ರಾಜೇಂದ್ರನಾಥ್ |
| ಶ್ರೀ ರವಿಶಂಕರ್ | ಶ್ರೀ ಕಾರ್ತಿಕ್, ಮೆಃ ಆನಂದ್ ಇಂಜಿನಿಯರಿಂಗ್ | ಶ್ರೀ ಕೆ.ಅನಂತರಾಂ |
| ಮೆಃ ಶ್ರೀಹರಿ ಅಸೋಸಿಯೇಟ್ಸ್ | | |

**ಬ್ಯಾಂಕಿನ ಆಭರಣ ಮೌಲ್ಯಮಾಪಕರುಃ**

ಶ್ರೀ ಎಸ್.ಲಕ್ಷ್ಮಿನಾರಾಯಣ ರಾಜು ಶ್ರೀ ಎಂ.ರಂಗರಾಜು

**ಧನ್ಯವಾದಗಳುಃ**

ಭಾರತೀಯ ರಿಸರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕ್ ವಿಭಾಗದ ಅಧಿಕಾರಿಗಳಿಗೆ, ಹೆಚ್.ಡಿ.ಎಫ್.ಸಿ, ಐಡಿಬಿಐ, ಅಪೆಕ್ಸ್ ಬ್ಯಾಂಕ್, ಭಾರತೀಯ ಸ್ಟೇಟ್ ಬ್ಯಾಂಕ್, ಬಿಡಿಸಿಸಿ ಬ್ಯಾಂಕ್ ಆಧಿಕಾರಿಗಳಿಗೆ, ಪ್ಯಾನಲ್ ವಕೀಲರುಗಳಿಗೆ, ಸಹಕಾರ ಇಲಾಖೆಯ ಅಧಿಕಾರಿಗಳಿಗೆ, ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್ ಮಹಾಮಂಡಳದ ಆಡಳಿತ ವರ್ಗದವರಿಗೆ, ಸಹಕಾರ ಲೆಕ್ಕಪರಿಶೋಧನಾ ಇಲಾಖಾಧಿಕಾರಿಗಳಿಗೆ, ಚಾರ್ಟರ್ಡ್ ಅಕೌಂಟೆಂಟ್ಸ್‌ರವರಾದ ಮೆಃ ಆರ್.ಎಸ್.ಟಿ & ಕಂ., ಮೆಃ ಹೆಚ್.ಎಸ್.ಉಡುಪ ಅಂಡ್ ಕಂ., ಶ್ರೀ ಸಿ.ಎ.ರಾಘವೇಂದ್ರ ಆಚಾರ್ಯ ಸಿ, ಮತ್ತು ಬ್ಯಾಂಕಿನ ಕಾನೂನು ಸಲಹೆಗಾರರು/ಮೌಲ್ಯಮಾಪಕರುಗಳಿಗೆ ಹಾಗೂ ಸಂಸ್ಥೆಯ ದೈನಂದಿನ ಚಟುವಟಿಕೆಯಲ್ಲಿ ಎಲ್ಲ ಕಾಲದಲ್ಲಿಯೂ ಸಾಕಷ್ಟು ಶ್ರಮಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗ, ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಿಟ್ ಸಲಹೆಗಾರರು ರವರುಗಳಿಗೆ, ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ, ಬೆಂಬಲ ನೀಡುತ್ತಿರುವ ಬ್ಯಾಂಕಿನ ಸದಸ್ಯರುಗಳಿಗೆ, ಗ್ರಾಹಕರುಗಳಿಗೆ, ಪ್ರಮುಖವಾಗಿ ಠೇವಣಿದಾರರುಗಳಿಗೆ ಹಾಗೂ ಪ್ರತ್ಯಕ್ಷ ಪರೋಕ್ಷವಾಗಿ ಸಹಕಾರ ನೀಡುತ್ತಿರುವ ಎಲ್ಲರಿಗೂ ಆಡಳಿತ ಮಂಡಳಿ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇವೆ ಹಾಗೂ ತಾವುಗಳೆಲ್ಲರೂ ಇನ್ನೂ ಹೆಚ್ಚಿನ ಸಹಕಾರ ನೀಡಬೇಕೆಂದು ವಿನಂತಿಸುತ್ತೇವೆ.

**ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು**
**ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,**
**ಚಾಮರಾಜಪೇಟೆ, ಬೆಂಗಳೂರು-560 018**

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.

## ನಂ.2 ಪಂಪಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು-560 018

## ದಿನಾಂಕ 1.04.2023 ರಿಂದ 31.03.2024ರ ವರೆಗಿನ ಲಾಭ ಮತ್ತು ನಷ್ಟದ ತಃಖ್ತೆ

| 31.03.2023 ರಲ್ಲಿದ್ದಂತೆ | ವೆಚ್ಚ | ಮೊಬಲಗು | ಮೊಬಲಗು 31.03.2024 | 31.03.2023 ರಲ್ಲಿದ್ದಂತೆ | ಆದಾಯ | ಮೊಬಲಗು | ಮೊಬಲಗು 31.03.2024 |
|---|---|---|---|---|---|---|---|
| | ಬಡ್ಡಿಗಳ ಪಾವತಿ | | | | ಬಡ್ಡಿಗಳ ಜಮಾ | | |
| **8,32,35,593.69** | ತೇವಣಿಗಳ ಮೇಲೆ ಬಡ್ಡಿ ಪಾವತಿಸಿದ್ದು | | **8,19,30,177.00** | 12,85,55,784.00 | ಸಾಲಗಳ ಮೇಲೆ ಬಂದ ಬಡ್ಡಿ | 10,80,36,249.00 | |
| | | | | 97,29,067.00 | ಗುಂತಾಯಗಳ ಮೇಲಿನ ಬಡ್ಡಿ | 1,67,29,061.00 | |
| | ವೇತನ ಸಿಬ್ಬಂದಿ ಭವಿಷ್ಯ ನಿಧಿ ಮತ್ತು ಇತರೆ | | | 4,57,88,000.00 | ಸರ್ಕಾರಿ ಭದ್ರತೆಗಳ ಮೇಲೆ ಬಂದ ಬಡ್ಡಿ | 4,61,46,999.80 | |
| 25,30,704.00 | ಸಿಬ್ಬಂದಿ ಭವಿಷ್ಯ ನಿಧಿ ಬ್ಯಾಂಕಿನ ವಂತಿಗೆ | 27,91,560.00 | | 2,23,441.00 | ಅವಧಿ ಪೂರ್ವ ಸಾಲ ಚುಕ್ತ ಶುಲ್ಕ | 7,96,388.00 | |
| 1,05,448.00 | ಇಪಿಎಫ್ ಆಡಳಿತ ವೆಚ್ಚ | 1,16,311.00 | | 0.00 | ಸರ್ಕಾರಿ ಭದ್ರತೆಗಳ ಮಾರಾಟದಿಂದ ಬಂದ ಲಾಭ | 2,50,000.00 | |
| 38,091.00 | ವಿಮಾ ನಿಧಿ | 32,997.00 | | **18,42,96,292.00** | | | **17,19,58,697.80** |
| 10,20,438.00 | ಎಲ್.ಐ.ಸಿ ಗ್ರೂಪ್ ಗ್ರಾಚ್ಯೂಯಿಟಿ ಯೋಜನೆ | 10,74,504.00 | | | | | |
| 37,22,106.00 | ಗಳಿಕೆ ರಜೆ ನಗದೀಕರಣ ಪಾವತಿ | 19,93,950.50 | | | ದಲ್ಲಾಳಿ ವಿನಿಮಯ ಮತ್ತು ರುಸುಂ | | |
| 2,61,62,873.00 | ಸಿಬ್ಬಂದಿ ವೇತನ | 2,76,83,594.00 | | 3,28,906.33 | ದಲ್ಲಾಳಿ | 2,64,394.10 | |
| 18,37,640.00 | ಸಿಬ್ಬಂದಿ ಎಕ್ಸ್‌ಗ್ರೇಷಿಯಾ ಪಾವತಿ | 17,83,407.00 | | 7,94,172.02 | ಸಾಲ ಪರಿಶೀಲನಾ ಶುಲ್ಕ | 8,06,699.14 | |
| 3,35,856.94 | ಸಿಬ್ಬಂದಿ ಕ್ಷೇಮ ವೆಚ್ಚ | 1,70,800.14 | | 1,275.76 | NPCI ವೆಚ್ಚ ಬಂದಿರುವುದು | 941.92 | |
| **3,57,53,156.94** | | | **3,56,47,123.64** | **11,24,354.11** | | | **10,72,035.16** |
| | | | | | ಇತರೆ ಆದಾಯಗಳು | | |
| | ನಿರ್ದೇಶಕರ ಸಭಾ ಭತ್ಯೆ | | | 14,016.00 | ಎ.ಟಿ.ಎಂ ವೆಚ್ಚ NPCI | 12,360.00 | |
| **8,29,750.00** | ನಿರ್ದೇಶಕರ ಸಭಾ ಭತ್ಯೆ | | **13,35,000.00** | 0.00 | ಕಟ್ಟಣ ನಿರ್ವಹಣಾ ವೆಚ್ಚ ಬಂದಿರುವುದು | 16,94,915.00 | |
| | | | | 1,66,386.38 | ನಗದು ನಿರ್ವಹಣಾ ವೆಚ್ಚ | 4,661.02 | |
| | ಬಾಡಿಗೆ ತೆರಿಗೆ ವಿಮೆ ವಿದ್ಯುಚ್ಛಕ್ತಿ ವೆಚ್ಚ | | | 36,200.00 | CERSAI ವೆಚ್ಚ | 7,000.00 | |
| 1,01,422.00 | ಕಟ್ಟಡ ತೆರಿಗೆ | 1,06,634.00 | | 1,32,203.24 | ಸಾಲ ವಸೂಲಾತಿ ವೆಚ್ಚ | 97,033.92 | |
| 17,86,590.60 | ಡಿ.ಐ.ಸಿ.ಜಿ.ಸಿ ವಿಮೆ ಕಂತು | 17,60,888.40 | | 1,66,105.98 | ಇತರೆ ಆದಾಯ | 29,545.75 | |
| 4,95,622.82 | ವಿಮೆ ಮತ್ತು ತೆರಿಗೆ | 5,65,843.90 | | 2,51,000.00 | ಭದ್ರತಾ ಕಪಾಟುಗಳ ಬಾಡಿಗೆ | 2,64,000.00 | |
| 5,90,054.00 | ವಿದ್ಯುಚ್ಛಕ್ತಿ ವೆಚ್ಚ | 6,40,552.00 | | 7,88,882.81 | ಫಾರಂಗಳ ಮಾರಾಟ ಮತ್ತು ಇತರೆ ಆದಾಯ | 6,89,444.58 | |
| 7,500.00 | ಬ್ಯಾಂಕಿನ ವೃತ್ತಿ ತೆರಿಗೆ | 7,500.00 | | 780.16 | ಷೇರು ಪ್ರವೇಶ ಶುಲ್ಕ | 3,400.48 | |
| 14,43,312.00 | ಶಾಖೆಗಳ ಬಾಡಿಗೆ | 15,20,393.00 | | 62,941.12 | ಷೇರು ಶುಲ್ಕ | 1,40,996.34 | |
| 60,383.74 | ನೀರಿನ ವೆಚ್ಚ | 55,177.32 | | **16,18,515.69** | | | **29,43,357.09** |
| **44,84,885.16** | | | **46,56,988.62** | | | | |
| | ಅಂಚೆ ಮತ್ತು ದೂರವಾಣಿ ವೆಚ್ಚ | | | | | | |
| 11,822.00 | ಅಂಚೆ ವೆಚ್ಚ | 13,400.00 | | | | | |
| 4,27,155.99 | ದೂರವಾಣಿ ವೆಚ್ಚ | 2,68,635.62 | | | | | |
| **4,38,977.99** | | | **2,82,035.62** | | | | |
| | ಲೆಕ್ಕಪರಿಶೋಧಕರ ವೆಚ್ಚ | | | | | | |
| 3,81,500.00 | ಲೆಕ್ಕಪರಿಶೋಧನಾ ವೆಚ್ಚ | 4,05,000.00 | | | | | |
| 2,86,000.00 | ಶಾಸನಬದ್ಧ ಲೆಕ್ಕಪರಿಶೋಧನೆ | 2,50,000.00 | | | | | |
| 75,000.00 | ಟ್ಯಾಕ್ಸ್ ಆಡಿಟ್ ಶುಲ್ಕ | 80,000.00 | | | | | |
| **7,42,500.00** | | | **7,35,000.00** | | | | |

| | | | | | | | |
|---|---|---|---|---|---|---|---|
| | ಸವಕಳಿ | | | | | | |
| **21,69,271.92** | ಸವಕಳಿ ಖಾತೆ | | **24,78,314.46** | | | | |
| | ಮುದ್ರಣ ಮತ್ತು ಲೇಖನ ಸಾಮಗ್ರಿ | | | | | | |
| 7,466.95 | ಗಣಕಯಂತ್ರ ಸಾಮಗ್ರಿ | 2,786.92 | | | | | |
| 3,02,605.88 | ಮುದ್ರಣ ಮತ್ತು ಲೇಖನ ಸಾಮಗ್ರಿ | 3,71,092.40 | | | | | |
| **3,10,072.83** | | | **3,73,879.32** | | | | |
| | ಇತರೆ ಖರ್ಚು | | | | | | |
| 1,51,238.10 | ಜಾಹಿರಾತು ವೆಚ್ಚ | 1,93,142.86 | | | | | |
| 10,36,203.78 | ಗಣಕಯಂತ್ರ ಮತ್ತಿತರ ವಾರ್ಷಿಕ ನಿರ್ವಹಣೆ | 9,94,676.50 | | | | | |
| 4,27,438.15 | ಎ.ಟಿ.ಎಂ.ವೆಚ್ಚ | 1,86,029.56 | | | | | |
| 2,09,951.78 | ಬ್ಯಾಂಕಿನ ವಾಹನ ದುರಸ್ತಿ ಮತ್ತು ನಿರ್ವಹಣೆ | 1,51,822.24 | | | | | |
| 4,98,003.22 | ಕಟ್ಟಡ ದುರಸ್ತಿ ಮತ್ತು ನಿರ್ವಹಣೆ | 3,11,751.00 | | | | | |
| 8,49,724.63 | ಕೇಂದ್ರ ಸರಕು ಮತ್ತು ಸೇವಾ ತೆರಿಗೆ 50% Write Off | 3,78,725.82 | | | | | |
| 3,114.34 | ಬೇರೆ ಬ್ಯಾಂಕುಗಳು ವಿಧಿಸಿದ ಖರ್ಚು | 3,827.50 | | | | | |
| 1,43,000.00 | ದಾನಗಳು | 47,000.00 | | | | | |
| 1,91,678.00 | ಕ್ಲಿಯರಿಂಗ್ ಹೌಸ್ ಖರ್ಚು | 1,89,836.50 | | | | | |
| 56,47,342.00 | ಪಿಗ್ಮಿ ಠೇವಣಿ ಮೇಲಿನ ದಲ್ಲಾಳಿ | 62,01,661.00 | | | | | |
| 42,050.00 | ಗಣಕಯಂತ್ರ ನಿರ್ವಹಣೆ | 80,583.22 | | | | | |
| 1,86,779.00 | ಓಡಾಟ ವೆಚ್ಚ | 2,45,288.00 | | | | | |
| 11,67,314.66 | ಚುನಾವಣಾ ವೆಚ್ಚ | 0.00 | | | | | |
| 4,14,923.00 | ಸರ್ವಸದಸ್ಯರ ಸಭೆ ವೆಚ್ಚ | 11,01,217.66 | | | | | |
| 78,035.00 | ಗೌರವಧನ ಹಾಗೂ ತರಬೇತಿ ವೆಚ್ಚ | 44,110.00 | | | | | |
| 15,26,559.94 | ಅಂತರರಾಜ್ಯ ಸರಕು ಮತ್ತು ಸೇವಾ ತೆರಿಗೆ 50% Write Off | 3,40,419.80 | | | | | |
| 45,000.00 | ಕಾನೂನು ವೆಚ್ಚ | 2,92,000.00 | | | | | |
| 3,50,000.00 | ಸದಸ್ಯರ ಮರಣ ಪರಿಹಾರ | 2,30,000.00 | | | | | |
| 5,40,500.00 | ಸದಸ್ಯರ ಕ್ಷೇಮ ವೆಚ್ಚ | 14,65,500.00 | | | | | |
| 1,19,736.67 | ಇತರೆ ವೆಚ್ಚ | 80,398.49 | | | | | |
| 33.45 | NPCI ವೆಚ್ಚ | 127.81 | | | | | |
| 7,18,886.18 | ಕಛೇರಿ ನಿರ್ವಹಣೆ | 6,53,536.18 | | | | | |
| 1,09,898.00 | ಪೂಜಾ ವೆಚ್ಚ | 1,62,978.00 | | | | | |
| 6,86,133.00 | ವೃತ್ತಿ ಶುಲ್ಕ | 8,37,463.00 | | | | | |
| 3,91,208.72 | ಉಪಾಹಾರ ವೆಚ್ಚ | 1,71,919.50 | | | | | |
| 10,000.00 | ವಿಚಾರಣಾಧಿಕಾರಿಯವರಿಗೆ ಗೌರವಧನ | 0.00 | | | | | |
| 88,459.60 | ಸಿಬ್ಬಂದಿ ಉಪಹಾರ ವೆಚ್ಚ | 2,68,978.00 | | | | | |
| 11,12,095.48 | ಭದ್ರತಾ ಸಿಬ್ಬಂದಿ ವೆಚ್ಚ | 11,23,337.88 | | | | | |
| 8,49,724.63 | ರಾಜ್ಯ ಸರಕು ಮತ್ತು ಸೇವಾ ತೆರಿಗೆ 50% Write Off | 3,78,725.82 | | | | | |
| 91,999.00 | ಚಂದಾ ಹಾಗೂ ನವೀಕರಣ | 89,255.90 | | | | | |
| 0.00 | ವೆಬ್‌ಸೈಟ್ ವೆಚ್ಚ | 44,777.46 | | | | | |
| 3,425.00 | ಜೆರಾಕ್ಸ್ ವೆಚ್ಚ | 6,665.00 | | | | | |
| **1,76,90,455.33** | | | **1,62,75,754.70** | | | | |
| **4,13,84,497.94** | ಕ್ರೋಢೀಕೃತ ಲಾಭ C/d | | **3,22,59,816.69** | | | | |
| **18,70,39,161.80** | ಒಟ್ಟು | | **17,59,74,090.05** | **18,70,39,161.80** | ಒಟ್ಟು | | **17,59,74,090.05** |

## Profit & Loss Appropriation Account

| | | | | | | | |
|---|---|---|---|---|---|---|---|
| 92,46,800.00 | ಆದಾಯ ಕರ | | 62,06,946.00 | 4,13,84,497.94 | ಕ್ರೂಢೀಕೃತ ಲಾಭ B/d | | 3,22,59,816.69 |
| | ಕಾಯ್ದಿರಿಸಿರುವುದು | | | | ನಿಧಿಗಳ ಬಳಕೆ | | |
| 35,17,682.56 | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ ಶೇ.8.5 | 25,90,000.00 | | 29,02,243.00 | EL Provision Written Back | 0.00 | |
| 11,69,408.00 | ಸಿಬ್ಬಂದಿ ಗಳಿಕೆ ರಜೆ ನಗದೀಕರಣ | 1,36,218.00 | | 18,37,640.00 | ಲಾಭದ ವಿಲೇವಾರಿ ಎಕ್ಸ್‌ಗ್ರೇಷಿಯಾ | 17,83,407.00 | |
| 46,87,090.56 | | | 27,26,218.00 | 15,20,595.04 | ನಿಧಿಗಳ ಬಳಕೆ ಲಾಭದ ವಿಲೇವಾರಿಯಿಂದ | 21,06,443.00 | |
| | | | | 62,60,478.04 | | | 38,89,850.00 |
| 3,37,11,085.42 | ನಿವ್ವಳ ಲಾಭ | | 2,72,16,502.69 | | | | |
| 4,76,44,975.98 | ಒಟ್ಟು | | 3,61,49,666.69 | 4,76,44,975.98 | ಒಟ್ಟು | | 3,61,49,666.69 |

# ದಿನಾಂಕ 31.03.2024ರಂದು ಇದ್ದಂತೆ ಬ್ಯಾಂಕಿನ ಆಸ್ತಿ-ಜವಾಬ್ದಾರಿ ತಃಖ್ತೆ

| 31.03.2023 ರಲ್ಲಿದ್ದಂತೆ | ಬಂಡವಾಳ ಹಾಗೂ ಜವಾಬ್ದಾರಿಗಳು | ಮೊಬಲಗು ರೂ. ಪೈ | ಮೊಬಲಗು ರೂ. ಪೈ 31.03.2024 | 31.03.2023 ರಲ್ಲಿದ್ದಂತೆ | ಆಸ್ತಿ ಹಾಗೂ ಸ್ವತ್ತುಗಳು | ಮೊಬಲಗು ರೂ. ಪೈ | ಮೊಬಲಗು ರೂ. ಪೈ 31.03.2024 |
|---|---|---|---|---|---|---|---|
| | ಷೇರು ಬಂಡವಾಳ | | | 2,14,22,710.00 | ನಗದು | | 1,51,33,486.00 |
| 7,79,01,460.00 | ಸದಸ್ಯರು | 8,01,17,635.00 | | | | | |
| 49,09,400.00 | ಅಸೋಸಿಯೇಟ್ ಸದಸ್ಯರು | 46,96,900.00 | | | ಇತರೆ ಬ್ಯಾಂಕಿನಲ್ಲಿರುವ ಶಿಲ್ಕುಗಳು | | |
| 3,800.00 | ನಾಮಮಾತ್ರ ಸದಸ್ಯರು | 3,800.00 | | 17,67,017.82 | ಅಪೆಕ್ಸ್ ಬ್ಯಾಂಕ್ ಚಾಲ್ತಿ ಖಾತೆ | 21,42,098.82 | |
| 8,28,14,660.00 | | | 8,48,18,335.00 | 11,21,541.00 | ಬಿಡಿಸಿಸಿ ಬ್ಯಾಂಕ್ ಚಾಲ್ತಿ ಖಾತೆ | 41,97,413.00 | |
| | ಕಾಯ್ದಿರಿಸಿದ ಮತ್ತು ಇತರೆ ನಿಧಿಗಳು | | | 21,42,051.19 | ಹೆಚ್.ಡಿ.ಎಫ್.ಸಿ ಬ್ಯಾಂಕ್ ಚಾಲ್ತಿ ಖಾತೆ | 2,06,64,197.19 | |
| 24,05,79,311.00 | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | 24,30,38,886.00 | | 93,92,702.06 | ಹೆಚ್.ಡಿ.ಎಫ್.ಸಿ ಎ.ಟಿ.ಎಂ ಖಾತೆ | 73,71,051.63 | |
| 3,63,29,443.00 | ಕಟ್ಟಡ ನಿಧಿ | 3,87,81,914.00 | | 5,66,24,920.44 | ಐಡಿಬಿಐ ಬ್ಯಾಂಕ್ ಚಾಲ್ತಿ ಖಾತೆ | 5,15,72,841.17 | |
| 1,00,01,945.00 | ಷೇರು ನಷ್ಟ ಸಮತೋಲನ ನಿಧಿ | 1,00,01,945.00 | | 2,37,22,570.44 | ಭಾರತೀಯ ರಿಸರ್ವ್ ಬ್ಯಾಂಕ್ ಚಾಲ್ತಿ ಖಾತೆ | 2,29,94,952.85 | |
| 1,32,08,500.00 | ಗುಂತಾಯಗಳ ಸವಕಳಿ ನಿಧಿ | 1,62,18,471.00 | | 6,05,91,393.16 | ಭಾರತೀಯ ಸ್ಟೇಟ್ ಬ್ಯಾಂಕ್ ರಾಜಾಜಿನಗರ ಶಾಖೆ | 76,83,283.16 | |
| 3,76,22,257.00 | ಗುಂತಾಯಗಳ ವಿರಳಿತ ನಿಧಿ | 3,76,22,257.00 | | 15,53,62,196.11 | | | 11,66,25,837.82 |
| 29,50,000.00 | ಗೃಹ ಸಾಲಗಳ ವಿಶೇಷ ನಿಧಿ | 29,50,000.00 | | | | | |
| 34,00,000.00 | ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | 34,00,000.00 | | | | | |
| 25,20,86,843.46 | ಆಪದ್ಧನ ನಿಧಿ | 26,40,52,456.88 | | | ಹೂಡಿಕೆ ಮತ್ತು ತೇವಣಿಗಳು | | |
| 59,61,78,299.46 | | | 61,60,65,929.88 | 50,00,000.00 | ಕ.ರಾ.ಸ.ಅಪೆಕ್ಸ್ ಬ್ಯಾಂಕ್ ನಿಶ್ಚಿತ ತೇವಣಿ | 50,00,000.00 | |
| | | | | 1,56,73,116.49 | ಕ.ರಾ.ಸ.ಅಪೆಕ್ಸ್ ಬ್ಯಾಂಕ್ ಆಪದ್ಧನ ನಿಧಿ | 1,56,73,116.49 | |
| | ಇತರೆ ನಿಧಿಗಳು | | | 2,00,00,000.00 | ಕ.ರಾ.ಸ.ಅಪೆಕ್ಸ್ ಬ್ಯಾಂಕ್ (ಶಾಖೆಗಳ ಹೂಡಿಕೆ) | 2,00,00,000.00 | |
| 25,23,763.18 | ಪ್ರಚಾರ ನಿಧಿ | 23,30,620.32 | | 3,02,400.00 | ಬಿ.ಜಿ. ಮತ್ತು ಗ್ರಾ.ಜಿ.ಕೇಂದ್ರ ಸಹಕಾರ ಬ್ಯಾಂಕ್ ಷೇರು | 2,87,15,007.00 | |
| 1,05,36,307.64 | ಸದಸ್ಯರ ಕ್ಷೇಮ ನಿಧಿ | 1,00,51,796.64 | | 49,28,32,500.00 | ಸರ್ಕಾರಿ ಭದ್ರತಾ ತೇವಣಿ (ಹೆಲ್ಡ್ ಫಾರ್ ಸೇಲ್) | 49,28,32,500.00 | |
| 24,81,465.00 | ದಾನಗಳ ನಿಧಿ | 24,34,465.00 | | 20,80,00,000.00 | ಸರ್ಕಾರಿ ಭದ್ರತಾ ತೇವಣಿ (ಹೆಲ್ಡ್ ಟು ಮೆಚ್ಯುರಿಟಿ) | 20,80,00,000.00 | |
| 90,80,258.00 | ಮರಣೋತ್ತರ ಪರಿಹಾರ ನಿಧಿ | 98,31,247.00 | | 1,06,85,982.00 | ಹೆಚ್.ಡಿ.ಎಫ್.ಸಿ ಬ್ಯಾಂಕ್ ನಿಶ್ಚಿತ ತೇವಣಿ | 1,32,07,226.00 | |
| 2,81,11,994.00 | ಮಹೋತ್ಸವ ನಿಧಿ | 2,97,80,446.00 | | 13,00,00,000.00 | ಕರೆ ತೇವಣಿ ಹೂಡಿಕೆಗಳು | 35,00,00,000.00 | |
| 55,81,000.00 | ಮರ್ಕೆಂಟೈಲ್ ಬ್ಯಾಂಕ್ ಹೂಡಿಕೆ-ನಿಧಿ ಕಾಯ್ದಿರಿಸಿದ್ದು | 55,81,000.00 | | 7,03,84,500.00 | SEDBI MSE Refinance Fund 2022-23 | 0.00 | |
| 1,09,92,763.06 | ಸಿಬ್ಬಂದಿ ಕ್ಷೇಮ ನಿಧಿ | 1,20,48,198.92 | | 55,81,000.00 | ಬೆಂಗಳೂರು ಮರ್ಕೆಂಟೈಲ್ ಬ್ಯಾಂಕ್ | 55,81,000.00 | |
| 6,93,07,550.88 | | | 7,20,57,773.88 | 95,84,59,498.49 | | | 1,13,90,08,849.49 |

| | | | | | | | |
|---|---|---|---|---|---|---|---|
| | ತೇವಣಿ ಹಾಗೂ ಇತರೆ ಖಾತೆಗಳು | | | | ಸಾಲಗಳು ಮತ್ತು ಮುಂಗಡಗಳು | | |
| 3,57,95,532.00 | ಅವಧಿ ಮೀರಿದ ನಗದು ಸರ್ಟಿಫಿಕೇಟ್ | 2,50,75,136.00 | | | ಅಲ್ಪಾವಧಿ ಭದ್ರತಾ ಸಾಲ | | |
| 2,520.00 | ಅವಧಿ ಮೀರಿದ ನಗದು ಸರ್ಟಿಫಿಕೇಟ್ (ಖಾತರಿ ತೇವಣಿ) | 2,520.00 | | 492.00 | ಬಡವರ ಬಂಧು | 492.00 | |
| 47,89,16,548.00 | ನಗದು ಸರ್ಟಿಫಿಕೇಟ್ | 45,16,00,672.00 | | 90,81,062.87 | ಓಡಿ ಖಾತೆ-I (ಜಮಾ) | 1,17,99,632.30 | |
| 492.00 | ಬಡವರ ಬಂಧು (ಜಮಾ) | 492.00 | | 7,24,645.62 | ಓಡಿ ಖಾತೆ-III (ಜಮಾ) | 9,68,357.67 | |
| 90,81,062.87 | ಓಡಿ ಖಾತೆ-I (ಜಮಾ) | 1,17,99,632.30 | | 2,11,083.00 | ವಿದ್ಯಾಭ್ಯಾಸ ಸಾಲ | 0.00 | |
| 7,24,645.62 | ಓಡಿ ಖಾತೆ-III (ಜಮಾ) | 9,68,357.67 | | 2,24,000.00 | ಸಿಬ್ಬಂದಿ ಹಬ್ಬದ ಮುಂಗಡ | 1,95,000.00 | |
| 4,19,44,259.83 | ಚಾಲ್ತಿ ಖಾತೆ-I | 3,70,94,503.92 | | 1,25,668.00 | ಬಡವರ ಬಂಧು ಓಡಿ ಖಾತೆ | 1,25,668.00 | |
| 4,64,85,847.26 | ಚಾಲ್ತಿ ಖಾತೆ-III | 5,38,52,526.15 | | 12,12,02,017.48 | ಓಡಿ ಖಾತೆ-I | 8,01,03,776.61 | |
| 44,09,43,487.00 | ನಿಶ್ಚಿತ ತೇವಣಿ | 47,20,20,362.00 | | 4,63,68,125.80 | ಓಡಿ ಖಾತೆ-III | 4,76,10,964.56 | |
| 1,44,47,013.00 | ಅವಧಿ ಮೀರಿದ ನಿಶ್ಚಿತ ತೇವಣಿ | 94,04,184.00 | | 60,38,735.00 | ನಗದು ಸರ್ಟಿಫಿಕೇಟ್ ಆಧಾರ ಸಾಲ | 42,41,127.00 | |
| 11,80,58,187.00 | ಪಿಗ್ಮಿ ತೇವಣಿ | 12,84,61,715.00 | | 41,80,734.00 | ನಿಶ್ಚಿತ ತೇವಣಿ ಆಧಾರ ಸಾಲ | 48,55,644.00 | |
| 1,72,813.31 | ಅವಧಿ ಮೀರಿದ ನಿಶ್ಚಿತ ಖಾತರಿ ತೇವಣಿ (APMC) | 1,72,813.31 | | 15,70,059.00 | ಪಿಗ್ಮಿ ತೇವಣಿ ಆಧಾರ ಸಾಲ | 10,39,005.00 | |
| 98,74,513.56 | ಸಂಚಿತ ತೇವಣಿ | 94,68,707.92 | | 97,000.00 | ಸಂಚಿತ ತೇವಣಿ ಆಧಾರ ಸಾಲ | 0.00 | |
| 24,27,87,228.06 | ಉಳಿತಾಯ ಖಾತೆ | 24,19,48,562.41 | | **18,98,23,622.77** | | **15,09,39,667.14** | |
| **1,43,92,34,149.51** | | | **1,44,18,70,184.68** | | ಮಧ್ಯಮಾವಧಿ ಭದ್ರತಾ ಸಾಲ | | |
| | | | | 53,69,568.00 | ಚಿನ್ನಾಭರಣ ಸಾಲ | 50,64,853.00 | |
| | b) | ಎಲ್ಲಾ ತರಹದ ಸಾಲ, ಮುಂಗಡ, ಕ್ಯಾಷ್ ಕ್ರೆಡಿಟ್, ಓವರ್ ಡ್ರಾಪ್ಟ್ ಇತಾದಿಗಳ ಮೇಲೆ (ವ್ಯಾಖ್ಯಾನ) ವಿವರಣೆ | ಆದ್ಯತಾ ವಲಯಕ್ಕೆ ಸಾಲ ನೀಡುವಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದನ್ವಯ ಗುರಿ ಸಾಧಿಸುವಲ್ಲಿ ಹೆಚ್ಚಿನ ಆದ್ಯತೆ ನೀಡತಕ್ಕದ್ದು. ನೀಡಿರುವ ಸಾಲಗಳನ್ನು ಆದ್ಯತಾ ವಲಯ ಅಥವಾ ಇತರೆ ಸಾಲಗಳೆಂದು ಗುರುತಿಸುವ ಬಗ್ಗೆ ಗಣಕಯಂತ್ರದ ಪೂರ್ಣ ಉಪಯೋಗ ಪಡೆಯತಕ್ಕದ್ದು. |
| 32 | ಬ್ಯಾಂಕೇತರ ಆಸ್ತಿಗಳು: **(Non Banking Assets)** | | ಯಾವುದೇ ಬ್ಯಾಂಕೇತರ ಆಸ್ತಿಗಳು ಇರುವುದಿಲ್ಲ. |

| ಜಮೀನು ಆಸ್ತಿಯ ವಿವರ | ವಿ.ಪಿ.ಸಿ./ಸಿ.ಟಿ.ಎಸ. ನಂ. | ಖರೀದಿಯ ಮೌಲ್ಯ |
|---|---|---|
| ಇರುವುದಿಲ್ಲ. | | |

| | | | |
|---|---|---|---|
| 33 | ಆಸ್ತಿ ಜವಾಬ್ದಾರಿ ನಿರ್ವಹಣೆ | | |
| | i) | ಈ ಸಂಬಂಧ ಜಾರಿಯಲ್ಲಿರುವ ಕಾರ್ಯನೀತಿ ಮತ್ತು ಆರ್.ಬಿ.ಐ ಮಾರ್ಗಸೂಚಿಗಳನ್ನು ಪಾಲಿಸುತ್ತಿರುವ ಬಗ್ಗೆ | ಆಸ್ತಿ ಜವಾಬ್ದಾರಿ ನಿರ್ವಹಣೆಯಲ್ಲಿ ಕಾರ್ಯನೀತಿ ಹಾಗೂ ಆರ್.ಬಿ.ಐ ನ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತಿದೆ. |
| | ii) | ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿಯ ಕಾರ್ಯಚಟು ವಟಿಕೆ ಕುರಿತು ನಿಯತಕಾಲಿಕವಾಗಿ ದ್ರವ್ಯಾಸ್ಥಿ ನಿರ್ವಹಣೆ ಯಾಗುತ್ತಿರುವ ಬಗ್ಗೆ. | ಪ್ರತಿ ಮಾಹೆಯ ಆಸ್ತಿ ಜವಾಬ್ದಾರಿ ನಿರ್ವಹಣೆಯ ಮಾಹಿತಿಗಳನ್ನು ತಯಾರಿಸುತ್ತಿದ್ದು, ಸಮಿತಿಯಲ್ಲಿ ಮಂಡಿಸ ಲಾಗುತ್ತಿದೆ. |
| 34 | ಡೆಡ್ ಸ್ಟಾಕ್ಃ ವಿವರಣೆ | | ಪ್ರಸಕ್ತ ಸಾಲಿನಲ್ಲಿ ನಮ್ಮ ಗಮನಕ್ಕೆ ಬಂದಂತೆ ಯಾವುದೇ ಡೆಡ್ ಸ್ಟಾಕ್ ಕಂಡುಬಂದಿರುವುದಿಲ್ಲ. |
| 35) | ಕಟ್ಟಡ- ವಿವರಣೆ | | |
| | ಎ | ಸ್ಥಿರಾಸ್ತಿ | |

| | | |
|---|---|---|
| <u>ಬ್ಯಾಂಕ್ ಹೊಂದಿರುವ ಸ್ಥಿರಾಸ್ತಿಯ ವಿವರಗಳು</u> | | |
| ನಂ.2, ಪಂಪಮಹಾಕವಿ ರಸ್ತೆ<br>ಚಾಮರಾಜಪೇಟೆ<br>ಬೆಂಗಳೂರು-18 | ಪೂರ್ವಕ್ಕೆ | ಹರ್ಡಿಂಗ್ ರಸ್ತೆ (ಈಗ ಪಿ.ಎಂ.ರಸ್ತೆ) |
| | ಪಶ್ಚಿಮಕ್ಕೆ | ಗಲ್ಲಿ |
| | ಉತ್ತರಕ್ಕೆ | ಅಪೆಕ್ಸ್ ಬ್ಯಾಂಕ್ |
| | ದಕ್ಷಿಣಕ್ಕೆ | ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್ |
| ನಿವೇಶನ | ಒಟ್ಟು | 18225 ಚ.ಅಡಿ |
| ಪ್ರಧಾನ ಕಛೇರಿ ಕಟ್ಟಡ ಹಾಗೂ ಜ್ಯೂಬಿಲಿ ಕಟ್ಟಡ | ಒಟ್ಟು | 23600 ಚ.ಅಡಿ |

| | | |
|---|---|---|
| 1 | ಲೆಕ್ಕಪರಿಶೋಧನಾ ಕಾಲಕ್ಕೆ ಇವುಗಳ ದಾಖಲಾತಿ ಗಳು ಹಾಗೂ ಕಡತ ಪರಿಶೀಲಿಸಿದ ಬಗ್ಗೆ ವಿಮರ್ಶೆ | ಲೆಕ್ಕಪರಿಶೋಧನಾ ಅವಧಿಯಲ್ಲಿ ಮೇಲ್ಕಂಡ ಸ್ಥಿರಾಸ್ತಿಯ ದಾಖಲೆಗಳ ಸಹಿತ ಕಡತ ಪರಿಶೀಲಿಸಲಾಗಿದೆ. |
| 2 | ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಸ್ಥಿರಾಸ್ತಿಯ ರಿಜಿಸ್ಟರ್ ನಿರ್ವಹಿಸಿರುವುದಿಲ್ಲ. ನಿರ್ವಹಿಸಲು ಸೂಚಿಸಿದೆ. |
| 3 | ಎಲ್ಲಾ ಸ್ಥಿರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿವೆಯೇ? | ಮೇಲ್ಕಂಡ ಸ್ಥಿರಾಸ್ತಿಯು ಬ್ಯಾಂಕಿನ ಹೆಸರಿನಲ್ಲಿ ಇರುತ್ತವೆ. |
| 4 | ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ಸ್ಥಿರಾಸ್ತಿಯ ವಿಮೆ ಮಾಡಿಸಿರುತ್ತಾರೆ. |

| | | | |
|---|---|---|---|
| | 5 | ಸ್ಥಿರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ. | ಪ್ರಸಕ್ತ ವರ್ಷದಲ್ಲಿ ಬ್ಯಾಂಕು ಹೊಂದಿರುವ ಕಟ್ಟಡದ ಮೌಲ್ಯದ ಮೇಲೆ ಶೇ.5ರಂತೆ ರೂ.5,13,462/- ಹಾಗೂ ಶಾಖಾ ಕಟ್ಟಡ (ಭೋಗ್ಯ) ಮೌಲ್ಯದ ಮೇಲೆ ರೂ.65,714/- ರಂತೆ ಸವಕಳಿ ವಜಾ ಮಾಡಿರುತ್ತಾರೆ. |
| | 6 | ಗೋಡಾನುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ | ಬ್ಯಾಂಕಿನ ಗೋಡಾನುಗಳಲ್ಲಿ ಹಳೆ ಕಡತಗಳು, ಅನುಪಯುಕ್ತ ವಸ್ತುಗಳ ದಾಸ್ತಾನು ಮಾಡಲಾಗಿದೆ. |
| | 7 | ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ, ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿಯಾಗು ತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ? | ಬಾಡಿಗೆಗೆ ನೀಡಿದ್ದ ಬ್ಯಾಂಕಿನ ಕಟ್ಟಡವನ್ನು ಸಹಕಾರ ಇಲಾಖೆಯವರು ನವೆಂಬರ್ 2017ರಲ್ಲಿ ತೆರವು ಗೊಳಿಸಿದ್ದು, ಯವುದೇ ಬಾಡಿಗೆ ಬಾಕಿಯಿರುವುದಿಲ್ಲ.<br>ಆಡಳಿತ ಮಂಡಳಿ ತೀರ್ಮಾನದಂತೆ ಬ್ಯಾಂಕಿನ ಹಿಂಭಾಗದ ಅನೆಕ್ಸ್ ಕಟ್ಟಡವನ್ನು ಬೆಂಗಳೂರು ಜಿಲ್ಲಾ ಹಾಗೂ ಗ್ರಾಮಾಂತರ ಕೇಂದ್ರ ಸಹಕಾರ ಬ್ಯಾಂಕಿಗೆ ದಿನಾಂಕ 20.03.2020 ರಿಂದ 2 ವರ್ಷಗಳ ಅವಧಿಗೆ ಬಾಡಿಗೆ ರಹಿತವಾಗಿ ನೀಡಲಾಗಿತ್ತು.<br>ಸದರಿ ಬ್ಯಾಂಕಿನವರು ತಮ್ಮ ಸ್ವಂತ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಇದರ ನಿರ್ಮಾಣ ಕಾರ್ಯಗಳು ಪೂರ್ಣಗೊಳ್ಳ ದಿರುವುದರಿಂದ ಮತ್ತೆ ಮುಂದುವರಿಸುವಂತೆ ಕೋರಿದ್ದ ಮೇರೆಗೆ ಮುಂದುವರಿಸಲಾಗಿದೆ. ಈ ಬಗ್ಗೆ ಕರಾರು ಮಾಡಿಕೊಂಡಿರು ವುದಿಲ್ಲ ಹಾಗೂ ಇವರು ತಹಲ್‌ವರೆವಿಗೂ ಕಟ್ಟಡವನ್ನು ತೆರವುಗೊಳಿಸಿರುವುದಿಲ್ಲ.<br>ಸದರಿ ಕಟ್ಟಡವನ್ನು ಬ್ಯಾಂಕಿನ ಸುಪರ್ದಿಗೆ ಯಥಾಸ್ಥಿತಿಯಲ್ಲಿ ಬಿಡಿಸಿಸಿ ಬ್ಯಾಂಕಿನವರಿಂದ ಪಡೆಯತಕ್ಕದ್ದು. |
| | 8 | ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಅದು ನಿಯಮಾನುಸಾರ ಮಾಡಲಾಗಿದೆಯೇ? ಉಲ್ಲಂಘನೆಗಳಿದ್ದಲ್ಲಿ ವಿವರಿಸುವುದು. | ವರದಿ ಸಾಲಿನಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ. |
| | 9 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಶೆ. | ಯಾವುದೂ ಇರುವುದಿಲ್ಲ. |
| | 10 | ಸ್ಥಿರಾಸ್ತಿಯ ತೆರಿಗೆಯನ್ನು ತಹಲ್‌ವರೆಗೂ ಪಾವತಿಸಲಾಗಿದೆಯೇ? | 2024-25ನೇ ಸಾಲಿನ ಕಂದಾಯ ರೂ.96,210/-ಗಳನ್ನು ದಿನಾಂಕ 24.04.2024 ರಂದು ಪಾವತಿಸಿರುತ್ತಾರೆ. |

| | | | |
|---|---|---|---|
| 36 | ಚೆಕ್ಕು, ಬಿಲ್ಲು, ಡಿಸ್ಕೌಂಟ್ ವ್ಯವಹಾರ ಕೈಗೊಂಡಿರುವರೊ ವಿವರಿಸಿ. | ಬ್ಯಾಂಕಿನಲ್ಲಿ ಚೆಕ್ ಅಥವಾ ಬಿಲ್ ಡಿಸ್ಕೌಂಟ್ ವ್ಯವಹಾರ ಮಾಡುತ್ತಿಲ್ಲ. | |
| 37 | ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು | 2023-24ನೇ ಸಾಲಿನಲ್ಲಿ ಸಾಲಗಳ ಮೇಲೆ ವಸೂಲಾಗಿ ರುವ ಬಡ್ಡಿ ಮತ್ತು ಠೇವಣಿಗಳ ಮೇಲೆ ಪಾವತಿಸಿರುವ ಬಡ್ಡಿಯ ವಿವರ ಈ ಕೆಳಕಂಡಂತಿರುತ್ತದೆ.<br>(ರೂ.ಲಕ್ಷಗಳಲ್ಲಿ) | |
| | | **ಗಳಿಸಿದ ಬಡ್ಡಿ, ಇತ್ಯಾದಿ ವಿವರ** | |
| | | ಸಾಲಗಳ ಮೇಲೆ ಬಂದ ಬಡ್ಡಿ | 1088.32 |
| | | ಗುಂತಾಯಗಳ ಮೇಲೆ ಬಂದ ಬಡ್ಡಿ | 167.29 |
| | | ಸರ್ಕಾರಿ ಭದ್ರತಾ ಠೇವಣಿಗಳ ಮೇಲೆ ಬಂದ ಬಡ್ಡಿ | 461.47 |
| | | ದಲ್ಲಾಳಿ, ವಿನಿಮಯ ಮತ್ತು ರುಸುಂ | 10.72 |
| | | ಸರ್ಕಾರಿ ಭದ್ರತೆಗಳ ಮಾರಾಟದಿಂದ ಬಂದ ಲಾಭ | 2.50 |
| | | ಇತರೆ ಆದಾಯ | 7.96 |
| | | **ನೀಡಿದ ಬಡ್ಡಿ, ಇತ್ಯಾದಿ ವಿವರ** | |
| | | ಠೇವಣಿಗಳ ಮೇಲೆ ಪಾವತಿಸಿದ ಬಡ್ಡಿ | 819.30 |
| | | ಪಿಗ್ಮಿ ಏಜೆಂಟರುಗಳಿಗೆ ನೀಡಿದ ಕಮೀಷನ್ | 62.02 |

| | | | | |
|---|---|---|---|---|
| | | | | ಆಡಳಿತ ಮಂಡಳಿ ಸಭೆಯಲ್ಲಿ ಸಾಲ ಮತ್ತು ಠೇವಣಿಗಳ ಮೇಲಿನ ಬಡ್ಡಿದರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗಿದೆ.<br>ಸದರಿ ದರಗಳನ್ವಯ ಸಾಲಗಳ ಮೇಲೆ ಮತ್ತು ಠೇವಣಿಗಳ ಮೇಲೆ ಬಡ್ಡಿ ಲೆಕ್ಕಾಚಾರ ಮಾಡಲು ಗಣಕಯಂತ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.<br>ಶಾಖೆಗಳಲ್ಲಿ ಆಯ್ದ ಕೆಲವೊಂದು ಸಾಲದ ಖಾತೆ ಮತ್ತು ಠೇವಣಿ ಖಾತೆಗಳಲ್ಲಿ ಬಡ್ಡಿ ಲೆಕ್ಕಾಚಾರವನ್ನು ಪರಿಶೀಲಿಸ ಲಾಗಿದ್ದು, ಸರಿಯಾಗಿರುವುದನ್ನು ಗಮನಿಸಲಾಗಿದೆ. |
| 38 | ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ? | | | ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿ ಹಿಂದಿನ ಸಾಲು ಗಳಿಂದ ಮುಂದುವರಿದ ಲೆಕ್ಕಗಳು ಇನ್ನೂ ಸಮನ್ವಯ ವಾಗದೇ ಬಾಕಿಯುಳಿದಿರುತ್ತದೆ. ವರದಿ ಸಾಲಿನ ಶಾಖೆಗಳ ಲೆಕ್ಕಗಳನ್ನು ಸಮನ್ವಯ ಮಾಡಿರುತ್ತಾರೆ. |
| **39)** | ಆಂತರಿಕ ಹತೋಟಿ | | | |
| | **a)** | ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ಆದೇಶ/ಕೈಪಿಡಿಗಳ ಬಗ್ಗೆ | | ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸಹಕಾರ ಇಲಾಖೆ ಕಾಲಕಾಲಕ್ಕೆ ನೀಡಿರುವ ಮಾರ್ಗಸೂಚಿಗಳನ್ವಯ ಬ್ಯಾಂಕಿನ ಲೆಕ್ಕಪತ್ರಗಳನ್ನು ನಿರ್ವಹಿಸಲಾಗಿದೆ. |
| | **b)** | ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ **(Balancing)**/ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ | | |
| | | **i)** | ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ.<br>ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ಹತೋಟಿ ಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆ ಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ. | ಬ್ಯಾಂಕಿನ ಕೇಂದ್ರ ಕಛೇರಿ ಮತ್ತು ಶಾಖೆಗಳಲ್ಲಿ ಹಾಗೂ ಬ್ಯಾಂಕು ಇತರೆ ಬ್ಯಾಂಕುಗಳಲ್ಲಿ ಹೊಂದಿರುವ ಖಾತೆಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ ಸಮನ್ವಯ ಮಾಡುವ ಪದ್ಧತಿ ಇರುತ್ತದೆ. |
| | | **ii)** | ಇವುಗಳ ಅನುಷ್ಠಾನದ ಕ್ರಮ ಬಗ್ಗೆ ಹಿಂಬಾಲಿಕೆ ಕ್ರಮ | ದಿನಾಂಕ 31.03.2024ಕ್ಕೆ ಬ್ಯಾಂಕಿನ ಎಲ್ಲಾ ಲೆಕ್ಕಗಳ ಖಾತೆಗಳ ಸಮನ್ವಯ/ಕುಳುವಾರು ತಯಾರಿಸಿದ್ದು ಪರಿಶೀಲಿಸಲಾಗಿದೆ. ಹಿಂದಿನ ಸಾಲಿನಿಂದ ಮುಂದುವರಿದ ಲೆಕ್ಕಗಳನ್ನು ಪರಿಶೀಲಿಸಿ ಸಮನ್ವಯಗೊಳಿಸತಕ್ಕದ್ದು |
| | **c)** | ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ | | |
| | | **i)** | ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ/ಕ್ರಮದ ಬಗ್ಗೆ ವಿವರಣೆ | ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿ ಹಿಂದಿನ ಸಾಲು ಗಳಿಂದ ಮುಂದುವರಿದ ಲೆಕ್ಕಗಳು ಇನ್ನೂ ಸಮನ್ವಯ ವಾಗದೇ ಬಾಕಿಯುಳಿದಿರುತ್ತದೆ. ಇದರ ಬಗ್ಗೆ ಸೂಕ್ತ ಕ್ರಮವಹಿಸುವುದು. |
| | | **ii)** | ಶಾಖೆಗಳ ಹಾಗೂ ಕೇಂದ್ರ ಲೆಕ್ಕಗಳಲ್ಲಿ ಅಸಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು. | ವರದಿ ಸಾಲಿನ ಶಾಖೆಗಳ ಲೆಕ್ಕಗಳನ್ನು ಸಮನ್ವಯ ಮಾಡಿರುತ್ತಾರೆ. |
| | | **iii)** | ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿ ಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನು ಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ | ದೀರ್ಘಕಾಲದಿಂದ ಬಾಕಿಯಿರುವ ನಮೂದುಗಳ ಬಗ್ಗೆ ಶೀಘ್ರವಾಗಿ ಸಮನ್ವಯ ಮಾಡುವ ಕ್ರಮವಿಡತಕ್ಕದ್ದು. |
| | | **iv)** | ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು | ಸಮನ್ವಯ ಮಾಡಿರುತ್ತಾರೆ. |
| | | **v)** | ಹಳೆಯ ಬಾಕಿಯಲ್ಲಿರುವ ನಮೂದುಗಳ ಬಗ್ಗೆ ಆರ್.ಬಿ.ಐ ಸೂಚನೆಗಳನ್ನು ಪಾಲಿಸುತ್ತಿರುವ ಬಗ್ಗೆ | 10 ವರ್ಷಕ್ಕಿಂತ ಮೇಲ್ಪಟ್ಟ ವ್ಯವಹಾರ ರಹಿತ ಖಾತೆಗಳಲ್ಲಿ ಅವಧಿ ಮೀರಿದ ಠೇವಣಿಗಳು ಸೇರಿದ್ದು, ಆ ಪೈಕಿ ವರದಿ ಸಾಲಿನಲ್ಲಿ ರೂ.20,62,291.00ನ್ನು ಆರ್.ಬಿ.ಐ **DEAF** ಖಾತೆಗೆ ವರ್ಗಾಯಿಸಲಾಗಿದೆ. |

| | | | |
|---|---|---|---|
| d) | ಶಾಖೆಗಳ ಪರಿವೀಕ್ಷಣೆ | | |
| | i) | ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ದತಿ ಬಗ್ಗೆ / ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖೆ (ಪರಿವೀಕ್ಷಣೆ), ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ. | ಬ್ಯಾಂಕಿನ ಅಧಿಕಾರಿಗಳು ಶಾಖೆಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಪರಿವೀಕ್ಷಣೆ ಕೈಗೊಳ್ಳತಕ್ಕದ್ದು. ಬ್ಯಾಂಕಿನ ಸಮವರ್ತಿ ಲೆಕ್ಕಪರಿಶೋಧನೆಯನ್ನು ಸಿ.ಎ ರಾಘವೇಂದ್ರ ಆಚಾರ್ಯ ಸಿ, ಚಾರ್ಟರ್ಡ್ ಅಕೌಂಟೆಂಟ್ಸ್, ಶೇಷಾದ್ರಿಪುರಂ, ಬೆಂಗಳೂರು ರವರಿಗೆ ವಹಿಸಿದ್ದು, ಸದರಿಯವರು ಶಾಖೆಗಳ ಸಮವರ್ತಿ ಲೆಕ್ಕಪರಿಶೋಧನೆ ಮಾಡಿ ಪ್ರತಿ ಮಾಹೆ ವರದಿಗಳನ್ನು ನೀಡುತ್ತಿದ್ದಾರೆ. |
| | ii) | ಮೇಲಿನ ವರದಿಗಳ ಮೇಲೆ ಹಿಂಬಾಲಿಕ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ | ಸಮವರ್ತಿ ಲೆಕ್ಕಪರಿಶೋಧನಾ ವರದಿಗಳಿಗೆ ಶಾಖೆಗಳು ಸಕಾಲದಲ್ಲಿ ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ. |
| e) | ಜಾಗರೂಕತೆ | | |
| | i) | ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ | ವರದಿ ಸಾಲಿನಲ್ಲಿ ಯಾವುದೇ ಗುರುತರ ವಂಚನೆ ಪ್ರಕರಣಗಳು ಪತ್ತೆಯಾಗಿರುವುದಿಲ್ಲ. ಸಮವರ್ತಿ ಲೆಕ್ಕಪರಿಶೋಧನೆಯಲ್ಲಿ ಯಾವುದೇ ಗುರುತರ ವಂಚನೆ ಪ್ರಕರಣಗಳನ್ನು ಉಲ್ಲೇಖಿಸಿರುವುದಿಲ್ಲ. |
| | ii) | ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ | ಅನ್ವಯವಾಗುವುದಿಲ್ಲ. |
| | iii) | ಅಮಾನತ್ ಲೆಕ್ಕಗಳು, ಸಂಡ್ರಿ ಡೆಪಾಸಿಟ್‌ಗಳು, ಇತ್ಯಾದಿಗಳ ಬಗ್ಗೆ | 1. ದಿನಾಂಕ 31.03.2024ಕ್ಕೆ ಬ್ಯಾಂಕಿನ ಇತರೆ ಜಮಾಗಳು ರೂ.72.47 ಲಕ್ಷ ಇರುತ್ತದೆ.<br>2. ದಿನಾಂಕ 31.03.2024ಕ್ಕೆ ಬ್ಯಾಂಕಿನಲ್ಲಿ ಇತರೆ ಆಸ್ತಿಯಡಿ ಅಮಾನತ್ ಖಾತೆ-II ರಲ್ಲಿ ರೂ.3,13,200/-ಇರುತ್ತದೆ. |
| | iv) | ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು. | ಪರೀಕ್ಷಾರ್ಥ ಪರಿಶೀಲನೆಯಲ್ಲಿ ಈ ಶೀರ್ಷಿಕೆಯಡಿಯಲ್ಲಿ ಇತರೆ ಜಮಾಗಳಡಿಯಲ್ಲಿ ರೂ.72.47 ಲಕ್ಷ ಇರುತ್ತದೆ.<br>ಅಮಾನತ್ ಖಾತೆ-II ರಲ್ಲಿ ದಿನಾಂಕ 31.03.2016 ರ ಮುಂದುವರಿದ ರೂ.3,13,200/- ಕಂಡು ಬರುತ್ತಿದೆ.<br>ಇವುಗಳನ್ನು ತೀರಿಸಲು ಕ್ರಮವಿಡುವುದು. |
| 40 | ಆಡಳಿತ/ಸಿಬ್ಬಂದಿ | | ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಹೊರತಾಗಿ ಪ್ರಭಾರ ಕಾರ್ಯದರ್ಶಿಯವರು, ವ್ಯವಸ್ಥಾಪಕರು ಹಾಗೂ ಇತರೆ ಸಿಬ್ಬಂದಿಗಳ ಸಹಾಯದಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. ದಿನಾಂಕ 31.03.2024ಕ್ಕೆ ಸಿಬ್ಬಂದಿ ವಿವರ ಕೆಳಕಂಡಂತಿರುತ್ತದೆ. |

| ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು |
|---|---|---|
| ಕಾರ್ಯದರ್ಶಿ/ಮುಖ್ಯಕಾರ್ಯನಿರ್ವಾಹಕ | 1 | 0 |
| ಪ್ರಧಾನ ವ್ಯವಸ್ಥಾಪಕರು | 1 | 0 |
| ವ್ಯವಸ್ಥಾಪಕರು/ಶಾಖಾ ವ್ಯವಸ್ಥಾಪಕರು | 4 | 3 |
| ಲೆಕ್ಕಿಗರು | 12 | 0 |
| ಅಧೀಕ್ಷಕರು | 14 | 7 |
| ಕಂಪ್ಯೂಟರ್ ಅಡ್ಮಿನಿಸ್ಟ್ರೇಟರ್ | 3 | 0 |
| ಶೀಘ್ರಲಿಪಿಗಾರರು | 1 | 0 |
| ಹಿರಿಯ ಸಹಾಯಕರು | 22 | 6 |
| ಕಂಪ್ಯೂಟರ್ ಸಹಾಯಕರು | 3 | 0 |
| ಬೆರಳಚ್ಚುಗಾರರು | 1 | 0 |
| ಕಿರಿಯ ಸಹಾಯಕರು | 25 | 2 |
| ವಾಹನ ಚಾಲಕರು/ಅಟೆಂಡರ್ಸ್ | 23 | 7 |
| ಒಟ್ಟು | **110** | **25** |

| | | |
|---|---|---|
| 41 | ಆಕಸ್ಮಿಕ ವೆಚ್ಚಗಳು | ಯಾವುದೇ ಆಕಸ್ಮಿಕ ವೆಚ್ಚಗಳಿರುವುದಿಲ್ಲ. |
| 42 | ಬೋನಸ್/ಎಕ್ಸ್‌ಗ್ರೇಷಿಯಾ | ಬ್ಯಾಂಕಿನ ಉಪನಿಯಮ 109(3)(ಕೆ) ರನ್ವಯ ಲಾಭಾಂಶದಲ್ಲಿ 1965ರ ಬೋನಸ್ ಕಾಯ್ದೆ ರೀತ್ಯ ಸಿಬ್ಬಂದಿ ವರ್ಗಕ್ಕೆ ಬೋನಸ್ ನೀಡತಕ್ಕದ್ದು. ಬೋನಸ್ ಹಕ್ಕಿಲ್ಲದ ಸಿಬ್ಬಂದಿ ಗಳಿಗೆ ಅದರ ಬದಲಾಗಿ ಬೋನಸ್ ಕಾಯ್ದೆಯ ಮಿತಿಯಲ್ಲಿ ಅನುಗ್ರಹ ಕೊಡುಗೆ (ಎಕ್ಸ್‌ಗ್ರೇಷಿಯಾ) ರೂಪದಲ್ಲಿ ಕೊಡಬಹುದಾಗಿದೆ.<br>ಸರ್ವಸದಸ್ಯರ ಸಭೆಯ ಅನುಮತಿಯನ್ವಯ 2022-23ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯಲ್ಲಿ ರೂ.17.83 ಲಕ್ಷ ಬೋನಸ್/ ಎಕ್ಸ್‌ಗ್ರೇಷಿಯಾ ಪಾವತಿಸಲಾಗಿದೆ. |
| 43 | ಲಾಭ ವಿಲೇವಾರಿ | ಸಹಕಾರ ಸಂಘಗಳ ಕಾಯ್ದೆ ಕಲಂ 57, ನಿಯಮ 22, ಉಪನಿಯಮ ಸಂಖ್ಯೆ 109ರ ರೀತ್ಯ ಬ್ಯಾಂಕಿನ 2022-23ನೇ ಸಾಲಿನ ಲಾಭ ವಿಲೇವಾರಿಯನ್ನು ದಿನಾಂಕ 10.09.2023ರಂದು ನಡೆದ ವಾರ್ಷಿಕ ಸರ್ವಸದಸ್ಯರ ಸಭೆಯ ವಿಷಯ ಸೂಚಿ-9 ರಲ್ಲಿ ರೂ.3,37,11,085.42 ಗಳನ್ನು ಮಂಡಿಸಿ, ಅನುಮೋದನೆ ಪಡೆದು, ಈ ಕೆಳಕಂಡಂತೆ ವಿಲೇವಾರಿ ಮಾಡಿದೆ. |

| ಕ್ರ.ಸ | ವಿವರ | ಶೇಕಡ | 2022-23ನೇ ಸಾಲಿಗೆ ಹಂಚಿಕೆ |
|---|---|---|---|
| 1 | ಆಪದ್ಧನ ನಿಧಿ (ಶೇ.25 ರಂತೆ) | ಶೇ.25 | 84,27,771.42 |
| 2 | ಸಹಕಾರ ಶಿಕ್ಷಣ ನಿಧಿ (ಸಹಕಾರ ಮಹಾಮಂಡಳ ನಿ.,) (ಶೇ.2 ರಂತೆ) | ಶೇ.2 | 5,05,700.00 |
| 3 | ಸಹಕಾರ ಶಿಕ್ಷಣ ನಿಧಿ (ಸ.ಪ.ಬ್ಯಾಂಕುಗಳ ಮಹಾಮಂಡಳ ನಿ.,) (ಶೇ.1 ರಂತೆ) | ಶೇ.1 | 2,52,900.00 |
| 4 | ಕಟ್ಟಡ ನಿಧಿ (ಶೇ.10 ಕ್ಕೆ ಕಡಿಮೆ ಇಲ್ಲದಂತೆ) | ಶೇ.10 | 24,52,471.00 |
| 5 | ಸದಸ್ಯರ ಕ್ಷೇಮ ನಿಧಿ (ಶೇ.10ಕ್ಕೆ ಮೀರದಂತೆ) | ಶೇ.4 | 9,80,989.00 |
| 6 | ಮರಣ ಪರಿಹಾರ ನಿಧಿ (ಶೇ.10ಕ್ಕೆ ಮೀರದಂತೆ) | ಶೇ.4 | 9,80,989.00 |
| 7 | ಸಿಬ್ಬಂದಿ ಕ್ಷೇಮ ನಿಧಿ (ಶೇ.5ಕ್ಕೆ ಮೀರದಂತೆ) | ಶೇ.5 | 12,26,236.00 |
| 8 | ಮಹೋತ್ಸವ ನಿಧಿ (ಶೇ.10ಕ್ಕೆ ಮೀರದಂತೆ) | ಶೇ.7 | 16,68,452.00 |
| 9 | ಸದಸ್ಯರುಗಳಿಗೆ ಡಿವಿಡೆಂಡ್ (ಷೇರು ಬಂಡವಾಳಕ್ಕೆ ಶೇ.15 ರಂತೆ) | ಶೇ.15 | 1,24,22,199.00 |
| 10 | ಸಿಬ್ಬಂದಿಗಳಿಗೆ ಎಕ್ಸ್‌ಗ್ರೇಷಿಯಾ (ಬೋನಸ್ ಕಾಯ್ದೆಯಂತೆ) | | 17,83,407.00 |
| 11 | ಗುಂತಾಯ ಏರಿಳಿತ ನಿಧಿ (ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನಗಳಡಿ) | | 30,09,971.00 |
| | **ಒಟ್ಟು** | | **3,37,11,085.42** |

| | | | |
|---|---|---|---|
| 44 | ಡಿವಿಡೆಂಡ್‌: ಬ್ಯಾಂಕಿನ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಶೇಕಡವಾರು ಡಿವಿಡೆಂಡ್‌ನ್ನು ಘೋಷಿಸಲಾಗಿದೆಯೇ? | | ದಿನಾಂಕ 10.09.2023 ರಂದು ಜರುಗಿದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಸದಸ್ಯರಿಗೆ ಶೇ.15 ರಷ್ಟು ಡಿವಿಡೆಂಡ್ ಘೋಷಣೆ ಮಾಡಿ, ಸದಸ್ಯರಿಗೆ ಡಿವಿಡೆಂಡ್ ವಿತರಿಸಲಾಗುತ್ತಿದೆ. |
| 45 | ಸಭೆಗಳು | | |
| | a) | ಕೊನೆಯ ಸರ್ವಸದಸ್ಯರ ಮಹಾಸಭೆ ನಡೆದ ದಿನಾಂಕ ಹಾಗೂ ಅದು ಯಾವ ಸಾಲಿಗೆ ಸಂಬಂಧಿಸಿದ್ದು, ಎಂಬುದರ ಬಗ್ಗೆ | ಬ್ಯಾಂಕಿನ 2022-23ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ 10.09.2023ರ ಭಾನುವಾರದಂದು ನಡೆದಿರುತ್ತದೆ. |
| | b ) | ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯ ನಿರ್ವಾಹಕರ ಮಂಡಳಿ ನಡೆಸಿದ ಸಭೆಗಳ ಸಂಖ್ಯೆ | ಪ್ರಸಕ್ತ ಸಾಲಿನಲ್ಲಿ 19 ಆಡಳಿತ ಮಂಡಳಿ ಸಭೆ, 2 ವ್ಯವಸ್ಥಾಪನಾ ಮಂಡಳಿ ಹಾಗೂ 44 ಸಮಿತಿ ಸಭೆ ರಂತೆ ಒಟ್ಟು 65 ಸಭೆಗಳು ನಡೆದಿರುತ್ತದೆ. |

| | ಸಮಿತಿಗಳು | ಸಂಖ್ಯೆ |
|---|---|---|
| 1 | ಸಾಲದ ಸಮಿತಿ | 12 |
| 2 | ಲೆಕ್ಕಪರಿಶೋಧನಾ ಸಮಿತಿ | 10 |
| 3 | ಕಾರ್ಯನಿರ್ವಾಹಕ ಸಮಿತಿ/ ವಾರ್ಷಿಕ ಸರ್ವಸದಸ್ಯರ ಸಭೆ ಮೇಲ್ವಿಚಾರಣಾ ಸಮಿತಿ | 19 |
| 4 | ALCO ಸಮಿತಿ | 1 |
| 5 | ಹೂಡಿಕೆ ಸಮಿತಿ | 1 |
| 6 | Large Value Fraud Committee | 1 |
| | **ಒಟ್ಟು** | **44** |

| | | | |
|---|---|---|---|
| | c) | ಆಡಳಿತ ಮಂಡಳಿ ಮತ್ತು ಪ್ರಧಾನ ಕಾರ್ಯನಿರ್ವಹಣಾಧಿಕಾರಿಯ ಕಾರ್ಯಕ್ಷಮತೆಯ ಬಗ್ಗೆ ಸಮಗ್ರ ವಿವರಣೆ | ದಿನಾಂಕ 16.02.2020 ರಂದು ಆಡಳಿತ ಮಂಡಳಿಗೆ ಚುನಾವಣೆ ನಡೆದು ನೂತನ ಆಡಳಿತ ಮಂಡಳಿ ಸದ್ಯ ಅಸ್ತಿತ್ವದಲ್ಲಿರುತ್ತದೆ. ಉಪನಿಯಮ ರೀತ್ಯ ಪ್ರಮುಖವಾಗಿ ಮೂರು ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದು, ಸಮಿತಿ ಹೊಣೆಗಾರಿಕೆಯನ್ವಯ ಕಾಲಕಾಲಕ್ಕೆ ಸಭೆ ನಡೆದಿರುತ್ತದೆ.<br><br>ಆಡಳಿತ ಮಂಡಳಿ ಸದಸ್ಯರುಗಳಿಗೆ ಬ್ಯಾಂಕಿಂಗ್ ಮತ್ತು ಹಣಕಾಸು ನಿರ್ವಹಣೆ ಹಾಗೂ ಇತರೆ ಕ್ಷೇತ್ರಗಳಲ್ಲಿ ನುರಿತ ತಜ್ಞರಿಂದ ತರಬೇತಿ ಮಾರ್ಗದರ್ಶನ ಪಡೆಯುವ ಅವಶ್ಯವಿದ್ದು, ಇದನ್ನು ಬಳಸಿಕೊಳ್ಳಲು ಸೂಚಿಸಿದೆ. ಇದರಿಂದ ಆಡಳಿತ ಮಂಡಳಿಯ ಕಾರ್ಯಕ್ಷಮತೆಯನ್ನು ವೃದ್ಧಿಸಿಕೊಳ್ಳಲು ಸಹಕಾರಿಯಾಗುತ್ತದೆ.<br><br>ವೃತ್ತಿಪರ ವ್ಯಕ್ತಿಗಳನ್ನು ನಿರ್ದೇಶಕರನ್ನಾಗಿ ಆಡಳಿತ ಮಂಡಳಿಗೆ ನೇಮಕ ಮಾಡಿಕೊಳ್ಳಲು ಉಪನಿಯಮದಲ್ಲಿ ಅವಕಾಶವಿದ್ದು ಅದರಂತೆ ಇಬ್ಬರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ಭಾರತೀಯ ರಿಸರ್ವ್ ಬ್ಯಾಂಕಿನ ಸುತೋಲೆ ಸಂಖ್ಯೆ RBI/2019-20/128,DoR(PCB).BPD. Cir. No.8/12.05.002/2019-20, ದಿ.31.12.2019 ರನ್ವಯ ದಿನಾಂಕ 27.03.2023ರ ಆಡಳಿತ ಮಂಡಳಿ ತೀರ್ಮಾನ ದನ್ವಯ ವ್ಯವಸ್ಥಾಪನಾ ಮಂಡಳಿ ರಚನೆಯಾಗಿ ಕಾರ್ಯನಿರ್ವಹಿಸುತ್ತಿರುತ್ತದೆ.<br><br>ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯನ್ವಯ ಪೂರ್ಣ ಪ್ರಮಾಣ ಕಾರ್ಯದರ್ಶಿ ನೇಮಕಾತಿ ಅಗತ್ಯವಿದ್ದು, ಹಾಲಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಭಾರ ಕಾರ್ಯದರ್ಶಿಯವರ ಕಾರ್ಯಕ್ಷಮತೆ ಸಮಾದಾನಕರವಾಗಿದೆ. ಆದಾಗ್ಯೂ ತರಬೇತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಸೂಚಿಸಿದೆ. |
| **46** | ತನಿಖೆ/ಹಿಂದಿನ ತನಿಖೆಯ ದಿನಾಂಕ | | |
| | **a)** | ಆರ್.ಬಿ.ಐ ಯಿಂದ | ಭಾರತೀಯ ರಿಸರ್ವ್ ಬ್ಯಾಂಕಿನ ಪತ್ರ ಸಂಖ್ಯೆ: BLR.DOS. QAG.No.S739/12.07.045/2023-24, dtd.07.07.2023, Inspection U/s 35 of the BR Act, 1949 (AACS)- Issuance of directive ರನ್ವಯ ಬ್ಯಾಂಕಿನ ಏಪ್ರಿಲ್ 2020 ರಿಂದ ಮಾರ್ಚ್ 2023ರವರೆಗಿನ ಲೆಕ್ಕಪತ್ರ ಪರಿವೀಕ್ಷಣೆ ನಡೆಸಿ, BLR. DOS.QAG. No.S1081/ 12.07.045/2023-23, ದಿ.29.08.2023 ರ ಮೇರೆ ವರದಿ ನೀಡಿರುತ್ತಾರೆ. ಸದರಿ ವರದಿಗೆ ಬ್ಯಾಂಕಿನ ಸಂಖ್ಯೆ: 766/2023-24, ದಿ. 12.10.2023 ರ ಮೇರೆ ಅನುಪಾಲನೆ ನೀಡಿರುತ್ತಾರೆ. ನಂತರ ಕೆಲ ನ್ಯೂನತೆಗಳ ಬಗ್ಗೆ ಸಂಖ್ಯೆ BLR.DOS. SSMS.No. S2060/12.08.045/2023-24, ದಿನಾಂಕ 09.01.2024 ರ ಮೇರೆ Further Compliance ಕೋರಿದ್ದು, ಬ್ಯಾಂಕಿನ ಸಂಖ್ಯೆ 1231/ 2023-24, ದಿ.31.01.2024ರನ್ವಯ Further Compliance ನೀಡಿರುತ್ತಾರೆ.<br><br>ಭಾರತೀಯ ರಿಸರ್ವ್ ಬ್ಯಾಂಕಿನ ಪತ್ರ ಸಂಖ್ಯೆ BLR.DOS.SSMS.No.S9/13-04-045/ 2021-22, ದಿ.02.12.2021ರ ಮೇರೆ (Withdrawal of Supervisory Action Framework (SAF) Instrucions Imposed- Inspection under Section 35 of BR Act, 1949 (AACS) Financial position as on 31.03.2021) ನಿರ್ಬಂಧಗಳನ್ನು ತೆರವುಗೊಳಿಸಿದೆ. |

| | | | |
|---|---|---|---|
| 47 | ಶಾಖೆಗಳ ವಿವರಣೆಃ | | |
| | ಎ) | ಆರ್ಥಿಕ ಸ್ಥಿತಿ ಮತ್ತು ಶಾಖೆಗಳ ಸ್ವಾವಲಂಬನೆ ಬಗ್ಗೆ | ಆರ್ಥಿಕ ಸ್ಥಿತಿ ಉತ್ತಮವಾಗಿದ್ದು, ಲಾಭದಾಯಕವಾಗಿದೆ. ಶಾಖೆಗಳ ಸ್ವಾವಲಂಭನೆ ಪ್ರಧಾನ ಕಛೇರಿಯ ಮೇಲೆ ಅವಲಂಭಿತವಾಗಿದ್ದು, ಎರಡು ಶಾಖೆಗಳಾದ ಚಾಮರಾಜಪೇಟೆ ಹಾಗೂ ಹಳೇತರಗುಪೇಟೆ ಶಾಖೆಗಳಲ್ಲಿ ಆರ್ಥಿಕ ಸ್ಥಿತಿ ಉತ್ತಮವಾಗಿರುವುದಿಲ್ಲ. ಆರ್ಥಿಕ ಸಾಮರ್ಥ್ಯ ವೃದ್ಧಿಸಿ ಕೊಳ್ಳಲು ಸೂಚಿಸಿದೆ. |
| | ಬಿ) | ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ? | ಶಾಖೆಗಳು ನಿಯತಕಾಲಿಕೆಗಳನ್ನು ಸಕಾಲದಲ್ಲಿ ಸಲ್ಲಿಸಿವೆ. |
| | ಸಿ) | ಹೊಂದಾಣಿಕೆ ಲೆಕ್ಕಗಳ ಬಗ್ಗೆಃ<br>''ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ''<br>ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ | ಶಾಖೆಗಳ ಹೊಂದಾಣಿಕೆ ಲೆಕ್ಕಗಳನ್ನು ಕೇಂದ್ರ ಕಛೇರಿಯಲ್ಲಿ ಸಮನ್ವಯ ಮಾಡಲಾಗುತ್ತಿದ್ದು, ದಿ.31.03.2024ಕ್ಕೆ ರೂ.43,61,03,829.20 ಇದೆ. ಇದು ಕಳೆದ ಸಾಲಿನ ರೂ.30,79,01,234.00 ಕ್ಕೆ ಹೋಲಿಸಿದಾಗ ಏರಿಕೆಯಾಗಿರುತ್ತದೆ. |
| 48 | ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ (Automation & Computarisation) | | |
| | i) | ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ ಜಾರಿಯಲ್ಲಿರುವ ಬಗ್ಗೆ ಮತ್ತು ಪ್ರಸ್ತುತ ಸಾಲಿನಲ್ಲಿ ಈ ಕಾರ್ಯದಲ್ಲಿನ ಪ್ರಗತಿ. | ಬ್ಯಾಂಕಿನಲ್ಲಿ ಪೂರ್ಣ ಗಣಕೀಕರಣ ವ್ಯವಸ್ಥೆ ಜಾರಿಯಲ್ಲಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ Cyber Security Policy ಬಗ್ಗೆ ವಿಶೇಷ ಆದ್ಯತೆ ನೀಡತಕ್ಕದ್ದು. |
| | ii) | ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡದೇ ಇರುವ ಗಂಭೀರ ಅಂಶಗಳ ಕುರಿತು ವಿಮರ್ಶೆ. | ಲಾಖರ್ ವ್ಯವಸ್ಥೆ, ಸಾಲದ ಮಂಜೂರಾತಿ ಸಮಯದಲ್ಲಿ ಸಾಲದ ವರ್ಗೀಕರಣಗಳು, ಖಾತೆ ತೆರೆಯುವ ಸಂದರ್ಭದಲ್ಲಿ ಪಾಲಿಸತಕ್ಕ ಕೆ.ವೈ.ಸಿ ಪಾಲನೆ ಹಾಗೂ ಗ್ರಾಹಕರುಗಳಿಗೆ ನೀಡಬೇಕಾದ Customer ID, ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕಾದ ನಿಯತಕಾಲಿಕೆಗಳ ಪಾಲನೆ ಇತ್ಯಾದಿಗಳ ಕಡ್ಡಾಯ ಪಾಲನೆಗೆ ಸೂಚಿಸಿದೆ. |
| | iii) | ಗಣಕೀಕರಣಗೊಳಿಸಿರುವ ಶಾಖೆಗಳ ಸಂಖ್ಯೆ ಹಾಗೂ ಗಣಕೀಕರಣಗೊಂಡ ಪ್ರಮಾಣ. | ಪ್ರಧಾನ ಕಛೇರಿ ಹಾಗೂ ಮೂರು ಶಾಖೆಗಳಲ್ಲೂ ಗಣಕೀಕರಣಗೊಳಿಸಿದೆ. |
| | iv) | ತುರ್ತು ಪರಿಸ್ಥಿತಿಯಲ್ಲಿ ಗಣಕೀಕೃತ ಮಾಹಿತಿಗಳನ್ನು ಸಂರಕ್ಷಿಸುವ ಬಗ್ಗೆ ಪಾಲಿಸುತ್ತಿರುವ ನಿಯಮ (Backups/ Offsite Storage). | ಬ್ಯಾಂಕಿನ Data Backup ಅನ್ನು Fire Resistant Cabinet ನಲ್ಲಿ ಸಂರಕ್ಷಿಸಿಡಲಾಗಿದೆ. ಪ್ರತಿ ದಿನದ ಡಾಟಾ ಬ್ಯಾಕ್‌ಅಪ್ ಬೇರೆ ಸರ್ವರ್‌ನಲ್ಲಿ ಕಾಯ್ದಿರಿಸುವ ವ್ಯವಸ್ಥೆ ಮಾಡುವುದು. |
| | v) | E.D.P ಲೆಕ್ಕಪರಿಶೋಧನೆ ಜಾರಿಯಲ್ಲಿರುವ ಬಗ್ಗೆ ಮತ್ತು ಅಳವಡಿಕೆ ಪ್ರಮಾಣ. | ದಿನಾಂಕ 31.03.2024ರ ಅಂತ್ಯಕ್ಕಿದ್ದಂತೆ EDP ಲೆಕ್ಕಪರಿಶೋಧನೆಯಾಗಿದ್ದು, ವರದಿಯನುಸಾರ ಪಾಲನೆಗೆ ಕ್ರಮವಿಡತಕ್ಕದ್ದು. |
| | vi) | ಇ-ಬ್ಯಾಂಕಿಂಗ್ಃ ಜಾರಿಯಲ್ಲಿರುವ ಮಾರ್ಗಸೂಚಿಗಳು, ಈ ಕುರಿತು ಮೇಲ್ವಿಚಾರಣೆ ಮತ್ತು ಕಾಲಕಾಲಕ್ಕೆ ತಾಂತ್ರಿಕತೆಯನ್ನು ಅಪ್‌ಡೇಟ್ ಮಾಡುವ ಬಗ್ಗೆ, ವಿಮರ್ಶೆಯ ವಿಧಾನ ಮತ್ತು ಲೆಕ್ಕಪರಿಶೋಧನೆ ಬಗ್ಗೆ. | ಇ-ಬ್ಯಾಂಕಿಂಗ್ ಜಾರಿಯಲ್ಲಿರುವುದಿಲ್ಲ. |
| | vii) | ಗಣಕೀಕರಣ ಮತ್ತು ಸ್ವಯಂ ಚಾಲಿತ ವ್ಯವಸ್ಥೆ ಬಗ್ಗೆ ಸಲಹೆ ಸೂಚನೆಗಳು, ಯಾವುದಾದರೂ ಇದ್ದಲ್ಲಿ. | ಮೇಲೆ ವಿವರಿಸಲಾಗಿದೆ. |
| 49 | ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ಬಗ್ಗೆ ವಿಶ್ಲೇಷಣೆ | | |
| | A) | ಲಾಭದಾಯಕತ್ವ | |
| | a. | ಹಿಂದಿನ ಸಾಲಿಗಿಂತ ವರದಿ ಸಾಲಿನಲ್ಲಿ ಜಮಾ-ಖರ್ಚಿನ ಪ್ರಮುಖ ಅಂಶಗಳಲ್ಲಿ ಆಗಿರತಕ್ಕ ಏರಿಳಿತಗಳ ಬಗ್ಗೆ ಮುಖ್ಯ ಅನುಪಾತಗಳೊಂದಿಗೆ ವಿಶ್ಲೇಷಣೆ. | ಬ್ಯಾಂಕ್ 2022-23ನೇ ಸಾಲಿನಲ್ಲಿ ರೂ.337.11 ಲಕ್ಷ ಮತ್ತು 2023-24ನೇ ಸಾಲಿನಲ್ಲಿ ರೂ.272.17 ಲಕ್ಷ ಲಾಭ ಗಳಿಸಿದ್ದು, ಕಳೆದ ಸಾಲಿಗೆ ಹೋಲಿಸಿದಾಗ ರೂ.64.94 ಲಕ್ಷ ಲಾಭ ಕಡಿಮೆಯಾಗಿರುತ್ತದೆ. |
| | b. | ಲೆಕ್ಕಗಳ ನಿರ್ವಹಣೆಯಲ್ಲಿನ / ಕಾರ್ಯನೀತಿಯಲ್ಲಿನ ಬದಲಾವಣೆಯಿಂದಾಗಿ ವರದಿ ಸಾಲಿನ ಲಾಭ-ನಷ್ಟದ ಮೇಲಾದ ಪರಿಣಾಮಗಳ ಬಗ್ಗೆ. | ಪ್ರಸಕ್ತ ಸಾಲಿನ ಲೆಕ್ಕಗಳ ನಿರ್ವಹಣೆಯಲ್ಲಿ/ಕಾರ್ಯನೀತಿ ಯಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. ಆದ್ದರಿಂದ ವರದಿ ಸಾಲಿನ ಲಾಭ ನಷ್ಟದ ಮೇಲೆ ಯಾವುದೇ ಪರಿಣಾಮ ಕಂಡುಬಂದಿರುವುದಿಲ್ಲ. |

| | | | |
|---|---|---|---|
| | B) | ಆಸ್ತಿ-ಜವಾಬ್ದಾರಿ ತಃಖ್ತೆಯಲ್ಲಿ ಈ ಮೇಲೆ ವಿವರಿಸದೇ ಬಾಕಿ ಉಳಿದ ಎಲ್ಲಾ ಅಂಶಗಳ ಬಗ್ಗೆ ವಿಶ್ಲೇಷಣೆ. | ಮೇಲೆ ವಿವರಿಸದೇ ಉಳಿದ ಬಾಕಿ ಅಂಶಗಳು ಕಂಡು ಬಂದಿರುವುದಿಲ್ಲ. |
| 50 | ಆಂತರಿಕ ವ್ಯವಸ್ಥೆ ಮತ್ತು ನಿಯಂತ್ರಣ (System & Control) | | |
| | i) | ಸಮವರ್ತಿ/ಆಂತರಿಕ ಲೆಕ್ಕಪರಿಶೋಧನೆ/ಗಣಕಯಂತ್ರ ಮತ್ತು **Software** ಗಳ **E.D.P** ಲೆಕ್ಕಪರಿಶೋಧನೆ ಹಾಗೂ ಪರಿವೀಕ್ಷಣೆ ಬಗ್ಗೆ ಬ್ಯಾಂಕ್ ಹೊಂದಿರುವ ವ್ಯವಸ್ಥೆ ಮತ್ತು ನಿಯಂತ್ರಣ. | ಸಮವರ್ತಿ/ಆಂತರಿಕ ಲೆಕ್ಕಪರಿಶೋಧನೆ/ಗಣಕಯಂತ್ರ ಹಾಗೂ ಪರಿವೀಕ್ಷಣೆಗಳು ಕಾಲಕಾಲಕ್ಕೆ ನಡೆದು ವರದಿಗಳನ್ನು ಲೆಕ್ಕಪರಿಶೋಧನಾ ಸಮಿತಿಯಲ್ಲಿ ಪರಿಶೀಲಿಸಲಾಗುತ್ತಿದೆ. |
| | ii) | ಎಂ.ಐ.ಎಸ್ ಅಸ್ಥಿತ್ವದಲ್ಲಿರುವ ಬಗ್ಗೆ.<br>ಮಾಹಿತಿಗಳ ಕ್ರೋಢೀಕರಣ ಮತ್ತು ನಿಖರತೆ ಬಗ್ಗೆ. | ಬ್ಯಾಂಕಿನಲ್ಲಿ ಕೋರ್‌ಬ್ಯಾಂಕಿಂಗ್ ವ್ಯವಸ್ಥೆ ಜಾರಿಯಲ್ಲಿದ್ದು ಎಲ್ಲಾ ಮಾಹಿತಿಗಳು ಪ್ರಧಾನ ಕಛೇರಿಯಲ್ಲೇ ಲಭ್ಯವಿದ್ದು, ಪರಿಶೀಲಿಸಲಾಗುತ್ತಿದೆ. |
| | iii) | ಆರ್.ಬಿ.ಐ ಪರಿವೀಕ್ಷಣಾ ವ್ಯವಸ್ಥೆಗೆ ಹೊರತುಪಡಿಸಿದ ಮಾಹಿತಿಗಳ ನಂಬಲಾರ್ಹತೆ ಬಗ್ಗೆ ಜಾರಿಯಲ್ಲಿರುವ ನಿಯಮಗಳು. | ಆರ್.ಬಿ.ಐ ಪರಿವೀಕ್ಷಣಾ ವ್ಯವಸ್ಥೆಗೆ ಹೊರತುಪಡಿಸಿ ಆದಾಯ ತೆರಿಗೆ ಹಾಗೂ ಇತರೆ ತೆರಿಗೆ ಸಂಬಂಧಿತ ನಿಯಮಗಳು ಜಾರಿಯಲ್ಲಿದೆ. |
| 51 | ಇತರೆ ವಿಷಯಗಳು | | |
| | i) | ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಲೆಕ್ಕಪತ್ರ ನೀತಿ ನಿಯಮಗಳಲ್ಲಿ ಆಗಿರುವ ಬದಲಾವಣೆ ಬಗ್ಗೆ ಟಿಪ್ಪಣಿ | ಬ್ಯಾಂಕಿಗೆ ಸಂಬಂಧಪಟ್ಟ ಕೇಂದ್ರ ಸರ್ಕಾರದ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ನೀತಿ ನಿಯಮಾವಳಿ ಗಳನ್ನು ಜಾರಿಗೊಳಿಸಲಾಗುತ್ತಿದೆ. |
| | ii) | **Under writing** ಹಾಗೂ ನಿಷ್ಪನ್ನ **(Derivatives)** ಇವುಗಳ ನಿರ್ವಹಣೆ ಬಗ್ಗೆ ಬ್ಯಾಂಕ್ ಅನುಸರಿಸುತ್ತಿರುವ ನಿಯಮಗಳು. | ಅನ್ವಯಿಸುವುದಿಲ್ಲ |
| | iii) | ಆದಾಯ ತೆರಿಗೆ, ಬಡ್ಡಿ ತೆರಿಗೆ, ಗ್ರಾಚ್ಯುಟಿ, ಪಿಂಚಣಿ ಮತ್ತು ಭವಿಷ್ಯ ನಿಧಿ ಇವುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. | ಆದಾಯ ತೆರಿಗೆ, ಬಡ್ಡಿ ತೆರಿಗೆ, ಗ್ರಾಚ್ಯುಟಿ, ಪಿಂಚಣಿ ಮತ್ತು ಭವಿಷ್ಯ ನಿಧಿಗಳಿಗೆ ಪ್ರಸಕ್ತ ಸಾಲಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಲಾಗಿದೆ. |
| | iv) | ಬ್ಯಾಂಕಿನ ಆಸ್ತಿ-ಜವಾಬ್ದಾರಿ ತಃಖ್ತೆ ಖಾತೆಗಳನ್ನು ಹೊರತು ಪಡಿಸಿದ ಕ್ಲೇಮ್‌ಗಳ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ | ಲೆಕ್ಕಪರಿಶೋಧನಾ ಅವಧಿಯಲ್ಲಿ ಬ್ಯಾಂಕಿನ ಮೇಲೆ ಯಾವುದೇ ಕ್ಲೇಮ್‌ಗಳು ಕಂಡು ಬಂದಿರುವುದಿಲ್ಲ. ಹಾಗಾಗಿ ಯಾವುದೇ ಅವಕಾಶ ಕಲ್ಪಿಸಿರುವುದಿಲ್ಲ. |
| | v) | ಶಾಖೆಗಳ ನಿಯತಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತಃಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು. | ಶಾಖೆಗಳು ನಿಯತಕಾಲಿಕೆಗಳನ್ನು ಪ್ರಧಾನ ಕಛೇರಿಗೆ ಸಕಾಲದಲ್ಲಿ ಸಲ್ಲಿಸಲು ಕ್ರಮವಿಡುವುದು. |
| | vi) | ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ-ಸಮನ್ವಯಕ್ಕೊಳಪಟ್ಟಿರುವ ತಃಖ್ತೆಗಳ ಬಗ್ಗೆ ವಿವರಣೆ | ಬೇರೆ ಬ್ಯಾಂಕುಗಳಲ್ಲಿ ಹೊಂದಿದ ಖಾತೆಗಳ ಬಾಕಿ ಹೊಂದಾಣಿಕೆ ಕುರಿತು ಸಮನ್ವಯ ಪಟ್ಟಿ ತಯಾರಿಸಿ, ಸದರಿ ಖಾತೆಗಳ ದೃಢೀಕರಣವನ್ನು ದಿನಾಂಕ 31.03.2024ಕ್ಕೆ ಪಡೆದಿರುತ್ತಾರೆ.<br>ದಿನಾಂಕ 31.03.2024ಕ್ಕೆ ಇತರೆ ಬ್ಯಾಂಕುಗಳಲ್ಲಿರುವ ಚಾಲ್ತಿ ಖಾತೆಗಳ ಸಮನ್ವಯ ಪಟ್ಟಿ ತಯಾರಿಸಿರುತ್ತಾರೆ. |
| | vii) | **NOSTRO** ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್‌ವರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ಧತಿ ಬಗ್ಗೆ. | ಅನ್ವಯವಾಗುವುದಿಲ್ಲ. |
| | viii) | **CRAR**ನ ಬಗ್ಗೆ ವಿಶ್ಲೇಷಣೆ | ಆರ್.ಬಿ.ಐ ಸುತ್ತೋಲೆ ಸಂಖ್ಯೆ 4/09/01-6/00/2000-01, ದಿನಾಂಕ 25.04.2001 ರನ್ವಯ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ನಿಗದಿಪಡಿಸಿರುವ CRAR ಕನಿಷ್ಟ ಮಿತಿ ಶೇ.9 ಇದ್ದು, ದಿನಾಂಕ 31.03.2024ಕ್ಕೆ ಬ್ಯಾಂಕಿನ CRAR ಪ್ರಮಾಣವು ಶೇ.44.71 ರಷ್ಟಿದೆ. ಇದು ನಿಗದಿತ ಪ್ರಮಾಣಕ್ಕಿಂತ ಬಹಳ ಹೆಚ್ಚಿಗೆ ಇರುತ್ತದೆ. |
| | | **(i)** ಹಿಂದಿನ ಸಾಲಿನ ಲಾಭದ ಶೇ.1 ಕ್ಕಿಂತ ಹೆಚ್ಚಿಗೆ ಕೊಡುಗೆ/ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ | 2022-23ನೇ ಸಾಲಿನಲ್ಲಿ ಬ್ಯಾಂಕ್ ರೂ.337.11 ಲಕ್ಷ ಲಾಭ ಗಳಿಸಿದ್ದು, ಇದರ ಶೇ.1 ರಷ್ಟು ಅಂದರೆ ರೂ.3.37 ಲಕ್ಷ ದಾನ ನೀಡಬಹುದಾಗಿದ್ದು, ವರದಿ ಸಾಲಿನಲ್ಲಿ ರೂ.0.72 ಲಕ್ಷ ದಾನದ ನಿಧಿಯಿಂದ ಪಾವತಿಸಲಾಗಿದೆ. |

| | | | | |
|---|---|---|---|---|
| | | (ii) | ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ-ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ. | ಬ್ಯಾಂಕು ಠೇವಣಿ ಮತ್ತು ಸಾಲಗಳಿಗೆ ಆಕರಿಸುವ ಬಡ್ಡಿ ಸ್ಪರ್ಧಾತ್ಮಕವಾಗಿದ್ದು, ಇದು ಬ್ಯಾಂಕಿನ ಆರ್ಥಿಕತೆಯ ಹಿತ ದೃಷ್ಟಿಯಿಂದ ಸಮರ್ಪಕವಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.<br><br>ಠೇವಣಿಗಳ ಮೇಲಿನ ವೆಚ್ಚ ಶೇ.5.69 ಹಾಗೂ ಮುಂಗಡಗಳ ಮೇಲಿನ ಸರಾಸರಿ ಆದಾಯ ಶೇ.10.60 ರಷ್ಟಿದ್ದು, ಠೇವಣಿಯ ಶೇ.66.42 ರಷ್ಟು ಮುಂಗಡಗಳು ನೀಡಿದ್ದು, ಠೇವಣಿಗಳ ಮೇಲೆ ಪರಿಣಾಮಕಾರಿ ಬಡ್ಡಿಯು ಶೇ.7.5 ಇದ್ದು, ಬ್ಯಾಂಕಿನ ಲಾಭದ ಮೇಲೆ ಧೀರ್ಘವಾಗಿ ಪರಿಣಾಮ ಬೀರುತ್ತಿದ್ದು ಶಾಖೆಗಳು ನಷ್ಟವನ್ನು ಅನುಭವಿಸುತ್ತಿದೆ. |
| | ix) | ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಛಿಸುವ ಇತರೆ ವಿಷಯಗಳ ಬಗ್ಗೆ | | |
| | | 1 | ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ವಯ ಬ್ಯಾಂಕು ನಾಲ್ಕು ಸಾಲ ಮಾಹಿತಿ ಸಂಸ್ಥೆಗಳ ಸದಸ್ಯತ್ವ ಪಡೆದಿದೆ. ಆದರೆ **CIBIL** ಮತ್ತು **Highmark** ಸಂಸ್ಥೆಯಿಂದ ಮಾಹಿತಿ ವಿನಿಮಯ ಮಾಡುತ್ತಿದ್ದು, ಉಳಿದ ಎರಡು ಸಂಸ್ಥೆಗಳೊಂದಿಗೂ ಮಾಹಿತಿ ವಿನಿಮಯ ಮಾಡುವುದು ಸೂಕ್ತ. | |
| | | 2 | ಕೆ.ವೈ.ಸಿ ವಿವರಗಳ ಪಡೆಯುವಿಕೆ, ಬಡ್ಡಿ ಮತ್ತಿತರೆ ಪಾವತಿಗಳಿಂದ ಮೂಲದಲ್ಲಿ ಆದಾಯ ತೆರಿಗೆ **(TDS)** ಕಟಾವಣೆ, ಕಾಲಕಾಲಿಕ ಮಾಹಿತಿ ರವಾನೆ ಮತ್ತು ಸರಕು ಸೇವಾ ತೆರಿಗೆ **(GST)** ನಿಯಮಗಳ ಪಾಲನೆಗೆ ವಿಶೇಷ ಆದ್ಯತೆ ನೀಡುವುದು. | |
| | | 3 | ಬ್ಯಾಂಕಿನ ಉಪನಿಯಮದನ್ವಯ ಬ್ಯಾಂಕಿನಿಂದ ಯಾವ ಉದ್ದೇಶಕ್ಕಾಗಿ ಸಾಲ ನೀಡಲಾಗುತ್ತಿದೆಯೋ ಅದೇ ಉದ್ದೇಶಕ್ಕಾಗಿ ಬಳಕೆಯಾಗಿದೆಯೇ **(End Use)** ಎಂಬುದನ್ನು ಪರಿಶೀಲಿಸುವ ವ್ಯವಸ್ಥೆ ಮಾಡುವುದು. | |
| | | 4 | ಬ್ಯಾಂಕಿಗೆ ಆಧಾರ ನೀಡಿರುವ ಸ್ಥಿರಾಸ್ತಿಗಳನ್ನು ಆರ್.ಬಿ.ಐ ಸೂಚನೆಗಳನ್ವಯ ಪ್ರತಿ ಮೂರು ವರ್ಷಕ್ಕೊಮ್ಮೆ ಮರುಮೌಲ್ಯ ಮಾಪನ ಮಾಡಿಸುವುದು. | |
| | | 5 | ಸಾಲಗಾರರು ಆಧಾರ ನೀಡಿರುವ ಆಸ್ತಿಗಳ ನಿಯತಕಾಲಿಕ ಪರಿಶೀಲನೆ ಮಾಡುವುದು. | |
| | | 6 | ಆರ್.ಬಿ.ಐ ಸುತ್ತೋಲೆಗಳನ್ನು ಸಿಬ್ಬಂದಿಗಳ ಗಮನಕ್ಕೆ ತಂದು ಅದರ ಪಾಲನೆಗೆ ವ್ಯವಸ್ಥೆ ಮಾಡುವುದು. | |
| | | 7 | ಬ್ಯಾಂಕಿನ ಎಲ್ಲಾ ಸಿಬ್ಬಂದಿಯವರಿಗೆ ಇತ್ತೀಚಿನ ತಾಂತ್ರಿಕ ಬದಲಾವಣೆ ಮತ್ತು ಕೌಶಲ್ಯತೆಗಳನ್ನು ಅಳವಡಿಸಿಕೊಳ್ಳಲು ಕಾಲಕಾಲಕ್ಕೆ ತರಬೇತಿ ವ್ಯವಸ್ಥೆ ಮಾಡುವುದು. | |
| | | 8 | ಆದ್ಯತಾ ವಲಯದ ಮಿತಿಯನ್ನು ತಲುಪಲು ವಿಫಲವಾಗಿರುವುದರಿಂದ ಆದ್ಯತಾ ವಲಯಕ್ಕೆ ಸಾಲವನ್ನು ಹೆಚ್ಚಿಸಲು ಬ್ಯಾಂಕ್ ಕ್ರಮವಿಡಬೇಕಾಗುತ್ತದೆ. | |
| 52 | ಬ್ಯಾಂಕಿನ ಅಧೀನ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ | | | |
| | i) | | ಅಧೀನ ಸಂಸ್ಥೆಗಳು ಬ್ಯಾಂಕಿಗೆ ವರದಿ ಮಾಡಲು ಜಾರಿಯಲ್ಲಿರುವ ವ್ಯವಸ್ಥೆ | ಅಧೀನ ಸಂಸ್ಥೆಗಳು ಯಾವುದು ಕಂಡುಬಂದಿರುವುದಿಲ್ಲ. |
| | ii) | | ಅಧೀನ ಸಂಸ್ಥೆಗಳು ನಿವ್ವಳ ನಷ್ಟ ಅನುಭವಿಸುತ್ತಿದ್ದಲ್ಲಿ ವಿಮರ್ಶೆ | ಅನ್ವಯಿಸುವುದಿಲ್ಲ. |
| 53 | **D.E.A. Fund Scheme 2014** ಜಾರಿಯಲ್ಲಿರುವ ಬಗ್ಗೆ | | | |
| | i) | | ಬ್ಯಾಂಕ್ ಪ್ರಾರಂಭವಾದಾಗಿನಿಂದ ವಾರಸುದಾರರಿಲ್ಲದ ಠೇವಣಿಗಳನ್ನು **D.E.A. Fund** ಗೆ ವರ್ಗಾಯಿಸಿರುವ ಬಗ್ಗೆ | ವರದಿ ಸಾಲಿನಲ್ಲಿ ರೂ. 21.00 ಲಕ್ಷಗಳನ್ನು **D.E.A Fund**ಗೆ ವರ್ಗಾಯಿಸಲಾಗಿದೆ. |
| | ii) | | ಈ ಕುರಿತು ನಿಗದಿಪಡಿಸಲಾಗಿರುವ ವಿವಿಧ ನಮೂನೆ ಹಾಗೂ ನಿಯತಕಾಲಿಕೆಗಳನ್ನು ಸಲ್ಲಿಸಿರುವ ಬಗ್ಗೆ | ನಿಗದಿಪಡಿಸಿರುವ ವಿವಿಧ ನಮೂನೆ ಹಾಗೂ ನಿಯತ ಕಾಲಿಕೆಗಳನ್ನು ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಿರುತ್ತಾರೆ. |
| | iii) | | ಈ ಕುರಿತು ಸಮನ್ವಯ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ. | ಸಲ್ಲಿಸಿರುತ್ತಾರೆ. |
| | iv) | | ಗ್ರಾಹಕರ ದೂರುಗಳನ್ನು ಪರಿಹರಿಸಲು ಬ್ಯಾಂಕ್ ಹೊಂದಿರುವ ವ್ಯವಸ್ಥೆ | ಬಂದಿರುವ ದೂರುಗಳನ್ನು ಪರಿಶೀಲಿಸಿ ಸಮಾಧಾನಕರ ವಾಗಿ ಅವುಗಳನ್ನು ಪರಿಹರಿಸಲಾಗುತ್ತಿದೆ. |
| | v) | | ಗ್ರಾಹಕರ/ವಾರಸುದಾರರ ಠೇವಣಿಗಳನ್ನು ಹಿಂದಿರುಗಿಸುವ ಬಗ್ಗೆ | ಗ್ರಾಹಕರ/ವಾರಸುದಾರರ ಠೇವಣಿಗಳನ್ನು ಹಿಂದಿರು ಗಿಸುವಾಗ ಸಂಬಂದಪಟ್ಟ ಎಲ್ಲಾ ನಿಯಮ/ ಕಾನೂನು ಗಳನ್ನು ಪಾಲಿಸಲಾಗುತ್ತಿದೆ. |
| | vi) | | ಈ ಸಂಬಂಧ ಬ್ಯಾಂಕಿನ ದಾಖಲೆಗಳನ್ನು ಪರಿಶೋಧಿಸುವ ಬಗ್ಗೆ ಇರುವ ವ್ಯವಸ್ಥೆ. | ಈ ಸಂಬಂಧ ವಾರಸುದಾರರಿಂದ ಎಲ್ಲಾ ದಾಖಲಾತಿ ಗಳನ್ನು ಪಡೆದು ಪರಿಶೀಲಿಸಿ ಹಿಂದಿರುಗಿಸುವ ಕ್ರಮವಿಡಲಾಗುತ್ತಿದೆ. |

| | | | |
|---|---|---|---|
| 54 | ಆಡಳಿತ ಮಂಡಳಿ | | |
| | i) | ಚುನಾಯಿತ ಆಡಳಿತ ಮಂಡಳಿಯ ಕಾರ್ಯನಿರ್ವಹಣೆ, ರಚನೆ, ಸಮಿತಿಗಳು, ಸಮಿತಿಗಳ ರಚನೆ, ಕಾರ್ಪೊರೇಟ್ ಗೌವರ್ನೆನ್ಸ್, ಆಡಳಿತ ಮಂಡಳಿಯಲ್ಲಿನ ವೃತ್ತಿ ಪರತೆ, ನಿಯತಕಾಲಿಕವಾಗಿ ಸಭೆ ನಡೆಸುವ ಬಗ್ಗೆ, ಸಭೆಯಲ್ಲಿ ಚರ್ಚೆಯಾದ ವಿಷಯಗಳು, ಗೈರು ಹಾಜರಾದ ನಿರ್ದೇಶಕರು, ನಿರ್ದೇಶಕರಿಂದ ಬೈಲಾ ಉಲ್ಲಂಘನೆ, ನಿರ್ದೇಶಕರನ್ನು ವಜಾಗೊಳಿಸಿರುವ ವಿವರ ಯಾವುದಾದರೂ ಇದ್ದಲ್ಲಿ, ಇತ್ಯಾದಿ ಅಂಶಗಳ ಬಗ್ಗೆ (ಚುನಾಯಿತ ಆಡಳಿತ ಮಂಡಳಿ ಇಲ್ಲದೆ ಇದ್ದಲ್ಲಿ ಮೇಲಿನ ಅಂಶಗಳ ಬಗ್ಗೆ ಆಡಳಿತಾಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ ನೀಡುವುದು). | ದಿನಾಂಕ 16.02.2020 ರಂದು ಆಡಳಿತ ಮಂಡಳಿಗೆ ಚುನಾವಣೆ ನಡೆದು ನೂತನ ಆಡಳಿತ ಮಂಡಳಿ ಸದ್ಯ ಅಸ್ತಿತ್ವದಲ್ಲಿದೆ. ಉಪನಿಯಮ ರೀತ್ಯ ಪ್ರಮುಖವಾಗಿ ಮೂರು ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದು, ಸಮಿತಿ ಹೊಣೆಗಾರಿಕೆಯನ್ವಯ ಕಾಲಕಾಲಕ್ಕೆ ಮಂಡಳಿ ಹಾಗೂ ಸಮಿತಿಗಳ ಸಭೆ ನಡೆದಿರುತ್ತದೆ.<br><br>ಆಡಳಿತ ಮಂಡಳಿ ಸದಸ್ಯರುಗಳಿಗೆ ಬ್ಯಾಂಕಿಂಗ್ ಮತ್ತು ಹಣಕಾಸು ನಿರ್ವಹಣೆ ಹಾಗೂ ಇತರೆ ಕ್ಷೇತ್ರಗಳಲ್ಲಿ ನುರಿತ ತಜ್ಞರಿಂದ ತರಬೇತಿ ಮಾರ್ಗದರ್ಶನ ಪಡೆಯುವ ಅವಶ್ಯವಿದ್ದು, ಇದನ್ನು ಬಳಸಿಕೊಳ್ಳಲು ಸೂಚಿಸಿದೆ. ಇದರಿಂದ ಆಡಳಿತ ಮಂಡಳಿಯ ಕಾರ್ಯಕ್ಷಮತೆಯನ್ನು ವೃದ್ಧಿಸಿಕೊಳ್ಳಲು ಸಹಕಾರಿ ಯಾಗುತ್ತದೆ.<br><br>ವೃತ್ತಿಪರ ವ್ಯಕ್ತಿಗಳನ್ನು ನಿರ್ದೇಶಕರನ್ನಾಗಿ ಆಡಳಿತ ಮಂಡಳಿಗೆ ನೇಮಕ ಮಾಡಿಕೊಳ್ಳಲು ಉಪನಿಯಮ ದಲ್ಲಿ ಅವಕಾಶವಿದ್ದು ಇಬ್ಬರನ್ನು ನೇಮಕಾತಿ ಮಾಡಿ ಕೊಳ್ಳಲಾಗಿದೆ.<br><br>ಭಾರತೀಯ ರಿಸರ್ವ್ ಬ್ಯಾಂಕಿನ ಸುತೋಲೆ ಸಂಖ್ಯೆ RBI/2019-20/128,DoR(PCB).BPD.Cir. No. 8/12.05. 002/2019-20, ದಿ.31.12.2019 ರನ್ವಯ ದಿನಾಂಕ 27.03.2023ರ ಆಡಳಿತ ಮಂಡಳಿ ತೀರ್ಮಾನದನ್ವಯ ವ್ಯವಸ್ಥಾಪನಾ ಮಂಡಳಿ ರಚನೆಯಾಗಿ ಕಾರ್ಯನಿರ್ವಹಿ ಸುತ್ತಿರುತ್ತದೆ.<br><br>ಬೈಲಾ ಉಲ್ಲಂಘನೆ ಹಾಗೂ ನಿರ್ದೇಶಕರನ್ನು ವಜಾ ಗೊಳಿಸಿರುವ ಪ್ರಕರಣಗಳು ಯಾವುದೂ ಕಂಡು ಬಂದಿರುವುದಿಲ್ಲ. |
| | ii) | ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ನೇಮಕಾತಿ, ವಿದ್ಯಾರ್ಹತೆ ಮತ್ತು ಬ್ಯಾಂಕ್ ನಡೆಸುವ ಸಾಮರ್ಥ್ಯ ಹೊಂದಿರುವ ಬಗ್ಗೆ. | ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯನ್ವಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇಮಕಾತಿ ಅಗತ್ಯವಿರುತ್ತದೆ. ಹಾಲಿ ಪ್ರಭಾರ ಕಾರ್ಯದರ್ಶಿ ಯವರು ಕಾರ್ಯನಿರ್ವಹಿ ಸುತ್ತಿದ್ದು, ಅವರ ಕಾರ್ಯಕ್ಷಮತೆ ಸಮಾದಾನಕರವಾಗಿದೆ. |
| | iii) | 2ನೇ ಹಂತದ ಸಿಬ್ಬಂದಿಗಳ ಕಾರ್ಯನಿರ್ವಹಣೆ, ನೇಮಕಾತಿ, ತರಬೇತಿ, ಜವಾಬ್ದಾರಿ ನಿಗಪಡಿಸುವಿಕೆ, ರೊಟೇಷನ್ ಬಗ್ಗೆ ವಿಮರ್ಶೆ. | ಸಮರ್ಪಕವಾಗಿದೆ. ಆದಾಗ್ಯೂ ತರಬೇತಿ ಹಾಗೂ ಜವಾಬ್ದಾರಿ ನಿಗದಿಪಡಿಸುವ ಬಗ್ಗೆ ಗಮನಹರಿಸುವುದು. |
| 55) | ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು: | | |
| | 1 | ಭಾರತೀಯ ರಿಸರ್ವ್ ಬ್ಯಾಂಕಿನವರು ದಿ.29.08.2023ರಂದು ನೀಡಿರುವ ಪರಿವೀಕ್ಷಣಾ ವರದಿಗೆ ಬ್ಯಾಂಕ್ ಅನುಪಾಲನೆ ನೀಡಿದ್ದು, ವರದಿಯಲ್ಲಿ ಸೂಚಿಸಿರುವ ಅಂಶಗಳ ಪಾಲನೆಗೆ ಒತ್ತು ನೀಡುವುದು. | |
| | 2 | ಬ್ಯಾಂಕಿನ ಶಾಖೆಗಳಲ್ಲಿ ನಿಗದಿಪಡಿಸಿರುವ ನಗದು ಮಿತಿಗಿಂತ ಒಂದು ಶಾಖೆಯಲ್ಲಿ 5 ದಿನಗಳಲ್ಲಿ ಹೆಚ್ಚಿನ ಶಿಲ್ಕು ಇಟ್ಟಿದ್ದು, ನಿಗದಿತ ಮಿತಿಯಲ್ಲಿಯೇ ಶಿಲ್ಕು ನಿರ್ವಹಿಸಲು ಸೂಚಿಸಿದೆ. ಇತ್ತೀಚಿನ ಆರ್.ಬಿ.ಐ ನಿರ್ದೇಶನಗಳನ್ವಯ ನಗದಿನ ಗರಿಷ್ಠ ಮಿತಿಯನ್ನು ಪುನರ್ ಪರಿಶೀಲಿಸಿ ಕಡಿತಗೊಳಿಸುವುದು. | |
| | 3 | ಠೇವಣಿ ಖಾತೆಗಳ ಮತ್ತು ಷೇರು ಬಂಡವಾಳದ ನಿರ್ವಹಣೆಯಲ್ಲಿ ಕೆ.ವೈ.ಸಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು. | |
| | 4 | ಬ್ಯಾಂಕಿನ ಶಾಖೆಗಳಲ್ಲಿ ನಿಯೋಜಿತ ಭದ್ರತಾ ಸಿಬ್ಬಂದಿಯನ್ನು ದಿನದ 24 ಘಂಟೆಗೂ ವಿಸ್ತರಿಸುವುದು ಸೂಕ್ತ. | |
| | 5 | ಸ್ಥಿರಾಧಾರ ಸಾಲಗಳಿಗೆ ಸಂಬಂಧಪಟ್ಟ ಸ್ವತ್ತಿನ CERSAI (Central Registry of Securitisation Asset Reconstruction and Security Interest of India) ದೃಢೀಕರಣ ಕಡ್ಡಾಯವಾಗಿ ಪಡೆಯತಕ್ಕದ್ದು. | |
| | 6 | ಬ್ಯಾಂಕಿನಿಂದ ಸಾಲ ನೀಡುವಾಗ ಸಾಲದ ಅವಶ್ಯಕತೆ, ಆದಾಯ ಪ್ರಮಾಣ, ಮರುಪಾವತಿ ಸಾಮರ್ಥ್ಯಗಳ ಆಧಾರದ ಮೇಲೆ ಸಾಲದ ಮೊತ್ತವನ್ನು ನಿಷ್ಕರ್ಷೆ ಮಾಡುವ ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೊಳಿಸುವುದು. | |

| | | |
|---|---|---|
| | 7 | ಸಾಲಗಾರರು ನೀಡಿರುವ ಆದಾಯ ವಿವರ ಮತ್ತವರ ತೆರಿಗೆಯ ದಾಖಲೆಗಳನ್ನು ಹೋಲಿಸಿದಾಗ ಅವರ ಆದಾಯಕ್ಕಿಂತ ಹೆಚ್ಚಿನ ಸಾಲ ನೀಡಿರುವುದು ಕಂಡುಬಂದಿರುತ್ತದೆ. ಬ್ಯಾಂಕ್ ಪಡೆದ ಆದಾಯ ತೆರಿಗೆ ದಾಖಲೆಗಳನ್ನು ಇಲಾಖೆಯ 26 AS ನಮೂನೆ, ಪಾಸ್‌ವರ್ಡ್ ಪಡೆದು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು. |
| | 8 | ಕೆಲ ಪ್ರಕರಣಗಳಲ್ಲಿ ಸಾಲ ವಿತರಿಸಿದ ನಂತರದಲ್ಲಿ ವಾರ್ಷಿಕ ಆದಾಯ ತೆರಿಗೆ, ಆಸ್ತಿ ಜವಾಬ್ದಾರಿ, ಲಾಭ-ನಷ್ಟ ತಃಖ್ತೆಗಳನ್ನು ಪಡೆದು ಪರಿಶೀಲಿಸಿರುವುದಿಲ್ಲ. ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಕಾಲಕಾಲಕ್ಕೆ ನಿರ್ಣಯಿಸುವ ನಿಟ್ಟಿನಲ್ಲಿ ಈ ದಾಖಲೆಗಳನ್ನು ಸಾಲದ ಪೂರ್ಣ ಅವಧಿಯವರೆವಿಗೂ ಪ್ರತಿ ವರ್ಷ ಪಡೆಯತಕ್ಕದ್ದು. |
| | 9 | ಆರ್.ಬಿ.ಐ ನಿರ್ದೇಶನದನ್ವಯ ರೂ.10.00 ಲಕ್ಷ ಮೇಲ್ಪಟ್ಟ ಸಾಲಗಳ ಖಾತಾದಾರರಿಂದ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರ ಮತ್ತು ವರದಿಗಳನ್ನು ಕಡ್ಡಾಯವಾಗಿ ಪಡೆಯತಕ್ಕದ್ದು. |
| | 10 | ವ್ಯಾಪಾರಾಭಿವೃದ್ಧಿಗಾಗಿ ಸಾಲ ನೀಡಿದ ಪ್ರಕರಣಗಳಲ್ಲಿ ವ್ಯಾಪಾರದ ನೋಂದಣಿ ಮತ್ತಿತರ ಸಮಗ್ರ ಮಾಹಿತಿ ಪಡೆದಿರುವುದಿಲ್ಲ ಹಾಗೂ ಸಾಲದ ಸದುಪಯೋಗ (End Use) ಕಡ್ಡಾಯವಾಗಿ ಜಾರಿಗೊಳಿಸಲು ಸೂಚಿಸಿದೆ. |
| | 11 | ಬ್ಯಾಂಕಿನಿಂದ ತೀರುವಳಿಗಾಗಿ ಬಂದ ಹಾಗೂ ಬೇರೆ ಬ್ಯಾಂಕುಗಳಿಗೆ ತೀರುವಳಿಗಾಗಿ ಕಳುಹಿಸುವ ಚೆಕ್‌ಗಳ ವಾಪಸಾತಿ ಸಂಖ್ಯೆ ಆರ್.ಬಿ.ಐ ನಿಗದಿಪಡಿಸಿದ ಶೇ.4ರ ಮಿತಿಯಲ್ಲಿರತಕ್ಕದ್ದು. |
| | 12 | ಅಮಾನತ್ ಖಾತೆಗಳಲ್ಲಿರುವ ಬರಬೇಕಾದ ರೂ.3,13,200/-ಗಳನ್ನು ಪರಿಶೀಲಿಸಿ, ಸಂಬಂಧಿಸಿದ ಖಾತೆಗಳಿಗೆ ವರ್ಗಾಯಿಸಿ ಅಖೈರುಗೊಳಿಸುವುದು. |
| | 13 | 10 ವರ್ಷ ಮೇಲ್ಪಟ್ಟ ನಗದೀಕರಣವಾಗದ ಪೇ ಆರ್ಡರ್/ ಬ್ಯಾಂಕರ್ಸ್ ಚೆಕ್‌ಗಳ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ **DEA Fund** ಖಾತೆಗೆ ವರ್ಗಾಯಿಸುವುದು. |
| | 14 | ಬ್ಯಾಂಕಿನ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಮರ್ಕಂಟೈಲ್ ಸಹಕಾರಿ ಬ್ಯಾಂಕ್ ನಿಯಮಿತದ ಠೇವಣಿ ಬಾಕಿ ಬಾಬ್ತು ರೂ.55.81 ಲಕ್ಷ ಕಾಂಟ್ರಾ ಇದ್ದು, ಈ ಬ್ಯಾಂಕ್ ಸಮಾಪನೆಗೊಂಡಿರುವುದರಿಂದ ಮೊಬಲಗನ್ನು ಕಾಯ್ದಿರಿಸಿ ಹಲವಾರು ವರ್ಷಗಳಾಗಿದ್ದು, ಈ ಲೆಕ್ಕ ಶೀರ್ಷಿಕೆಯಿಂದ ತಃಖ್ತೆಯಿಂದ ತೆಗೆಯುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ. |
| | 15 | ಬ್ಯಾಂಕಿನಲ್ಲಿ **Fixed Assets** ರಿಜಿಸ್ಟರ್ ನಿರ್ವಹಿಸಿರುವುದಿಲ್ಲ. ಅಲ್ಲದೇ ಸ್ಥಿರಾಸ್ತಿ ಸಲಕರಣೆ ಇತ್ಯಾದಿಗಳ ಮೇಲಿನ ಸವಕಳಿ ಲೆಕ್ಕಚಾರಗಳನ್ನು ಹಳೆಯ ಪದ್ಧತಿಯನ್ನು ಅನುಸರಿಸುತ್ತಿದ್ದು, ಆದಾಯ ತೆರಿಗೆ ಪದ್ದತಿಯನ್ವಯ ನಿರ್ವಹಿಸಿ ಕಾಲಕಾಲಕ್ಕೆ ಕುಳುವಾರು ತಯಾರಿಕೆಗೆ ಕ್ರಮವಿಡಲು ಸೂಚಿಸಿದೆ. |
| | 16 | ಸರಕು ಮತ್ತು ಸೇವಾ ತೆರಿಗೆ ಹೊಣೆಗಾರಿಯು ರೂ.1,65,778/- ಕಾನೂನು ಶುಲ್ಕದ ಮೇಲೆ ರಿವರ್ಸ್ ಚಾರ್ಜ್ ಮೆಕಾನಿಸಂಗೆ ಬಿಡುಗಡೆ ಮಾಡಿರುವುದಿಲ್ಲ. ಆದರ ಲೆಕ್ಕವನ್ನು ಈ ಕೆಳಕಂಡಂತೆ ನೀಡಲಾಗಿದೆ. |

| ವಿವರಗಳು | ವೃತ್ತಿಪರ ಶುಲ್ಕ ಪಾವತಿಸಿರುವುದು/ ಪಾವತಿಸಬೇಕಾದ್ದು | ಕೇಂದ್ರ ಸರಕು ಮತ್ತು ಸೇವಾ ತೆರಿಗೆ | ರಾಜ್ಯ ಸರಕು ಮತ್ತು ಸೇವಾ ತೆರಿಗೆ |
|---|---|---|---|
| ವಕೀಲರ ಶುಲ್ಕ | 7,80,500.00 | 70,245.00 | 70,245.00 |
| @ 18% ರ ಬಡ್ಡಿ | | 12,644.00 | 12,644.00 |
| **ಒಟ್ಟು** | | **82,889.00** | **82,889.00** |

| | | |
|---|---|---|
| | 17 | ಆಸ್ತಿ ಮತ್ತು ಜವಾಬ್ದಾರಿಯಲ್ಲಿ ಕಾಣಿಸಿರುವ ಇನ್ ಪುಟ್ ಕ್ರೆಡಿಟ್ ಮತ್ತು ಜಿಎಸ್‌ಟಿಯು ಜಿಎಸ್‌ಟಿ ಪೋರ್ಟಲ್‌ನಲ್ಲಿ ಜಿಎಸ್‌ಟಿ ಕ್ರೆಡಿಟ್ ಲೆಡ್ಜರ್ ಮತ್ತು ಹೊಣೆಗಾರಿಕೆ ಲೆಡ್ಜರ್‌ನಲ್ಲಿ ಕಂಡುಬರುವ ಮೊತ್ತದೊಂದಿಗೆ ಹೊಂದಿಕೆಯಾಗುವುದಿಲ್ಲ. ಹೋಲಿಕೆಯನ್ನು ಕೆಳಕಂಡಂತೆ ನೀಡಲಾಗಿದೆ. |

| ಕ್ರ. ಸಂ | ವಿವರಗಳು | ಖಾತೆ | ಆಸ್ತಿ-ಜವಾಬ್ದಾರಿ ಪ್ರಕಾರ | GST ಲೆಡ್ಜರ್ ಪ್ರಕಾರ | ವ್ಯತ್ಯಾಸ |
|---|---|---|---|---|---|
| 1 | CGST Input Tax | ಇತರೆ ಆಸ್ತಿಗಳು | -92,162.00 | 14,84,342.00 | -15,76,504.00 |
| 2 | SGST Input Tax | ಇತರೆ ಆಸ್ತಿಗಳು | -92,162.00 | 13,36,087.00 | -14,28,249.00 |
| 3 | IGST Input Tax | ಇತರೆ ಆಸ್ತಿಗಳು | 3,45,592.00 | 0.00.00 | 3,45,592.00 |
| 4 | GST RCM paid 50%-ITC | ಇತರೆ ಆಸ್ತಿಗಳು | 7,72,689.00 | 0.00.00 | 7,72,689.00 |
| 5 | CGST Output Tax | ಇತರೆ ಜವಾಬ್ದಾರಿಗಳು | 2,03,342.00 | 55,827.00 | 1,47,515.00 |
| 6 | SGST Output Tax | ಇತರೆ ಜವಾಬ್ದಾರಿಗಳು | 2,03,342.00 | 55,827.00 | 1,47,515.00 |
| 7 | IGST Output Tax | ಇತರೆ ಜವಾಬ್ದಾರಿಗಳು | 296.00 | 0.00 | 296.00 |

| | | |
|---|---|---|
| | 18 | ಬ್ಯಾಂಕಿನ ಉಪನಿಯಮ ರೀತ್ಯ ನಿವೃತ್ತ ಸಿಬ್ಬಂದಿಗಳ ಗ್ರಾಚ್ಯುಟಿ ಸೌಲಭ್ಯ ಪಾವತಿಗೆ ಎಲ್.ಐ.ಸಿ ಯಲ್ಲಿ ನಿಧಿ ನಿರ್ವಹಣೆಯಾಗಿ ಪಾವತಿಸಿಕೊಂಡು ಬರಲಾಗಿದೆ. ಈ ಗ್ರಾಚ್ಯುಟಿ ಟ್ರಸ್ಟ್ ವಹಿವಾಟನ್ನು ಆದಾಯ ತೆರಿಗೆ ಕಾಯ್ದೆಯನ್ವಯ ಅನುಮೋದನೆ ಪಡೆಯಲು ಸೂಚಿಸಿದೆ. |

| 56 | ಲೆಕ್ಕಪರಿಶೋಧನಾ ಫಲಿತಾಂಶ ಹಾಗೂ ಕ್ರಮವಿಡಬೇಕಾದ ಕಂಡಿಕೆಗಳು | | |
|---|---|---|---|
| ಕ್ರ.ಸ | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ | ನ್ಯೂನತೆಯ ಸಂಕ್ಷಿಪ್ತ ವಿವರ |
| 01 | 8.ಸಿ | 38 | ಹಿಂದಿನ ಹಲವು ಸಾಲುಗಳಿಂದ ಮುಂದುವರೆದಿರುವ ಗಂಭೀರ ಸ್ವರೂಪದ ಆಕ್ಷೇಪಣೆಗಳನ್ನು ಸರಿಪಡಿಸಲು ವಿಶೇಷ ಪ್ರಯತ್ನ ನಡೆಸುವುದು. |
| | ಸಮಜಾಯಿಷಿ | | ಗಂಭೀರ ಸ್ವರೂಪದ ನ್ಯೂನತೆಗಳಲ್ಲಿ ಪ್ರಮುಖವಾಗಿ, ದೀರ್ಘ ಅವಧಿಯಿಂದ ಬಾಕಿಯಿರುವ ಸುಸ್ತಿ ವಸೂಲಾತಿಗೆ ಸಂಬಂಧಿಸಿದವುಗಳಾಗಿರುತ್ತದೆ. ಪ್ರಮುಖವಾಗಿ ಮಾಜಿ ನಿರ್ದೇಶಕರಾದ ಶ್ರೀ ಎಂ.ಎಸ್.ಪಾಪಣ್ಣರವರಿಂದ ಸುಸ್ತಿ ಮೊಬಲಗು ವಸೂಲಾಗಬೇಕಾಗಿದ್ದು, ಈ ಸಂಬಂಧ ನ್ಯಾಯಾಲಯದಲ್ಲಿ ಕೆಲ ತಕರಾರುಗಳು ಪ್ರಶ್ನಿತವಾಗಿ ಇತ್ಯರ್ಥಕ್ಕೆ ಬಾಕಿಯಿರುತ್ತದೆ. ಇದರೊಂದಿಗೆ ಏಕಕಾಲಿಕ ತೀರುವಳಿಯಡಿ ಬರಬೇಕಾದ ಬಾಬ್ತಿನಲ್ಲಿ ವಸೂಲಾತಿಗೆ ಕ್ರಮವಿಟ್ಟಿದ್ದು, ಕೆಲ ಬಾಬ್ತುಗಳು ವಸೂಲಾಗಿರುತ್ತದೆ. |
| 02 | 21 | 42 | ಅವಧಿ ಮೀರಿದ ಬ್ಯಾಂಕ್ ಗ್ಯಾರೆಂಟಿಗಳನ್ನು ರದ್ದುಗೊಳಿಸಲು ಕ್ರಮವಿಡತಕ್ಕದ್ದು. |
| | ಸಮಜಾಯಿಷಿ | | ಈ ಮೊಬಲಗು ವಾಪಾಸಾತಿಗೆ ಕ್ರಮವಿಟ್ಟಿದ್ದು, ಅವಧಿಗೂ ಮೀರಿ ವಾಪಸ್ ಪಡೆಯದಿದ್ದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯನ್ವಯ **DEA Fund** ಖಾತೆ ವರ್ಗಾವಣೆಗೆ ಕ್ರಮವಿಡಲಾಗುವುದು. |
| 03 | 26 (I) | 45 | ನಿಧಿಗಳ ಬಳಕೆಗಳಿಗೆ 114ನೇ ಉಪವಿಧಿಯನ್ವಯ ಒಳನಿಯಮಗಳನ್ನು ರಚಿಸಿಕೊಳ್ಳುವುದು ಹಾಗೂ ಮಾರ್ಗಸೂಚಿಗಳನ್ವಯ ಬಳಸಿಕೊಳ್ಳುವುದು. |
| | ಸಮಜಾಯಿಷಿ | | ಹಾಲಿ ಆಡಳಿತ ಮಂಡಳಿ ತೀರ್ಮಾನದಂತೆ ಇತಿಮಿತಿಯಲ್ಲಿ ನಿಧಿಗಳ ಬಳಕೆ ಮಾಡಲಾಗುತ್ತಿದೆ. ಆದಾಗ್ಯೂ ಲೆಕ್ಕಪರಿಶೋಧಕರ ಸಲಹೆ ಪಾಲನೆಗೆ ಕ್ರಮವಿಡಲಾಗುವುದು. |
| 04 | 27 ಇ (2) | 46 | ಸಾಲದ ಖಾತೆದಾರರಿಂದ ದಾಸ್ತಾನಿನ ಬಗ್ಗೆ ನಿಯತಕಾಲಿಕ ಮಾಹಿತಿ ಹಾಗೂ ಅವರ ಆಸ್ತಿ ಜವಾಬ್ದಾರಿ ಬಗ್ಗೆ ಸಾಲದ ಅರ್ಜಿಗಳಲ್ಲಿ ವಿವರ ಪಡೆಯಲು ಕ್ರಮವಿಡತಕ್ಕದ್ದು. |
| | ಸಮಜಾಯಿಷಿ | | ವರದಿ ಸಾಲಿನಲ್ಲಿ ದಾಸ್ತಾನಿನ ಆಧಾರದ ಮೇಲೆ ಯಾವುದೇ ಸಾಲ ನೀಡಿರುವುದಿಲ್ಲ. ವ್ಯಾಪಾರಾಭಿವೃದ್ಧಿ ಸಂಬಂಧದ ಸಾಲಗಳನ್ನು ಸ್ವತ್ತಿನ ಆಧಾರದ ಮೇಲೆ ನೀಡಲಾಗುತ್ತಿದ್ದು, ವಾರ್ಷಿಕ ನಿಯತಕಾಲಿಕೆಗಳಾದ ಲೆಕ್ಕಪರಿಶೋಧಿಸಲ್ಪಟ್ಟ ಆಸ್ತಿ ಜವಾಬ್ದಾರಿ ತಃಖ್ತೆ ವಿವರಗಳ ದೃಢೀಕರಣವನ್ನು ಪಡೆಯಲು ಕ್ರಮವಿಡಲಾಗಿದೆ. |
| 05 | 27 ಇ (3) | 46 | ರೂ.10.00 ಲಕ್ಷ ಹಾಗೂ ಅದಕ್ಕಿಂತ ಹೆಚ್ಚಿಗೆ ಸಾಲ ಮಂಜೂರು ಮಾಡಿದ ಪ್ರಕರಣಗಳಲ್ಲಿ ಲೆಕ್ಕಪರಿಶೋಧಿತ ಹಣಕಾಸಿನ ತಃಖ್ತೆಗಳನ್ನು ಪಡೆಯುವುದು. |
| | ಸಮಜಾಯಿಷಿ | | ಬಹುತೇಕ ಪ್ರಕರಣಗಳಲ್ಲಿ ಪಡೆಯಲಾಗುತ್ತಿದ್ದು ಲೆಕ್ಕಪರಿಶೋಧಕರು ಗುರುತಿಸಿರುವ ಪ್ರಕರಣಗಳಲ್ಲಿ ಆ ಮುಂದಿನ ಸಾಲುಗಳ ತಃಖ್ತೆಗಳನ್ನು ನೀಡುವಂತೆ ಸಾಲಗಾರರನ್ನು ಕೋರಿ ಕ್ರಮವಿಡಲಾಗುವುದು. |
| 06 | 27 ಇ (5) | 47 | ಸಾಲ ಮಂಜೂರಾತಿ ಪೂರ್ವದಲ್ಲಿ ಮಾತ್ರ ಸಾಲಕ್ಕೆ ಆಧಾರ ನೀಡಿರುವ ಭದ್ರತೆಗಳನ್ನು ಪರಿಶೀಲಿಸಲಾಗುತ್ತಿದ್ದು, ಸಾಲ ನೀಡಿದ ನಂತರದಲ್ಲಿ ಕೂಡ ಇವುಗಳ ಭೌತಿಕ ಪರಿಶೀಲನೆ ಮಾಡುವ ಪದ್ಧತಿ ಅಳವಡಿಸಿಕೊಳ್ಳುವುದು ಸೂಕ್ತ. |
| | ಸಮಜಾಯಿಷಿ | | ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಿದ್ದು, ಕ್ರಮವಿಡಲಾಗುವುದು. ಮೂರು ವರ್ಷಕ್ಕೊಮ್ಮೆ ಸ್ವತ್ತಿನ ಮರುಮೌಲ್ಯಮಾಪನ ಮಾಡಿಸುವ ಪದ್ಧತಿ ಜಾರಿಯಲ್ಲಿರುತ್ತದೆ. |
| 07 | 27 ಇ (7) | 47 | ಸಾಲ ವಿತರಣೆಯಲ್ಲಿ ಉಪಯುಕ್ತತೆ (end use) ಜಾರಿ ಮಾಡುವ ಬಗ್ಗೆ ಹೆಚ್ಚಿನ ಗಮನ ಹರಿಸುವುದು. |
| | ಸಮಜಾಯಿಷಿ | | ಸಾಲಗಾರರಿಗೆ ತಮ್ಮ ಉದ್ದೇಶಗಳಿಗೆ ತಕ್ಕಂತೆ ಸಾಲ ಬಳಕೆಗೆ ತಿಳುವಳಿಕೆ ನೀಡಲಾಗುತ್ತಿದ್ದು ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಿದೆ. |
| 08 | 27 ಎಫ್ (xi) | 48 | ದಿನಾಂಕ 31.03.2024ಕ್ಕೆ 147 ಪ್ರಕರಣಗಳಲ್ಲಿ ರೂ.1696.41 ಲಕ್ಷ ಅನುತ್ಪಾದಕ ಸಾಲಗಳಿದ್ದು, ಈ ಸಾಲಗಳ ವಸೂಲಾತಿಗಾಗಿ ಕ್ರಮ ಕೈಗೊಳ್ಳಲಾಗಿದ್ದು, ವಸೂಲಾತಿಗಾಗಿ ಹೆಚ್ಚಿನ ಒತ್ತು ನೀಡಬೇಕಾಗಿರುತ್ತದೆ. |
| | ಸಮಜಾಯಿಷಿ | | ಈ ಪೈಕಿ ಕೆಲ ಪ್ರಕರಣಗಳಲ್ಲಿ ಈ ಹಿಂದಿನ ಮಹಾಸಭೆಗಳ ತೀರ್ಮಾನದಂತೆ ಸೂಕ್ತ ರಿಯಾಯಿತಿ **(Concession Settlement)** ನೀಡಿ, ಕೆಲ ಪ್ರಕರಣಗಳನ್ನು ಅಖೈರುಗೊಳಿಸಲಾಗಿದ್ದು, ಇದಕ್ಕೆ ಮಹಾಸಭೆ ಅನುಮೋದನೆ ನೀಡಿರುತ್ತದೆ. ಉಳಿದ ಪ್ರಕರಣಗಳಲ್ಲಿ ಸುಸ್ತಿದಾರರು ಬ್ಯಾಂಕಿನ ಸಂಪರ್ಕಕ್ಕೆ ಬಂದಲ್ಲಿ ನಿಯಮಾನುಸಾರ ಕ್ರಮವಿಡಲಾಗುತ್ತಿದೆ. ಇನ್ನೂ ಕೆಲ ಪ್ರಕರಣಗಳು ನ್ಯಾಯಾಲಯದ ವ್ಯಾಪ್ತಿಯಲ್ಲಿ ಪ್ರಶ್ನಿತವಾಗಿ ವಸೂಲಾತಿಗೆ ಕ್ರಮವಿಡಲಾಗಿದೆ. |
| 09 | 28.3 | 50 | ಬ್ಯಾಂಕಿನ ಗ್ರಾಸ್ ಅನುತ್ಪಾದಕ ಆಸ್ತಿ ಶೇಕಡ ಶೇ.17.71 ಇದ್ದು, ಸುಸ್ತಿ ವಸೂಲಾತಿಗೆ ತೀವ್ರ ಗಮಹರಿಸಿ ಅನುತ್ಪಾದಕ ಆಸ್ತಿ ಕಡಿಮೆಗೊಳಿಸಲು ಕ್ರಮವಿಡತಕ್ಕದ್ದು. |
| | ಸಮಜಾಯಿಷಿ | | ಕಳೆದ ಸಾಲಿಗೆ ಹೋಲಿಸಿದಲ್ಲಿ ಅನುತ್ಪಾದಕ ಪ್ರಮಾಣ ಅಲ್ಪ ಪ್ರಮಾಣದಲ್ಲಿ ಏರಿಕೆ ಕಂಡಿರುತ್ತದೆ. ಆದಾಗ್ಯೂ ಇದರ ವಸೂಲಾತಿಗೆ ಕ್ರಮವಿಟ್ಟಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ ಕೂಡ ತ್ರೈ ಮಾಸಿಕ ಪ್ರಗತಿ ವಿವರವನ್ನು ಪರಾಮರ್ಶಿಸುತ್ತಿದೆ. |

| | | | |
|---|---|---|---|
| 10 | 30 | 51 | ಮಾಜಿ ನಿರ್ದೇಶಕರಾದ ದಿ|| ಎಂ.ಎಸ್.ಪಾಪಣ್ಣ ಮತ್ತವರ ಕುಟುಂಬದವರಿಂದ ಬರಬೇಕಾದ ಸುಸ್ತಿ ಸಾಲ ವಸೂಲಿಗೆ ತ್ವರಿತಗತಿಯ ಕ್ರಮ ಅತ್ಯಗತ್ಯ. |
| | ಸಮಜಾಯಿಷಿ | | ಹಿಂದಿನ ಸಾಲುಗಳಿಂದ ಮುಂದುವರಿದ ನ್ಯೂನತೆಗಳಲ್ಲಿ ಈ ಅಂಶವೂ ಒಂದಾಗಿದ್ದು ವಸೂಲಾತಿಗೆ ಮೌಲ್ಯವುಳ್ಳ ಸ್ವತ್ತು ಬ್ಯಾಂಕಿನ ಸುಪರ್ದಿಯಲ್ಲಿದ್ದು, ವಿಲೇವಾರಿಗೆ ನ್ಯಾಯಾಲಯದ ವ್ಯಾಪ್ತಿಯಲ್ಲಿ ಪ್ರಶ್ನಿತವಾಗಿ ನ್ಯಾಯಾಲಯದ ತೀರ್ಪಿಗನುಗುಣವಾಗಿ ಕ್ರಮವಿಡಲಾಗುವುದು. |
| 11 | 48(i) | 58 | ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ Cyber Security Policy ಬಗ್ಗೆ ವಿಶೇಷ ಆದ್ಯತೆ ನೀಡತಕ್ಕದ್ದು. |
| | ಸಮಜಾಯಿಷಿ | | **ಈ ಬಗ್ಗೆ ವಿಶೇಷ ಕಾಳಜಿ ವಹಿಸಲಾಗಿದೆ. ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಕೂಡ ಇದರ ಮೇಲ್ವಿಚಾರಣೆ ನಡೆಸುತ್ತಿದ್ದು, Cyber Security Policy ಹೊಂದಿ, ಈ ಸಂಬಂಧ ಅವಶ್ಯವಿರುವ Vulnerability Assessment Penetratoion Testing (VAPT), Firewall, Antivirus ಇತ್ಯಾದಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದರ ಮೇಲ್ವಿಚಾರಣೆಗೆ ವೃತ್ತಿಪರ ಸಿಬ್ಬಂದಿ ನೇಮಕಾತಿಗೆ ಕೂಡ ಕ್ರಮವಿಡಲಾಗಿದೆ.** |
| 12 | 48(ii) | 58 | ಲಾಕರ್ ವ್ಯವಸ್ಥೆ, ಸಾಲದ ಮಂಜೂರಾತಿ ಸಮಯದಲ್ಲಿ ಸಾಲದ ವರ್ಗೀಕರಣ, ಖಾತೆ ತೆರೆಯುವ ಸಂದರ್ಭದಲ್ಲಿ ಕೆ.ವೈ.ಸಿ ಪಾಲನೆ ಹಾಗೂ ಗ್ರಾಹಕರಿಗೆ ನೀಡಬೇಕಾದ Customer ID, ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕಾದ ನಿಯತಕಾಲಿಕೆಗಳ ಪಾಲನೆ ಇತ್ಯಾದಿಗಳ ಕಡ್ಡಾಯ ಪಾಲನೆಗೆ ಸೂಚಿಸಿದೆ. |
| | ಸಮಜಾಯಿಷಿ | | ಆರ್.ಬಿ.ಐ ನಿರ್ದೇಶನದಂತೆ ಕೆ.ವೈ.ಸಿ ಗಳ ಪಾಲನೆಯಾಗದಿದ್ದಲ್ಲಿ ಖಾತೆಗಳ ವಹಿವಾಟಿನ ಮೇಲೆ ಆಗಬಹುದಾದ ತೊಡಕುಗಳ ಬಗ್ಗೆ ಸರ್ವಸದಸ್ಯರಿಗೆ ಕಾಲಕಾಲಕ್ಕೆ ಮಾಹಿತಿ ನೀಡಲಾಗುತ್ತಿದೆ. ಕೆ.ವೈ.ಸಿ ಪಾಲನೆ ಲಾಖರ್ ನಿರ್ವಹಣೆಗೂ ಅಗತ್ಯವಾಗಿದ್ದು, ಇದರೊಂದಿಗೆ ಅಗ್ರೀಮೆಂಟ್‌ಗಳನ್ನು ಹೊಸದಾಗಿ ನವೀಕರಿಸಲಾಗುತ್ತಿದೆ. ಆದಾಗ್ಯೂ ಸಾಕಷ್ಟು ಗ್ರಾಹಕರ ಖಾತೆಗಳಲ್ಲಿ ಕೆ.ವೈ.ಸಿ ಕೊರತೆಯಿರುವುದನ್ನು ಲೆಕ್ಕಪರಿಶೋಧಕರು ಗಮನಿಸಿದ್ದು, ಪಾಲನೆಗೆ ಕ್ರಮವಹಿಸುತ್ತಾ ಬರಲಾಗಿದೆ. |
| 13 | 51 (viii) | 59 | ದಿನಾಂಕ 31.03.2024ಕ್ಕೆ ಬ್ಯಾಂಕಿನ CRAR ಪ್ರಮಾಣವು ಶೇ.44.71 ರಷ್ಟು ಇದ್ದು, ಇದು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಕನಿಷ್ಠ ಪ್ರಮಾಣಕ್ಕಿಂತ ಬಹಳ ಹೆಚ್ಚಿಗೆ ಇದ್ದು, ಈ ಬಗ್ಗೆ ನಿಗಾವಹಿಸತಕ್ಕದ್ದು. |
| | ಸಮಜಾಯಿಷಿ | | ಬ್ಯಾಂಕಿನಲ್ಲಿನ ಸ್ವಂತ ಬಂಡವಾಳ ಹಾಗೂ ನಿಧಿಗಳ ಪ್ರಮಾಣ ಹೆಚ್ಚುವರಿಯಿರುವುದರಿಂದ CRAR ಪ್ರಮಾಣ ಅಗತ್ಯಕ್ಕಿಂತ ಹೆಚ್ಚುವರಿ ಲಭ್ಯವಿರುತ್ತದೆ. ಲಭ್ಯತೆಗನುಗುಣವಾದ ಮೊಬಲಗನ್ನು ಗುಣಮಟ್ಟದ ಹಾಗೂ ಆದ್ಯತಾ ವಲಯದ ಸಾಲ ನೀಡುವಿಕೆಗೆ ಬಳಸಲಾಗುತ್ತಿದೆ. ಈ ಸಂಬಂಧ ವಿವಿಧ ರೀತಿಯ ಸಾಲ ಸೌಲಭ್ಯಗಳ ವಿತರಣೆಗೆ ಆದ್ಯತೆ ನೀಡಲಾಗುತ್ತಿದೆ. |
| 14 | 51 (ix) | 60 | ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತಂದಿರುವ ಇತರೆ ವಿಷಯಗಳ ಬಗ್ಗೆ ಗಮನಹರಿಸುವುದು |
| | ಸಮಜಾಯಿಷಿ | | ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ವಯ ಸಾಲ ನೀಡುವಿಕೆಗೆ ಮೊದಲು ಸಿಬಿಲ್ ಮುಂತಾದ ಸಂಸ್ಥೆಗಳ ಮಾಹಿತಿ ವಿನಿಮಯ, ಕೆ.ವೈ.ಸಿ ಪಾಲನೆ, ಟಿಡಿಎಸ್/ಜಿಎಸ್‌ಟಿ ನಿಯಮ ಪಾಲನೆ, ಪಡೆದ ಸಾಲದ ಉದ್ದೇಶದ ಸದುಪಯೋಗ ಪರಿಶೀಲನೆ, ಸ್ವತ್ತುಗಳ ನಿಯತಕಾಲಿಕ ಮರುಮೌಲ್ಯ ಮಾಪನ/ಪರಿಶೀಲನೆಗಳ ಬಗ್ಗೆ ಗಮನಿಸಲು ಸೂಚಿಸಿದ್ದು ಕ್ರಮವಿಡಲಾಗಿರುತ್ತದೆ. ಬ್ಯಾಂಕಿನ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಆರ್.ಬಿ.ಐ ಸುತ್ತೋಲೆಗಳಂತೆ ಮಾರ್ಗದರ್ಶನ ಹಾಗೂ ತಾಂತ್ರಿಕ ಕೌಶಲ್ಯತೆಗಳ ಬಳಕೆಗೆ ಉತ್ತೇಜಿಸಲಾಗುತ್ತಿದೆ. |
| 15 | 54 (i) | 61 | ಆಡಳಿತ ಮಂಡಳಿ ಸದಸ್ಯರುಗಳಿಗೆ ಬ್ಯಾಂಕಿಂಗ್ ಮತ್ತು ಹಣಕಾಸು ನಿರ್ವಹಣೆ ಹಾಗೂ ಇತರೆ ಕ್ಷೇತ್ರಗಳಲ್ಲಿ ನುರಿತ ತಜ್ಞರಿಂದ ತರಬೇತಿ ಮಾರ್ಗದರ್ಶನ ಪಡೆಯುವ ಅವಶ್ಯವಿದ್ದು, ಇದನ್ನು ಬಳಸಿಕೊಳ್ಳಲು ಸೂಚಿಸಿದೆ. |
| | ಸಮಜಾಯಿಷಿ | | ಲೆಕ್ಕಪರಿಶೋಧಕರ ಸಲಹೆಯಂತೆ ಬ್ಯಾಂಕಿಂಗ್ ನಿರ್ವಹಣೆಯ ನುರಿತ ತಜ್ಞರಿಂದ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಕ್ರಮವಿಡಲಾಗಿದೆ. ಅಲ್ಲದೇ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಹಾಗೂ ಇತರೆ ಸಂಸ್ಥೆಗಳು ನಡೆಸುವ ಎಲ್ಲಾ ಕಾರ್ಯಾಗಾರಗಳಲ್ಲಿ ಅಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ. ಇನ್ನೂ ಹೆಚ್ಚಿನ ತರಬೇತಿಗೆ ಲೆಕ್ಕಪರಿಶೋಧಕರು ಸೂಚಿಸಿದ್ದು, ಈ ಬಗ್ಗೆ ಕ್ರಮವಿಡಲಾಗುವುದು. |

| | | | |
|---|---|---|---|
| 57 | ಲೆಕ್ಕಪರಿಶೋಧನಾ ವರ್ಗೀಕರಣ | | |
| | ಎ) | ಹಿಂದಿನ ಸಾಲಿಗೆ ಲೆಕ್ಕಪರಿಶೋಧನಾ ವರ್ಗೀಕರಣ | ''ಎ'' ಶ್ರೇಣಿ |
| | ಬಿ) | ವರದಿ ಸಾಲಿಗೆ ಲೆಕ್ಕಪರಿಶೋಧನಾ ವರ್ಗೀಕರಣ | ''ಎ'' ಶ್ರೇಣಿ |

**ಆರ್‌ಎಸ್‌ಟಿ & ಕಂಪನಿ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಸಂಸ್ಥೆ ನೋಂ.ಸಂಖ್ಯೆ 013239s**
**ಸಹಿ:-**
**(ಸಿ.ಎ ಭರತ್‌ರಾವ್ ಕೆ.ಎಸ್)**
**ಸದಸ್ಯತ್ವ ಸಂಖ್ಯೆ 225659**

**ಸ್ಥಳ: ಬೆಂಗಳೂರು**
**ದಿನಾಂಕ : 28.06.2024**

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಪ್ರಧಾನ ಕಛೇರಿ : ನಂ.2, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,**
**ಬೆಂಗಳೂರು-560 018. ದೂ: 26679041, 26677552, 42047786, 7411414285**

## ನಿವ್ವಳ ಲಾಭದ ಹಂಚಿಕೆ

**(ಸಹಕಾರ ಸಂಘಗಳ ಕಾಯ್ದೆ ಕಲಂ 57, ನಿಯಮ 22, ಉಪನಿಯಮ ಸಂಖ್ಯೆ 109 ರ ರೀತ್ಯಾ)**

**ವಿಷಯ-9: 2023-24 ನೇ ಸಾಲಿನ ನಿವ್ವಳ ಲಾಭವನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿದೆ.**

| ವಿವರ | | 2023-24ನೇ ಸಾಲಿಗೆ ಹಂಚಿಕೆ |
|---|---|---|
| 01. ಆಪದ್ಧನ ನಿಧಿ (ಶೇ.25 ರಂತೆ) | ಶೇ.25 | 68,04,125.69 |
| ಜಾತ ಉಳಿದ ಲಾಭಾಂಶ ಮೊಬಲಗು ರೂ.2,04,12,377/- ಗಳ ಮೇಲೆ | | |
| 02. ಸಹಕಾರ ಶಿಕ್ಷಣ ನಿಧಿ (ಸಹಕಾರ ಮಹಾಮಂಡಳ ನಿ.,) (ಶೇ.2 ರಂತೆ) | ಶೇ.2 | 4,08,248.00 |
| 03. ಸಹಕಾರ ಶಿಕ್ಷಣ ನಿಧಿ (ಸ.ಪ.ಬ್ಯಾ. ಮಹಾಮಂಡಳ ನಿ.,) (ಶೇ.1 ರಂತೆ) | ಶೇ.1 | 2,04,124.00 |
| ಜಾತ ಉಳಿದ ಲಾಭಾಂಶ ರೂ.1,98,00,005/- ಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿದೆ | | |
| 04. ಸದಸ್ಯರ ಕ್ಷೇಮ ನಿಧಿ (ಶೇಕಡಾ 10ಕ್ಕೆ ಮಿರದಂತೆ) | ಶೇ.1.31 | 2,60,366.00 |
| 05 ಮರಣ ಪರಿಹಾರ ನಿಧಿ (ಶೇಕಡಾ 10ಕ್ಕೆ ಮಿರದಂತೆ) | ಶೇ.1 | 1,98,000.00 |
| 06. ಸಿಬ್ಬಂದಿ ಕ್ಷೇಮ ನಿಧಿ (ಶೇಕಡಾ 5ಕ್ಕೆ ಮಿರದಂತೆ) | ಶೇ.1 | 1,98,000.00 |
| 07. ಮಹೋತ್ಸವ ನಿಧಿ (ಶೇಕಡಾ 10ಕ್ಕೆ ಮಿರದಂತೆ) | ಶೇ.1 | 1,98,000.00 |
| 08. ಸದಸ್ಯರುಗಳಿಗೆ ಡಿವಿಡೆಂಡ್ * (ಷೇರು ಬಂಡವಾಳಕ್ಕೆ ಶೇ.20 ರಂತೆ) | ಶೇ.20 | 1,69,63,667.00 |
| 09. ಸಿಬ್ಬಂದಿಗಳಿಗೆ ಎಕ್ಸ್‌ಗ್ರೇಷಿಯಾ (ಬೋನಸ್ ಕಾಯ್ದೆಯಂತೆ) | | 19,81,972.00 |
| **ಒಟ್ಟು** | | **2,72,16,502.69** |

**(* ವಾರ್ಷಿಕ ಮಹಾಸಭೆ ಅನುಮತಿ ಪಡೆದು)**

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

## ಆಯವ್ಯಯ ಅಂದಾಜು ಪಟ್ಟಿ

**ವಿಷಯ-10ಃ**

**2023-24 ನೇ ಸಾಲಿನಲ್ಲಿ ಕೆಲವು ಬಾಬ್ತುಗಳಲ್ಲಿ ಆಗಿರುವ ಹೆಚ್ಚುವರಿ ಖರ್ಚುಗಳನ್ನೊಳಗೊಂಡಂತೆ**

**2024-25 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿ ಮಂಜೂರಾತಿ ಪಡೆಯುವುದು**

| ವಿವರ | 2023-24ನೇ ಸಾಲಿಗೆ ಮಂಜೂರಾತಿ ಪಡೆದಿರುವುದು | 2023-24ನೇ ಸಾಲಿನಲ್ಲಿ ಖರ್ಚಾಗಿರುವುದು | 2023-24ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾಗಿರುವುದು | 2024-25ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ |
|---|---|---|---|---|
| 01 ಸಿಬ್ಬಂದಿ ಖರ್ಚು, ಭವಿಷ್ಯ ನಿಧಿ ವಗ್ಗೈರೆ ಪಾವತಿಗಳು | 4,50,00,000.00 | 3,56,47,123.64 | 0.00 | 4,50,00,000.00 |
| 02 ಮುದ್ರಣ ಲೇಖನ ಹಾಗೂ ಗಣಕಯಂತ್ರ ಸಾಮಗ್ರಿ | 4,00,000.00 | 3,73,879.32 | 0.00 | 4,00,000.00 |
| 03 ಚಾರ್ಜಸ್ ಜನರಲ್/ಪೂಜಾ/ಓಡಾಟ ವಗ್ಗೈರೆ | 10,00,000.00 | 9,29,561.99 | 0.00 | 12,00,000.00 |
| 04 ವಿಮೆ ಮತ್ತು ತೆರಿಗೆಗಳು | 30,00,000.00 | 23,26,732.30 | 0.00 | 30,00,000.00 |
| 05 ಕಟ್ಟಡ ತೆರಿಗೆ | 1,50,000.00 | 1,06,634.00 | 0.00 | 1,50,000.00 |
| 06 ಅಂಚೆ ಮತ್ತು ದೂರವಾಣಿ | 6,00,000.00 | 2,82,035.62 | 0.00 | 5,00,000.00 |
| 07 ವಿದ್ಯುತ್‌ಚಕ್ತಿ ವೆಚ್ಚ | 6,50,000.00 | 6,40,552.00 | 0.00 | 8,00,000.00 |
| 08 ಲೆಕ್ಕಪರಿಶೋಧನಾ ಶುಲ್ಕ | 10,00,000.00 | 7,35,000.00 | 0.00 | 10,00,000.00 |
| 09 ಕಟ್ಟಡ ದುರಸ್ತಿ ಹಾಗೂ ನಿರ್ವಹಣೆ | 1,00,00,000.00 | 3,11,751.00 | 0.00 | 80,00,000.00 |
| 10 ಕಾನೂನು ವೆಚ್ಚ | 10,00,000.00 | 2,92,000.00 | 0.00 | 10,00,000.00 |
| 11 ಶಾಖೆಗಳ ಕಟ್ಟಡ ಬಾಡಿಗೆ | 16,00,000.00 | 15,20,393.00 | 0.00 | 25,00,000.00 |
| 12 ಸರ್ವಸದಸ್ಯರ ಸಭೆ ಖರ್ಚು | 20,00,000.00 | 11,01,217.66 | 0.00 | 20,00,000.00 |
| 13 ನಿರ್ದೇಶಕರ ಸಭಾ ಭತ್ಯೆ | 20,00,000.00 | 13,35,000.00 | 0.00 | 25,00,000.00 |
| 14 ಚುನಾವಣಾ ವೆಚ್ಚ | 0.00 | 0.00 | 0.00 | 20,00,000.00 |
| **ಒಟ್ಟು** | **6,84,00,000.00** | **4,56,01,880.53** | **0.00** | **7,00,50,000.00** |

### ಠೇವಣಿ ಹಾಗೂ ಸಾಲಗಳ ಮೇಲಿನ ಬಡ್ಡಿದರ

| ಸಾಲಗಳ ಮೇಲಿನ ಬಡ್ಡಿದರ | | |
|---|---|---|
| ಸ್ಥಿರಾಧಾರ ಸಾಲ | ಶೇ. | 12 |
| "ಬಿ" ಖಾತಾ ಸ್ವತ್ತುಗಳಿಗೆ | ಶೇ. | 14 |
| ಗೃಹ ನಿರ್ಮಾಣ ಸಾಲ | ಶೇ. | 11 |
| ಓವರ್ ಡ್ರಾಫ್ಟ್ | ಶೇ. | 12 |
| ವಿದ್ಯಾಭ್ಯಾಸ ಸಾಲ (ರೂ.2.00 ಲಕ್ಷ) | ಶೇ. | 11 |
| ಚಿನ್ನಾಭರಣ ಸಾಲ | ಶೇ. | 9 |
| ವಾಹನ ಸಾಲ | ಶೇ. | 11 |
| ಆಧಾರ ರಹಿತ ಸಾಲ | ಶೇ. | 16 |

| ಠೇವಣಿಗಳ ಮೇಲಿನ ಬಡ್ಡಿದರ | | |
|---|---|---|
| 91 ದಿವಸದಿಂದ 180 ದಿವಸಗಳವರೆಗೆ | ಶೇ. | 4.5 |
| 181 ದಿವಸದಿಂದ 1 ವರ್ಷದವರೆಗೆ | ಶೇ. | 5.5 |
| 1 ವರ್ಷದಿಂದ 2 ವರ್ಷಗಳವರೆಗೆ | ಶೇ. | 6.5 |
| 2 ವರ್ಷದಿಂದ 3 ವರ್ಷಗಳವರೆಗೆ | ಶೇ. | 7.5 |
| 3 ವರ್ಷ ಮತ್ತು ಮೇಲ್ಪಟ್ಟು | ಶೇ. | 8.0 |

**(ಹಿರಿಯ ನಾಗರೀಕರಿಗೆ ಶೇ. 0.5 ರ ಹೆಚ್ಚುವರಿ ಬಡ್ಡಿ)**

# ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಪ್ರಧಾನ ಕಛೇರಿ : ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18**

## ಬ್ಯಾಂಕಿನಲ್ಲಿನ ಸೌಲಭ್ಯಗಳು

| |
|---|
| ಸಿಬಿಎಸ್ ವ್ಯವಸ್ಥೆ |
| ಎಟಿಎಂ ಡೆಬಿಟ್ ಕಾರ್ಡ್ ಸೌಲಭ್ಯ |
| ವಿವಿಧ ರೀತಿಯ ಸಾಲ ಸೌಲಭ್ಯಗಳು |
| ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರಗಳು |
| ಪಿಗ್ಮಿ ಸಂಗ್ರಹಣೆ |
| ಎಸ್.ಎಂ.ಎಸ್ ಸೌಲಭ್ಯ |
| RTGS/NEFT ಸೌಲಭ್ಯ |
| ಪೇ-ಆರ್ಡರ್ ಸೌಲಭ್ಯ |
| ಮೊಬೈಲ್ ಬ್ಯಾಂಕಿಂಗ್ |
| ಯುಪಿಐ ಪೇಮೆಂಟ್ಸ್ |
| **(POS/E-Com, GPay, PhonePe, Paytm)** |
| **IMPS** |
| ಲಾಖರ್ ಸೌಲಭ್ಯ |

# ಟಿಪ್ಪಣಿಗಾಗಿ


THE GRAIN MERCHANTS' CO-OPERATIVE BANK Ltd
CHAMARAJPET
BANGALORE - 560018
FOUNDER BOARD OF DIRECTORS
1927 - 1928
SRI MANDY HARIYANNA : PRESIDENT
SRI K. NETTAKALLAPPA : VICE-PRESIDENT
SRI K. SHIVAPPA : TREASURER
SRI S. K. NARASIMHAIAH : HON- SECRETARY.
DIRECTORS
SRI M. RAMACHANDRARAO SCINDIA
SRI N. RUDRAIAH
SRI G. RUDRAPPA
SRI SINGAM THIMMAIAH
SRI MYAKALA MALLAIAH
SRI R. P. RANGAPPA
SRI B. NAVAKOTI SETTY
SRI K. SRIKANTAIAH
SRI LAKSHMAIAH REDDY
SRI S. PAPAIAH
SRI P. P. ABDUL REHAMAN SAHEB
SRI K. H. RAMAIAH
REGISTRAR OF CO-OP. SOCIETIES.
MAIN ARCHITECT TO ESTABLISH OUR BANK


THE GRAIN MERCHANTS' CO-OPERATIVE BANK, LIMITED
FOUNDATION STONE
LAID BY
MANDY HARIYANNA, ESQ.,
ON
MONDAY 8TH APRIL 1940.
ಶಾ॥ಶಕ॥೧೮೬೨-ವಿಕ್ರಮಸಂ॥ಚೈ॥ಶು॥೧


THE GRAIN MERCHANTS' CO-OPERATIVE BANK LTD
OPENED BY
J. MOHAMED IMAM, ESQR. B.A., B.L.,
MINISTER FOR EDUCATION.
ON SATURDAY, 25TH OCTOBER 1941.
ಶಾ॥ಶ॥೧೮೬೪-ವಿಷುಸ॥ ಕಾ॥ ಶು॥ ೫.

# THE GRAIN MERCHANTS' CO-OPERATIVE BANK LIMITED

## *FINANCIAL POSITION*

*(Rs. in Lakhs)*

| | | 31.03.2023 | 31.03.2024 |
|---|---|---|---|
| Share Capital | Rs. | 828.15 | 848.18 |
| Deposit | Rs. | 14392.34 | 14418.70 |
| Loans & Advances | Rs. | 10806.36 | 9577.41 |
| Working Funds | Rs. | 22712.18 | 22877.45 |
| Reserve & Other Funds | Rs. | 6654.86 | 6881.24 |
| Investments | Rs | 9584.59 | 11390.09 |
| Net Profit | Rs. | 337.11 | 272.17 |

## *OUR BANKERS*

1. Reserve Bank of India
2. The Karnataka State Co-operative Apex Bank Ltd.
3. H.D.F.C. Bank
4. I.D.B.I. Bank
5. B.D.C.C. Bank

## *BANK PROGRESS CHART*

| Year | Paid-up Share Capital | Deposits | Loans | Working Funds | Reserves & other Funds | Invest-ment | Net Profit | Dividend Percent | Audit Class |
|---|---|---|---|---|---|---|---|---|---|
| 1927-28 | 0.43 | 0.28 | 0.80 | 1.01 | 0.02 | 0.10 | 0.01 | 5.50% | |
| 57-58 | 1.66 | 18.28 | 16.04 | 24.58 | 3.63 | 3.89 | 0.65 | 6.25% | |
| 67-68 | 4.53 | 31.64 | 30.40 | 47.87 | 6.84 | 13.09 | 0.56 | 9.00% | |
| 77-78 | 16.91 | 127.48 | 123.04 | 183.20 | 18.63 | 41.19 | 4.35 | 12.00% | |
| 87-88 | 105.62 | 854.58 | 1106.59 | 1359.02 | 88.21 | 175.94 | 36.58 | 12.00% | |
| 90-91 | 141.60 | 2067.85 | 2286.73 | 2787.42 | 218.07 | 448.77 | 52.46 | 15.00% | |
| 2001-2002 | 450.47 | 9811.96 | 9787.54 | 13756.54 | 1557.69 | 3382.27 | 199.21 | 15.00% | |
| 2002-2003 | 412.94 | 8324.13 | 9317.04 | 12891.81 | 2122.70 | 2697.01 | 201.42 | 9% | |
| 2003-2004 | 409.79 | 8077.86 | 9138.29 | 12172.97 | 2304.67 | 2701.28 | 203.59 | 9% | B |
| 2004-2005 | 431.83 | 8245.07 | 9210.36 | 11897.58 | 2486.33 | 2348.41 | 203.64 | 9% | A |
| 2005-2006 | 402.49 | 6661.03 | 6107.67 | 11395.14 | 3035.67 | 4349.25 | 206.25 | 9% | A |
| 2006-2007 | 412.40 | 6503.92 | 5915.17 | 11012.29 | 3280.16 | 4769.48 | 143.84 | 9% | B |
| 2007-2008 | 416.04 | 5914.13 | 6508.02 | 11444.09 | 3535.91 | 4469.49 | 214.55 | 10% | B |
| 2008-2009 | 438.48 | 6023.21 | 6629.50 | 10746.76 | 3759.37 | 3439.50 | 227.23 | 10% * | B |
| 2009-2010 | 447.40 | 6321.15 | 6167.38 | 11159.35 | 3813.59 | 3969.99 | 87.58 | 10% * | B |
| 2010-2011 | 466.99 | 8095.62 | 6200.15 | 13728.98 | 3883.1 | 6701.02 | 208.11 | 15% * | A |
| 2011-2012 | 514.01 | 8891.97 | 7600.88 | 15130.70 | 4129.72 | 6704.81 | 249.30 | 15% * | A |
| 2012-2013 | 560.25 | 9572.52 | 7937.40 | 15296.43 | 4322.88 | 6275.16 | 279.07 | 15% * | A |
| 2013-2014 | 600.43 | 9984.46 | 7908.32 | 17951.20 | 4596.24 | 6894.72 | 282.14 | 15% * | A |
| 2014-2015 | 607.60 | 10206.04 | 7505.99 | 16446.74 | 4770.47 | 7507.37 | 279.16 | 15% * | B |
| 2015-2016 | 585.11 | 11326.97 | 6209.80 | 17698.77 | 4930.63 | 6569.97 | 105.19 | 8% * | B |
| 2016-2017 | 642.85 | 13408.30 | 8082.23 | 19975.77 | 4927.96 | 9246.17 | 198.49 | 9% * | B |
| 2017-2018 | 752.09 | 13848.45 | 10797.81 | 20950.16 | 5042.36 | 8248.74 | 323.76 | 10% | B |
| 2018-2019 | 775.11 | 14286.10 | 10795.01 | 21605.66 | 5101.28 | 8357.82 | 331.25 | 10% | B |
| 2019 - 2020 | 797.47 | 14758.62 | 10767.04 | 22483.89 | 5718.70 | 8944.07 | 335.78 | **Covid 19** | A |
| 2020-2021 | 829.31 | 14362.73 | 11820.72 | 22239.64 | 6119.25 | 8552.11 | 357.25 | 12% | A |
| 2021-2022 | 839.01 | 14910.84 | 12025.35 | 23115.00 | 5777.10 | 8977.26 | 307.53 | 12% * | A |
| 2022-2023 | 828.15 | 14392.34 | 10806.36 | 22712.18 | 6654.86 | 9584.59 | 337.11 | 15% | A |
| 2023-2024 | 848.18 | 14418.70 | 9577.41 | 22877.45 | 6881.24 | 11390.09 | 272.17 | 20% | A |

**Subject AGM Approval**